ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 33

ಆಗಸ್ಟ್ 17. 2008

ಕನ್ನಡ ವಾರಪತ್ರಿಕೆ

www.janashakthi.org

ರೂ. 5/-

ಮಂಗಳೂರು :



ನೀರಿನ ಹಕ್ಕು ಕೇಳಿದವರ ತಲೆ ಒಡೆದ ಕೇಡಿಗರು

ವಾಹ್ ವಾಹ್ ಚೀನಾ !





ಆಗಸ್ಟ್ ಮಹಾ ಮುಷ್ಕರಕ್ಕೆ ಸಜ್ಜಾಗುತ್ತಿದೆ ಜನತೆ

ಜಮ್ಮು - ಕಾಶ್ಮೀರದಲ್ಲಿ ದಳ್ಳುರಿ

ಮತ್ತೆ 'ಕೋಕಾ'ದ ಅಪಾಯ



ಇತಿಹಾಸದ ಪುಟಕ್ಕೆ ಕಾಂ. ಸುರ್ಜಿತ್

ನೋಟ

ಕತ್ತೆಯೇ ಇಲ್ಲಿ ಕುದುರೆ



ಡಾ. ಜಿ. ಭಾಸ್ಕರ ಮಯ್ಯ

ಉನ್ನತ ಶಿಕ್ಷಣದ ಪಠ್ಯಪುಸ್ತಕಗಳಲ್ಲಿ 'ಭಾರತೀಯ' ಸಂಸ್ಕೃತಿಯನ್ನು ಸೇರಿಸಲು ಅಗತ್ಯವಿರುವ ಎಲ್ಲಾ ಪ್ರಯತ್ನಗಳನ್ನು ರಾಜ್ಯ ಸರಕಾರವು ಕೈಗೊಳ್ಳಲಿದೆಯೆಂದು ಉನ್ನತ (ಅವನತ!) ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಹೇಳಿರುವುದನ್ನು ಗಮನಿಸಿದಾಗ ಇವರು ಹೇಳುವ ಸಂಸ್ಕೃತಿ ಯಾವುದೆಂದು ತಿಳಿಯಲು ಇವರ ಕುಟುಂಬದ ಎನ್‌ಡಿಎ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಸರಣಿ ಅತ್ಯಾಚಾರ ಪ್ರಸಂಗಗಳನ್ನು ನೆನಪಿಸಿಕೊಳ್ಳುವ ಸಲುವಾಗಿ ಆಗ ಸಿದ್ಧವಾಗಿದ್ದ ಲೇಖನ ಈಗ. ಹಾಗೆ.

ಹರಪ್ಪಾದಲ್ಲಿ ಕತ್ತೆಯಂತಹ ಒಂದು ಪುರಾಣ ಕಲ್ಪನೆಯ ಪ್ರಾಣಿಯ ಚಿತ್ರವನ್ನು ಈ ಶಾಸ್ತ್ರಜ್ಞರು 'ಕುದುರೆ' ಎಂದು ಸಾರಿ ಹರಪ್ಪಾ ನಾಗರೀಕತೆಯನ್ನು ವೇದಕಾಲೀನ ಸರಸ್ವತೀ ನದಿ ನಾಗರೀಕತೆಯಾಗಿ ಪರಿವರ್ತಿಸಿದ್ದಾರೆ. ರಾಜಾರಾಮ್ ಮತ್ತು ಡೇವಿಡ್ ಫ್ರಾಲಿಯ ಈ ಕೊಳಕು ಕಂಪ್ಯೂಟರ್ ಕಿತಾಪತಿಯನ್ನು Frontline ಪತ್ರಿಕೆ ಬಯಲಿಗೆಳೆದಿದೆ. ಈ ಪುರಾತತ್ವ ಶಾಸ್ತ್ರಜ್ಞರಿಗೆ ಬಾಬ್ರಿ ಮಸೀದಿಯ ಕೆಳಗೆ ಪರಿಪೂರ್ಣ ರಾಮಮಂದಿರ ಕಾಣಿಸುತ್ತದೆ. ಸಾಕ್ಷಿ ಆಧಾರ ಯಾರಿಗೆ ಬೇಕು? ಇವರು ಹೇಳಿದ್ದೇ ವೇದವಾಕ್ಯ. ಇಲ್ಲಿ Transperency ಎಂಬುದು ಯಾವ ಮೂಲೆಯಲ್ಲೂ ಇಲ್ಲ.

ಎಎಸ್‌ಐ ಮಾಡಿದ ಒಂದು ಘನ ಕಾರ್ಯವೆಂದರೆ ಸುಪ್ರಸಿದ್ಧ ಅಕ್ಬರನ ಅರಮನೆಯಾದ ಫತ್ತೇಪುರ ಸಿಕ್ರಿಯಲ್ಲಿ ಉತ್ಖನನ ನಡೆಸಿದ್ದು! ಬ್ರಿಟಿಷರ ಕಾಲದಲ್ಲಿ ಎಲ್ಲೆಂದರಲ್ಲಿ ಉತ್ಖನನ ನಡೆಸುವಂತಿರಲಿಲ್ಲ. ಅತಿ ಕಠಿಣ ಕಾನೂನು ಅಡಚಣೆಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಾದಲ್ಲಿ ಮಾತ್ರ ಉತ್ಖನನ ನಡೆಸಲು ಅನುಮತಿ ದೊರಕುತ್ತಿತ್ತು. ಫತ್ತೇಪುರ ಸಿಕ್ರಿಯಂತೂ ಅತ್ಯಂತ ಮಹತ್ವದ ಪ್ರಾಚೀನ ಸ್ಮಾರಕ. ಅಕ್ಬರ ಯಾ ಔರಂಗಜೇಬನು ಜೈನ ಮಂದಿರಗಳನ್ನು ನಾಶಮಾಡಲು ಕಾರಣರಿರಬಹುದೇ ಎಂಬುದನ್ನು ಪತ್ತೆ ಹಚ್ಚಲು ಭಾರತೀಯ ಪುರಾತತ್ವ ಇಲಾಖೆ ಇಲ್ಲಿ ಉತ್ಖನನ ನಡೆಸಿ, ಅಂಥ ಮಹತ್ವಪೂರ್ಣ ಸ್ಮಾರಕವನ್ನು ಹಾನಿಗೊಳಿಸಿದೆ.

ಖಂಡನೆಯ ಅಪಮಾನ

1994 ರಲ್ಲಿ ನಡೆದ ವಿಶ್ವಪುರಾತತ್ವ ಸಮ್ಮೇಳನದಲ್ಲಿ ಭಾರತದ ಈ ಅಕ್ರಮಗಳನ್ನು ತೀವ್ರವಾಗಿ ಖಂಡಿಸಲಾಯಿತು. ಭಾರತದ ಎಎಸ್‌ಐಯನ್ನು ಅನೂರ್ಜಿತಗೊಳಿಸುವ ಒತ್ತಾಯವನ್ನೂ ತರಲಾಯಿತು. ಒಟ್ಟಿನಲ್ಲಿ ಗುಳೇಬಿದ್ದು ಹೋದ ಈ ಪುರಾತತ್ವ ವಿಭಾಗ ಭಾರತದ ಫ್ಯಾಸಿಸ್ಟರ ಒಂದು ಶಸ್ತ್ರ ಹಾಗೂ ಅವರ ಕಾರ್ಯತಂತ್ರದ ಒಂದು ಪ್ರಮುಖ ಅಂಗ. ಪ್ರಪಂಚದ ಪುರಾತತ್ವಶಾಸ್ತ್ರಜ್ಞರಿಗೆ ಭಾರತದ ಈ ಇಲಾಖೆ ಒಂದು Laughing Stock. ಈ ಐತಿಹಾಸಿಕ ದುರಂತ ಭಾರತೀಯರಾದ ನಮಗೆ ಸರ್ವನಾಶದ ಕರೆಗಂಟೆಯೆಂಬುದರಲ್ಲಿ ಯಾವುದೇ ಸಂಶಯವಿಲ್ಲ.

ದೇಶದ, ಹೊರ ದೇಶದ ಯಾವುದೇ ಪ್ರಗತಿಶೀಲ ವಿಚಾರವಿರಲಿ ಅದರ ಮೇಲೆ ಪ್ರತಿಬಂಧ: ಇಂದಿನ ಭಾರತ ಎಷ್ಟರ ತನಕ ಫ್ಯಾಸಿಸ್ಟ್‌ಮಯವಾಗಿದೆಯೆಂದರೆ ಅದಕ್ಕೆ ಸತ್ಯವನ್ನು ಕನಸಿನಲ್ಲಿ ಕಂಡರೂ ಭಯ. ಅದಕ್ಕಾಗಿಯೇ ಅದು ವಿಶ್ವದ ತಜ್ಞರನ್ನು ಯಾವುದೇ ವಿಶೇಷ ಶಾಸ್ತ್ರದ ಬಗ್ಗೆ ಮಾತನಾಡಲು, ಆಹ್ವಾನಿಸಲು ಬಿಡುವುದಿಲ್ಲ. ಅವರಿಗೆ ಅವಕಾಶ ಕೊಡಲಾಗುವುದಿಲ್ಲ. ಒಂದೆರಡು ಉದಾಹರಣೆಗಳನ್ನು ಕೊಡುವುದಾದರೆ ದೇಶದ ಪ್ರಮುಖ ಉನ್ನತ 'ಶಿಕ್ಷಣ ಜ್ಞಾನ ವಿಜ್ಞಾನ' ಕ್ಷೇತ್ರಗಳಿಂದ ಮೊದಲಿದ್ದ ಎಲ್ಲಾ ವಿದ್ವಾಂಸರನ್ನು ಕಿತ್ತು ಹಾಕಲಾಗಿದೆ. ಇರ್ಫಾನ್ ಹಬೀಬ್, ಬಿಪಿನ್‌ಚಂದ್ರ, ರೋಮಿಲಾ ಥಾಪರ್ ಮುಂತಾದವರನ್ನು ಅವರು ಸತ್ಯ ಹೇಳುವ ಪಾಪಿಗಳೆಂದು ಪರಿಗಣಿಸಿ ಅವರನ್ನು ತಮ್ಮ ತಮ್ಮ ಹುದ್ದೆಗಳಿಂದ ಕಿತ್ತೊಗೆಯಲಾಗಿದೆ. ಇಂದು ಆ ಎಲ್ಲಾ ವಿಭಾಗಗಳಲ್ಲಿ ಪ್ರಭುತ್ವ ಬಾಲಬಡಕರೇ ತುಂಬಿಕೊಂಡಿದ್ದಾರೆ. (ವಿವರಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ)

Ministry of Home Affair ನಿಂದ ಗುಪ್ತ ಮಾರ್ಗದರ್ಶಿ ಸೂತ್ರಗಳನ್ನು ವಿಶ್ವವಿದ್ಯಾಲಯಗಳಿಗೆ ಕಳುಹಿಸಲಾಗಿದೆ. (Om. No. 25022/40/97/F.IV) ಅದರ ಪ್ರಕಾರ ವಿದೇಶಿ ತಜ್ಞರು "should not be generally considered to attend conferences of political, semi political, communal or religious nature." ಯಾವುದೇ ದೇಶದ ವಿದ್ವಾಂಸರು ಯಾವುದೇ ವಿಚಾರದ ಸೇಮಿನಾರಿಗೆ ಸಂಬಂಧಿಸಿ ಭಾರತಕ್ಕೆ ಬರುವುದಿದ್ದಲ್ಲಿ MHA (Ministry of Home Affairs) ಹಾಗೂ Ministry of external Affairs ನ ಪೂರ್ವಾನುಮತಿಯನ್ನು ಪಡೆಯುವುದು ಅತ್ಯಗತ್ಯ.

ಸತ್ಯ ಹೇಳಬಾರದು

ಹೀಗಾಗಿ ತಮಿಳಿನ "Temples: Myths: Secrificial marriage in the South Indian saiva tradition" ಎಂಬ ವಿದ್ವತ್‌ಪೂರ್ಣ ಪುಸ್ತಕವನ್ನು ಬರೆದ ಡೆವಿಡ್ ಶುಲ್ಮಾನ್ ಅವರಿಗೆ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಪ್ರಬಂಧಮಂಡನೆಗೆ ಅವಕಾಶ ಕೊಡಲಾಗಲಿಲ್ಲ. ಅಂತೆಯೇ ಪೀಕಿಂಗ್ ಯುನಿವರ್ಸಿಟಿಯ ಶುಕ್ಸಿಯಾಂಗ್ ಅವರು ಲಕ್ನೋ ವಿಶ್ವವಿದ್ಯಾಲಯದಲ್ಲಿ ಭಾಗವಹಿಸಬೇಕಾದ ಸಂದರ್ಭದಲ್ಲಿಯೂ ಇಂತಹುದೇ ತಡೆಯಾಜ್ಞೆ ಬಂತು. Times of India ಈ ವಿಚಾರದಲ್ಲಿ ಪ್ರಭುತ್ವವನ್ನು ಹೀಗೆ ಪ್ರಶ್ನಿಸಿತು. ಅವರು ಪ್ರವಾಸಿ (Tourist) ವೀಸಾದ ಮೇಲೆ ಕಾರ್ಯಕ್ರಮಕ್ಕೆ ಆಗಮಿಸಿದರೆ ಆಗ ಪ್ರಭುತ್ವ ನಿರ್ಧಾರ ಏನು ಮಾಡುತ್ತದೆ? MHA ಯ under secretory S.K. Das ಎನ್ನುವವರು ಅದಕ್ಕೆ ಉತ್ತರಿಸಿದ್ದು ಹೀಗೆ : 'ಅವರು ಸೆಮಿನಾರಿನಲ್ಲಿ ಮೌನವಾಗಿ ಕುಳಿತು ಭಾಷಣಗಳನ್ನು ಕೇಳಬಹುದು. ಆದರೆ, ಎದ್ದು ನಿಂತು ಮಾತನಾಡುವಂತಿಲ್ಲ. ಹಾಗೆ ಮಾಡಿದಲ್ಲಿ ಫಾರಿನರ್ಸ್ ಆ್ಯಕ್ಟ್ ಹಾಗೂ ವೀಸಾ ರೂಲನ್ನು ಅತಿಕ್ರಮಣ ಮಾಡಿದಂತಾಗುತ್ತದೆ'. ಇದರರ್ಥ ಸತ್ಯ ಹೇಳುವ ಯಾವ ಹೊರಗಿನವರೂ ಇಲ್ಲಿಗೆ ಬರಬಾರದು. ಇಲ್ಲಿಯವರು ಎಲ್ಲಾದರೂ ಸತ್ಯ ಹೇಳಿದರೆ ಅವರ ಶಿರಚ್ಛೇಧ ಮಾಡಲಾಗುವುದು. ತುರ್ತು ಪರಿಸ್ಥಿತಿಯನ್ನು ಮಾತ್ರ ನಾವು ಭಯಾನಕ ಎಂದು ತಿಳಿದಿದ್ದೆವು. ಆದರೆ, ಇದು ಏನು? ಖ್ಯಾತ ಇತಿಹಾಸಕಾರ ಡಿ.ಎನ್.ಜಾ ಅವರ 'ಭಾರತದಲ್ಲಿ ಗೋಹತ್ಯೆ' ಪುಸ್ತಕವನ್ನು ಮುಟ್ಟುಗೋಲು ಹಾಕಲಾಯಿತು. ದೇಶದ ಗಣ್ಯ ಪ್ರಕಾಶನ ಸಂಸ್ಥೆ ಮೋತಿಲಾಲ್ ಬನಾರಸಿದಾಸ್ ಪ್ರಕಟ ಮಾಡಿದ ಕೋರ್ಟ್‌ರೈಟ್ ಅವರ ಅತ್ಯಂತ ಗಂಭೀರ, ಶಾಸ್ತ್ರೀಯ ಮತ್ತು ಆ ಕ್ಷೇತ್ರದಲ್ಲಿ ಈ ತನಕ ರಚಿಸಲ್ಪಡದ



ವಿದ್ವತ್‌ಪೂರ್ಣ ಕೃತಿ "Ganesha; Lord of obstrecals lord of Beginings" ವನ್ನು ಪ್ರತಿಬಂಧಿಸಿ ಆ ಪ್ರಕಾಶಕ ಕ್ಷಮೆಯಾಚಿಸುವಂತೆ ಸರ್ಕಾರ ಮಾಡಿತು. ಅಂಗಡಿಗಳಲ್ಲಿ ಮಾರಾಟಕ್ಕಿದ್ದ ಎಲ್ಲಾ ಪುಸ್ತಕಗಳನ್ನು ಮುಟ್ಟುಗೋಲು ಹಾಕಿತು. ಹಾಗಿದ್ದರೆ, ಆ ಪುಸ್ತಕದಲ್ಲಿದ್ದ ತಪ್ಪೇನು? ಅದರ ಮುಖಪುಟದಲ್ಲಿ ಪ್ರಕಟವಾದ ಪ್ರಾಚೀನ ಕಾಲದ ಕಂಚಿನ ಗಣಪತಿ ವಿಗ್ರಹದ ಲಿಂಗಭಾಗ ತೋರುತ್ತಿತ್ತು. ಇದು ಗಣಪತಿಗೆ ಅವಮಾನ, ಹಿಂದೂ ಸಂಸ್ಕೃತಿಗೆ ಅವಮಾನ ಎಂದು ಆ ಮಹಾನ್ ಹಿಂದೂವಾದಿಗಳು ಕೃತಿಯನ್ನು ಪ್ರತಿಬಂಧಿಸಿದರು.

ಹಿಟ್ಲರ್‌ನ ನಾಜಿಜಮ್ ಹೇಗಿತ್ತು. ಮುಸಲೋನಿಯ ಫ್ಯಾಸಿಸಮ್ ಹೇಗಿತ್ತು ಎಂದು ಇತಿಹಾಸದಲ್ಲಿ ಓದಿ ಮಾತ್ರ ತಿಳಿದ ನಾವು ಇಂದು ಅದರ ಭಯಾನಕವಾದ ಪ್ರಾಯೋಗಿಕ ಪ್ರದರ್ಶನವನ್ನು ಈ ಪುಣ್ಯ ಭೂಮಿಯಲ್ಲಿ ಕಾಣುವ ಭಾಗ್ಯವನ್ನು ಪಡೆದುದು ನಮ್ಮ ಹಾಗೂ ನಮ್ಮ ಪೂರ್ವಿಕರ ಕರ್ಮಫಲ! ನಾವು ಇಂದು ಈ ಕರ್ಮಫಲವನ್ನು ಬದಲಿಸಲು ಕರ್ಮ ಮಾಡದಿದ್ದರೆ ಶಾಶ್ವತವಾಗಿ ಹಂದಿ ಮತ್ತು ನಾಯಿ ಜನ್ಮಕ್ಕೆ ನಿಜವಾದ ಅಧಿಕಾರಿಗಳಾಗುತ್ತೇವೆ.

ಅನುಬಂಧ:

ಕೋಮುವಾದಿಗಳು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ದೇಶದ ಮಹೋನ್ನತ ಜ್ಞಾನ ವಿಜ್ಞಾನ ಸಂಸ್ಥೆಗಳ ಉನ್ನತ ಶಿಕ್ಷಣ ನಿರ್ದೇಶಕರುಗಳು:

1.The Indian Council of Historical Research (ICHR) ಇದರ ಅಧ್ಯಕ್ಷರು: ಪ್ರೊ.ಬಿ.ಆರ್.ಗ್ರೋವರ್, ಯೋಗ್ಯತೆ : ರಾಮಮಂದಿರದ ಪರವಾಗಿ ಆರ್‌ಎಸ್‌ಎಸ್‌ನ ವಕಾಲತ್ತು ನಡೆಸಿದವರು. ಈ ಮಂಡಳಿಯ ಇದೇ ಯೋಗ್ಯತೆಯ ಇನ್ನಿತರರು ಬಿ.ಬಿ.ಲಾಲ್, ಬಿ.ಪಿ.ಸಿನ್ಹಾ ಮತ್ತು ಕೆ.ಎಸ್.ಲಾಲ್ ಮೊದಲಾದವರು.

2. Indian Council for Social Science Research(ICSSR) ಅಧ್ಯಕ್ಷ : ಎಂ.ಎಲ್.ಸೋಂದಿ, ಯೋಗ್ಯತೆ: ಜನಸಂಘದ ಮಾಜಿ ಎಂ.ಪಿ.

3. Indian Institute of Advanced Studies in Simla (IIAS) ಅಧ್ಯಕ್ಷ : ಜಿ.ಸಿ.ಪಾಂಡೆ, ಯೋಗ್ಯತೆ: ಬಿಜೆಪಿ ಮತ್ತು ಆನಂದಮಾರ್ಗದ ಆರಾಧಕ

4. University Grants Commission (UGC) ಅಧ್ಯಕ್ಷ: ಡಾ:ಹರಿಗೌತಮ್, ಯೋಗ್ಯತೆ: ಆರ್.ಎಸ್.ಎಸ್.ನ ಸಕ್ರಿಯ ಕಾರ್ಯಕರ್ತರೂ ಅದರ ಪ್ರಮುಖ ವಕ್ತಾರರೂ ಆಗಿದ್ದಾರೆ.

5. Indira Gandhi National Centre for Arts (IGNCA) ಅಧ್ಯಕ್ಷ: ಎಲ್.ಎಂ.ಸಿಂಘ್ವಿ, ಯೋಗ್ಯತೆ: ಹಾಲಿ ಬಿಜೆಪಿ ಪಕ್ಷದ ಎಂ.ಪಿ, ಅನಂತಕುಮಾರ್ (ಕರ್ನಾಟಕ) ರವರ ಪ್ರಿಯಮಿತ್ರ, ಆರ್‌ಎಸ್‌ಎಸ್ ಕಾರ್ಯಕರ್ತ ಹಾಗೂ ಸಂಸ್ಕೃತಿಯ ಮಂತ್ರಿ

6. National Council of Educational Research and Training (NCERT) ಅಧ್ಯಕ್ಷ: ಡಾ: ಜೆ.ಎಸ್.ರಾಜ್‌ಪೂತ್, ಯೋಗ್ಯತೆ: ಆರ್.ಎಸ್.ಎಸ್. ಹೇಳುವ ರಾಷ್ಟ್ರೀಯತೆ, ಅಧ್ಯಾತ್ಮವನ್ನು ಶಾಲಾ ಪಠ್ಯಪುಸ್ತಕಗಳಲ್ಲಿ ತರಲು ನೇರವಾಗಿ ಹೆಣಗುವ ಆರ್‌ಎಸ್‌ಎಸ್ ಕಾರ್ಯಕರ್ತ

7. Indian Council of Philosophical Research (ICPR) ಅಧ್ಯಕ್ಷ : ಕಿರೀಟ್ ಜೋಷಿ, ಯೋಗ್ಯತೆ: ಅಂತರ್‌ರಾಷ್ಟ್ರೀಯ ಹಿಂದೂಧರ್ಮ ಕೇಂದ್ರದ ಅಧ್ಯಕ್ಷ

8. The National Film Development Corporation: (NFDC) ಅಧ್ಯಕ್ಷೆ: ಹೇಮಾಮಾಲಿನಿ, ಯೋಗ್ಯತೆ: ಬಿಜೆಪಿಯ ಪರವಾಗಿ ಚುನಾವಣಾ ಕಣದಲ್ಲಿ ಪ್ರತ್ಯಕ್ಷ ಪ್ರಚಾರ. ಇದೊಂದು ಸ್ಯಾಂಪಲ್ ಮಾತ್ರ.

ಸಂಪಾದಕೀಯ

ದಮನಕಾರಿ 'ಕೋಕಾ' ಜಾರಿಕೂಡದು

ಇತ್ತೀಚಿಗೆ ಕರ್ನಾಟಕ, ಗುಜರಾತ್‌ಗಳಲ್ಲಿ ಸಂಭವಿಸಿದ ಭಯೋತ್ಪಾದಕ ಸ್ಫೋಟಗಳ ಹಿನ್ನಲೆಯಲ್ಲಿ ಪುನಃ 'ಟಾಡಾ' ಮತ್ತು 'ಪೋಟಾ'ದಂತಹ ಭಯೋತ್ಪಾದನಾ ನಿಗ್ರಹದ ಕಾಯ್ದೆಗಳನ್ನು ಜಾರಿಗೊಳಿಸಬೇಕೆಂದು ಅದೇ ಮದ್ದೆಂದೂ ವಾದಗಳು ಪುನಃ ಹೊರಟಿವೆ. ಈ ಪ್ರಸಂಗಗಳನ್ನು ಬಳಸಲು ಹೊಂಚು ಹಾಕಿತ್ತೇ ಎನ್ನುವಷ್ಟು ವಿಪರಿತವಾದ ಪ್ರತಿಕ್ರಿಯೆಗಳನ್ನು ಬಿಜೆಪಿ ನೀಡಿದೆಯಲ್ಲದೇ ಅಧಿಕಾರದಲ್ಲಿರುವ ಸರ್ಕಾರದ ವಿರುದ್ಧ ಒಂದೆಡೆ ಇನ್ನೊಂದೆಡೆ ಅಂತಹ ಕ್ರೂರ ಕಾಯ್ದೆಗಳ ಪರ ನಿಲುವನ್ನು ಪ್ರತಿಪಾದಿಸಿದೆ. ಇದನ್ನೇ ಅನುಕರಿಸಿ ಕರ್ನಾಟಕದಲ್ಲಿನ ಬಿಜೆಪಿ ಸರ್ಕಾರವೂ ಅಂತಹುದೇ ಕಾಯ್ದೆಯನ್ನು ತರಲು ಬಯಸಿದೆ. ಅದಕ್ಕಾಗಿ ಹಿಂದೆ ಕಾಂಗ್ರೆಸ್ ಸರ್ಕಾರವೇ ರೂಪಿಸಿದ್ದ 'ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ -2000' (ಕೋಕಾ)ನ್ನು ಪರಿಷ್ಕರಿಸಿ ಜಾರಿತರಬೇಕೆಂದು ವಾದಿಸುತ್ತಿದೆ.


ಭಯೋತ್ಪಾದನಾ ಕೃತ್ಯಗಳನ್ನು ನಿಗ್ರಹಿಸಬೇಕು ಎಂಬುವದರಲ್ಲಿ ಎರಡು ಮಾತಿಲ್ಲ. ಆದರೆ ಕೇವಲ ಇಂತಹ ಕಾಯ್ದೆಗಳಿಂದಲೇ ಭಯೋತ್ಪಾದನೆಯನ್ನು ಅಳಿಸಿಬಿಡಬಹುದು ಎಂಬುದು ಭ್ರಮೆಯಷ್ಟೆ. ಒಂದೆಡೆ ಭಯೋತ್ಪಾದನೆ ವಿಫುಲವಾಗಿ ಬೆಳೆಯುವ, ಬೇರು ಬಿಡಲು ಸಾಧ್ಯವಾಗುವಂತಹ ಸನ್ನಿವೇಶ ಕ್ರಮಗಳನ್ನು ಕೈಗೊಳ್ಳುತ್ತಲೇ ಅವನ್ನು ನಿಯಂತ್ರಿಸುವುದಾಗಿ ಹರಸಾಹಸ ಪಡುತ್ತೇವೆಂದು ಹೇಳುವುದು ಒಂದು ವಂಚನೆಯೇ ಆಗುವುದು. ಇಂದಿನ ಭಯೋತ್ಪಾದನಾ ಕೃತ್ಯಗಳಿಗೆ ಆಂತರಿಕ ಸಂಗತಿಗಳಲ್ಲದೇ ಅಂತರಾಷ್ಟ್ರೀಯವಾದ ಕಾರಣ ಸಂಬಂಧಗಳೂ ಇವೆ. ಜಗತ್ತಿನಲ್ಲಿಯೇ ಅತ್ಯಂತ ಭೀಕರ ಭಯೋತ್ಪಾದಕ ಸ್ಥಾನ ಗಿಟ್ಟಿಸಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳೊಂದಿಗೆ ಭಾರತದ ಆಳುವವರು ಹೆಚ್ಚು ಹೆಚ್ಚು ನಂಟು ಬೆಳೆಸುತ್ತ ಅವರ ಆಡಿಯಾಳಾಗಲು ಉತ್ಸುಕದಲ್ಲಿರುವುದು. ದೇಶದ ಹಿತಾಶಕ್ತಿಗಳಿಗೆ ಮಾರಕವಾದ ಸಾಮ್ರಾಜ್ಯಶಾಹಿಯನ್ನು ದೃಢವಾಗಿ ಎದುರಿಸದೇ ಶರಣಾಗುತ್ತಿರುವುದು ಅದರ ಕರಾಳ ಹಸ್ತ ಚಾಚಲು ಅನುವು ಮಾಡಿರುವುದು ಭಯೋತ್ಪಾದನೆ ಇಮ್ಮಡಿಗೊಳ್ಳಲು ಕಾರಣವಾಗಿದೆ. ಅದರ ತಂತ್ರದಂತೆ ಭಾರತದ ಅಡಿಪಾಯವಾದ ಧರ್ಮ ನಿರಪೇಕ್ಷತೆ, ಪ್ರಜಾಪ್ರಭುತ್ವ, ವೈವಿಧ್ಯತೆಯಲ್ಲಿ ಏಕತೆಯಂತಹ ಮೌಲ್ಯಗಳ ಮೇಲೆ ಧಾಳಿ ಮಾಡುವ, ಜನರ ಒಗ್ಗಟ್ಟು ಒಡೆದು ದೇಶದ ಆಂತರಿಕ ಬಲವನ್ನು ದುರ್ಬಲಗೊಳಿಸಿ ನಾಶಗೊಳಿಸುವ ಇಂತಹ ಶಕ್ತಿಗಳ ಕುಮ್ಮಕ್ಕು ಸದಾ ಇದೆ ಎಂಬುದನ್ನು ಭಾರತ ಕಂಡಿದೆ. ಸಾವಿರಾರು ಅಮಾಯಕ ಜನರನ್ನು ಮಾತ್ರವಲ್ಲ ಇಬ್ಬರು ಪ್ರಧಾನಿಯರನ್ನು ಕಳೆದುಕೊಂಡಿದೆ. ಮತೀಯವಾದಿ ಭಯೋತ್ಪಾದನಾ ಕೃತ್ಯಕ್ಕೆ ಮಹಾತ್ಮ ಗಾಂಧಿಯವರನ್ನೂ ಕಳೆದುಕೊಂಡ ದುರಂತಗಳ ಅಧ್ಯಾಯ ನಮ್ಮೆದುರಿಗಿದೆ.

ಇಂದು ಜಾರಿಗೊಳಿಸಬೇಕೆಂಬ 'ಕೋಕಾ' ಅಥವಾ 'ಪೋಟಾ'ದಂತಹ ಕಾಯ್ದೆಗಳು ನಿಜ ಸ್ವರೂಪ ಏನು ಎಂಬುದನ್ನು ಅರಿಯ ಬೇಕಾಗುತ್ತದೆ. ಭಯೋತ್ಪಾದನೆ ನಿಗ್ರಹ ಹೆಸರಿನಲ್ಲಿ ಈ ಕಾಯ್ದೆಗಳನ್ನು ಬಳಸಿ ನಡೆಸುವ ದಮನಕಾಂಡಗಳು ಅಗಣಿತ. ಪೋಟಾ ಜಾರಿಗೆ ಬಂದ ಹತ್ತು ವರ್ಷಗಳ ಅವಧಿಯಲ್ಲಿ ಮೊಕದ್ದಮೆ ಹೂಡಿ ತಳ್ಳಲ್ಪಟ್ಟ 76036 ಜನರಲ್ಲಿ ಶೇ. 99 ರಷ್ಟು ಕೇಸುಗಳು ನ್ಯಾಯಲಯದಲ್ಲಿ ಇತ್ಯರ್ಥವಾಗಿರಲಿಲ್ಲ. ಹಲವು ನ್ಯಾಯಾಲಯಕ್ಕೆ ಬಂದಿರಲಿಲ್ಲ. ನಂತರದಲ್ಲಿ 73.000 ಕ್ಕೂ ಅಧಿಕ ಜನರ ಕೇಸುಗಳಿಗೆ ಆಧಾರಗಳೇ ಇರಲಿಲ್ಲ. ಪಂಜಾಬಿನಲ್ಲಿ ಬಂಧಿತರಾದ 15.000 ಜನರಲ್ಲಿ ಆರೋಪ ಸಾಬೀತುಪಟ್ಟಿದ್ದು ಕೇವಲ ಶೇ. 2ರಷ್ಟು ಮಾತ್ರ. ಇನ್ನು ಗುಜರಾತ್‌ನಲ್ಲಿ 'ಟಾಡಾ' ದಡಿ ಬಂಧನಕ್ಕೊಳಗಾದವರು 18.000ಕ್ಕೂ ಅಧಿಕ. ಇಂತಹ ಕೇಸುಗಳಲ್ಲಿ ಮುಸ್ಲಿಂ ಅಲ್ಪ ಸಂಖ್ಯಾತರ ವಿರೋಧಿ ನಿಲುವಿನ ಪೂರ್ವಾಗ್ರಹಕ್ಕೂ ಈ ಕಾಯ್ದೆಯನ್ನು ಬಳಸಲಾಗಿತ್ತು. ವಾಜಪೇಯಿಯವರ ಎನ್‌ಡಿಎ ಸರ್ಕಾರವು ತಂದ 'ಪೋಟಾ'ದ ಕಥೆಯೂ ನಿರಪರಾಧಿಗಳನ್ನು ದಂಡಿಸುವ ಕಥೆಯೇ ಆಗಿದೆ. ಈ ಕಾಯ್ದೆಯನ್ನು ತರಾತುರಿಯಲ್ಲಿ ತಂದು ಭಯೋತ್ಪಾದನೆಯ ವಿರುದ್ಧ ಹೋರಾಡುವುದಾಗಿ ಹೇಳುತ್ತಿದ್ದ ಅಮೇರಿಕಾವನ್ನು ಮೆಚ್ಚಿಸಲು ಯತ್ನಿಸಿದ್ದು ಇದೇ ಅಡ್ವಾನಿ, ವಾಜಪೇಯಿಯವರೇ. ಹಾಗೆಯೇ ತಮಿಳುನಾಡು, ಝಾರ್ಖಂಡ್ ರಾಜ್ಯಗಳು ಈ ಕಾಯದೆಯನ್ನು ದುರುಪಯೋಗ ಮಾಡಿದ ವ್ಯಾಪಕ ಆರೋಪಗಳು ಬೆಳಕಿಗೆ ಬಂದವು.

ಕರ್ನಾಟಕದಲ್ಲಿ ನ 'ಕೋಕಾ' ಕಾಯ್ದೆ 2000ವು 1990 ರಲ್ಲಿ ಮಹಾರಾಷ್ಟ್ರದಲ್ಲಿ ತಂದ 'ಮೋಕಾ'ದ ಮಾದರಿಯೇ ಆಗಿದೆ. 'ಕೋಕಾ'ದಲ್ಲಿನ ಭಯೋತ್ಪಾದಕ ಕೃತ್ಯ ಪರಿಭಾಷೆಯು ಜನತೆಯ ನ್ಯಾಯ ಸಮ್ಮತವಾದ ಬೇಡಿಕೆಗಳ ಆಧಾರದ ಚಳವಳಿಗಳನ್ನು ನೇತೃತ್ವ ನೀಡಿದ ಸಂಘಟನೆ, ನಾಯಕರನ್ನೂ, ಸದಸ್ಯರನ್ನೂ ತನ್ನ ವ್ಯಾಪ್ತಿಗೆ ಸೆಳೆದುಕೊಂಡು ಶಿಕ್ಷಿಸುವ ವಿಶಾಲ ವ್ಯಾಪ್ತಿ ಹೊಂದಿದೆ. ಒಂದೊಮ್ಮೆ ಒಂದು ಸಂಘಟನೆ ಭಯೋತ್ಪಾದಕ ವೆಂದು ಹೆಸರಿಸಿದಲ್ಲಿ ಅದನ್ನು ಪ್ರಶ್ನಿಸುವ ಹಕ್ಕು ಖಾತ್ರಿ ಇಲ್ಲ. ಏನಿದ್ದರೂ ಸರ್ಕಾರದ ನ್ಯಾಯ ಮಂಡಳಿಯ ಮೊರೆ ಹೋಗಬೇಕು. ಬಂಧಿತರಿಗೆ ಜಾಮೀನು ಸಿಗುವುದು ಅಸಾಧ್ಯವೇ ಸರಿ. ಯಾವುದೇ ಮಾಹಿತಿ ವಾರೆಂಟ್‌ಗಳಿಲ್ಲದೆ ಬಂಧಿಸಿ ಜೈಲಿಗೆ ತಳ್ಳಬಹುದು. ವಿಚಾರಣೆ ಹೆಸರಿನಲ್ಲಿ ವರ್ಷಗಟ್ಟಲೇ ಬಂಧನದಲ್ಲಿ ಕೊಳೆಸಬಹುದು. ಮಾನವ ಹಕ್ಕುಗಳ ಪಾಲನೆ- ಪ್ರಶ್ನೆ ಇನ್ನೆಲ್ಲಿಯದು?! ಹೀಗೆ ಕನಿಷ್ಟ ಪ್ರಜಾಸತ್ತತೆಯ ಹಕ್ಕುಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ನಗ್ನ ಹರಣ-ದಮನ?! ಈ ಎಲ್ಲಾ ಒಟ್ಟು ಅನುಭವ, ಅಂಶಗಳನ್ನು ಗಮನಿಸಿದರೆ, ಈ ಕಾಯ್ದೆಗಳು ಆಳುವವರಿಗೆ ದಮನ ನಡೆಸಲು

ಪುಟ 12 ಕ್ಕೆ

ಗಣಿಗಾರಿಕೆಯ ಗಂಭೀರ ಅಪಾಯ ಸರ್ಕಾರ ಪರಿಗಣಿಸೀತೆ ?



ಕರ್ನಾಟಕದ ರಾಜಕಾರಣ ಗಣಿ ಧಣಿಕುಳಗಳ ಸುತ್ತಲೇ ಸುತ್ತುತ್ತದೆ. ಅದರ ಅಕ್ರಮ, ಹಗರಣಗಳ ವಿರುದ್ಧ ತೀವ್ರ ಜನದನಿ ಕೇಳುವಾಗಲೇ ಯಡಿಯೂರಪ್ಪನವರ ಸರ್ಕಾರವು ಕೇವಲ ಬಾಯೋಪಚಾರದಿಂದಲೇ ಪ್ರಗತಿ ಸಾಧಿಸಲು ಹೊರಟಿದೆ. ಇತ್ತೀಚೆಗೆ ಪ್ರಕಟಣೆಗೊಂಡ ವರದಿಗಳನ್ನಾದರೂ ಸರ್ಕಾರ ಕಣ್ತೆರೆದು ನೋಡಬೇಕು. ಇದೇ ಹೊತ್ತಿನಲ್ಲಿ 2003 ಮಾರ್ಚ್ 15ರಂದು ಅಂದಿನ ಕರ್ನಾಟಕ ಸರ್ಕಾರ (ಎಸ್.ಎಂ. ಕೃಷ್ಣರ) ರಾಜ್ಯದ ಬಳ್ಳಾರಿ, ಕೋಲಾರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯದಂತಹ ಜಿಲ್ಲೆಗಳಲ್ಲಿ ನೀಡಲಾಗಿದ್ದ ಗಣಿಗಾರಿಕೆಯ ಗುತ್ತಿಗೆಯ ಅಧಿಸೂಚನೆಯನ್ನು ರದ್ದು ಮಾಡಿ ರಾಜ್ಯದ ಹೈಕೋರ್ಟ್ ಸರ್ಕಾರಕ್ಕೆ ತಿಳಿಸಿದೆ. ಗಣಿಗಾರಿಕೆಗೆ ಯಾವುದೇ ನೀತಿ ನಿಯಮ ನಿರ್ಬಂಧವಿಲ್ಲದೆ ಆರಣ್ಯಭೂಮಿಯಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುವುದನ್ನು ಈಗ ನ್ಯಾಯಾಲಯವೇ ಗುರುತಿಸಿದೆ. ಇಂತಹ ಅಕ್ರಮ ಗಣಿಗಾರಿಕೆ ಪರಿಸರ, ಜನಜೀವನದ ಮೇಲಿನ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕವಾಗಿ ಎಷ್ಟೊಂದು ಭಾರಿ ಪ್ರಶ್ನೆ ಎತ್ತಲಾಗಿದೆಯಾದರೂ ಸರ್ಕಾರ ಗಂಭಿರ ಗಮನವನ್ನೇ ಹರಿಸಿಲ್ಲ. ಈ ಎಲ್ಲ ಹಿನ್ನಲೆಯಲ್ಲಿ ಗಣಿಯಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಲಾದರೂ ಕೇಂದ್ರ ರಾಜ್ಯ ಸರ್ಕಾರಗಳು ಶಾಸನ ರೂಪಿಸುವ ಬಗ್ಗೆ ಪರಿಸಿಲಿಸುವ, ರಾಷ್ಟ್ರೀಕರಣಗೊಳಿಸಲು ಸಲಹೆ ನೀಡಿರುವುದನ್ನು ಸರ್ಕಾರಗಳು ಗಂಭಿರವಾಗಿ ಪರಿಗಣಿಸಬೇಕಾಗಿದೆ.

ಇದೇ ಸಂದರ್ಭದಲ್ಲಿ ದೆಹಲಿಯ ವಿಜ್ಞಾನ ಪರಿಸರ ಕೇಂದ್ರವು ನಡೆಸಿರುವ ಸಮೀಕ್ಷೆಯ ವರದಿಯು ಬಹಿರಂಗಗೊಳಿಸಿದ ಸಂಗತಿಗಳು ದಿಗ್ಭ್ರಮೆಗೊಳಿಸುವಂತಹುಗಳಾಗಿವೆ.

2004-06ರ ಸರ್ಕಾರ ರಾಜ್ಯದ ಬೊಕ್ಕಸಕ್ಕೆ ಮೂರುಸಾವಿರ ಕೋಟಿ ಹಾನಿ ಮಾಡಿದೆ ಎಂದಿರುವುದು, ಸಮಸ್ಯೆಯ ಒಂದು ಮಗ್ಗಲುವನ್ನಷ್ಟೇ ತೆರದಿಟ್ಟಿದೆ ಎನ್ನಬಹುದು. ರಾಜ್ಯದಲ್ಲಿನ ಗಣಿಗಾರಿಕೆ ಬಹುತೇಕವಾಗಿ ಅರಣ್ಯದಲ್ಲಿಯೇ ನಡೆಯುತ್ತವೆ. ಅಕ್ರಮವಾಗಿ ನಡೆದಿರುವುದೇ ಹೆಚ್ಚು. ಈ ವರದಿ ಪರಿಸರದ ಮೇಲಿನ ಅಪಾಯಕಾರಿ ಪರಿಣಾಮಗಳನ್ನು ತಿಳಿಸಿದೆ: ಶ್ವಾಸಕೋಶದ ಕಾಯಿಲೆ, ಹೃದ್ರೋಗ, ಕ್ಯಾನ್ಸರ್‌ನಂತಹ ಕಾಯಿಲೆಗೆ ಜನತೆ ತುತ್ತಾಗುತ್ತಿದ್ದು, ಬಳ್ಳಾರಿ ಜಿಲ್ಲೆ ತೇಲಾಡುವ ದೂಳಿನಿಂದ ಇಡೀ ಜೀವ ಸಸ್ಯ ಸಂಕುಲವೇ ಅವಸಾನಕ್ಕೀಡಾಗುವುದು ಕಂಡಿದೆ. ಹಾಗೆಯೇ ಕೃಷಿ ಚಟುವಟಿಕೆಗಳೇ ನಾಶವಾಗುತ್ತಿರುವ ಆತಂಕವಿದೆ. ಅಷ್ಟು ಮಾತ್ರವಲ್ಲ, ಜನರ ಜೀವನ ಸ್ಥಿತಿಯು ನಿಕೃಷ್ಟವಾಗಿದೆ. ಕಡು ಬಡತನದ ಬೇಗೆಯಲಿ ಬೇಯುತ್ತಿದ್ದಾರೆ. ಗಣಿಗಾರಿಕೆ ಕಂಪನಿಗಳಿ ಹೇಳಿದಂತೆ ಉದ್ಯೋಗ ಸೃಷ್ಠಿ ಸಾಧ್ಯ ಎಂಬುದು ತೀರಾ ಕಡಿಮೆ ಎಂದು ಆಧುನಿಕ ಗಣಿಗಾರಿಕೆಯ ವಿಧಾನಗಳಿಂದ ಅದು ಸಾಧ್ಯವಾಗುತ್ತಿಲ್ಲ. 1950ರಿಂದ 1991ರವರೆಗೆ 2.6 ಕೋಟಿ ನಿರಾಶ್ರತರಾಗಿರುವ ಸಂಗತಿ ಧಿಗ್ಭ್ರಮೆಗೊಳಿಸುವಂತಹದ್ದು. ಆದರೂ ಪುನರ್ವಸತಿಯೂ ಇಲ್ಲದಾಗಿದೆ. ಗ್ರಾಮಾಂತರ ಜನರ ನಡುವಿನ ಬಡತನವನ್ನೂ ಇಲ್ಲಿ ಗಮನಿಸಬೇಕು.

ರಾಜ್ಯದಲ್ಲಿ ಗಣಿಗಾರಿಕೆಯು ನಡೆಯುತ್ತಿರುವ ಸಂಡೂರು, ಚಿಕ್ಕಮಗಳೂರು, ಕಪ್ಪತಗುಡ್ಡ ಮುಂತಾದೆಡೆ ಅಮೂಲ್ಯ ಸಸ್ಯ ಸಂಪತ್ತು ಇರುವುದು ಗೊತ್ತಿರುವ ವಿಚಾರ. ನೈಸರ್ಗಿಕ ಸಮತೋಲನ, ಪರಿಸರ ರಕ್ಷಣೆ, ದೇಶದ ಸಂಪತ್ತಿನ ರಕ್ಷಣೆಯ ಹೊಣೆಗಾರಿಕೆಯನ್ನು ಸರ್ಕಾರಗಳು ಕೂಡಲೇ ಗಮನಿಸಬೇಕಾಗಿದೆ. ಆದರೆ ಈ ಸರ್ಕಾರಗಳಲ್ಲಿ ಗಣಿ-ಧಣಿಯ ಪ್ರಾಯೋಜಿತವಾಗಿರುವುದರಿಂದ ಸರ್ಕಾರದಿಂದಲೇ ನೀರಿಕ್ಷಿಸುವುದು ಸಾಧ್ಯವಿಲ್ಲ. ಇದಕ್ಕೆ ಪ್ರಬಲವಾದ ಜನಾಂದೋಲನ ಆಗಬೇಕಿದೆ.

ಈ ದಿಶೆಯಲ್ಲಿ ಅಕ್ರಮ ಗಣಿಗಾರಿಕೆಯನ್ನು ವಿರೋಧಿಸಿ, ರಾಷ್ಟ್ರದ ಸಂಪತ್ತು ರಕ್ಷಿಸಲು ನಡೆಯುತ್ತಿರುವ ಜನ ಹೋರಾಟಗಳನ್ನು ತೀವ್ರಗೊಳಿಸಬೇಕು. ಇದು ಒಂದು ಧೀರ್ಘವಾದ, ಹಲವು ಹಂತಗಳಲ್ಲಿ ನಡೆಯಬೇಕಾದ ಹೋರಾಟ.

ಬರದ ಅಭಿವೃದ್ಧಿ

ರಾಜ್ಯದಲ್ಲಿ ಸುಮಾರು 84 ತಾಲ್ಲೂಕುಗಳು ಬರಪೀಡಿತವಾಗಿವೆ,ಎಂದು ಸರ್ಕಾರವೀಗ ಅಂದಾಜು ಮಾಡುತ್ತಿದೆ. ಮುಂಗಾರು ಮಳೆ ಕೈಕೊಟ್ಟದ್ದರಿಂದ ಇಂತಹ ಸ್ಥಿತಿ ಉದ್ಭವಿಸಿದೆ ಎಂಬುದು.

ಹೀಗೆ ಹೇಳುವ ಸರ್ಕಾರ ಬರದ ಹಾನಿಯ ಮೌಲ್ಯ ಮಾಪನದಲ್ಲಿಯೇ ತೊಡಗಿದೆ. ಕೇಂದ್ರಕ್ಕೆ ವರದಿ ಸಲ್ಲಿಸಿ ಹಣದ ಬಿಡುಗಡೆಗೆ ಕೋರುವುದನ್ನೇ ಸರ್ಕಾರ ತನ್ನ ಕರ್ತವ್ಯವೆಂದು ಸಾಗಹಾಕಲು ಹೊರಟಂತಿದೆ. ಬರದ ಛಾಯೆ

ಪುಟ 12 ಕ್ಕೆ

ಆಧುನಿಕ ತಳಿಶಾಸ್ತ್ರದ ಪರಿಣತರಲ್ಲ. ಆಯಾ ಸ್ಥಳದ ಫಲವತ್ತಾದ ಮಣ್ಣು, ನೀರು, ಗಾಳಿ, ಬಿಸಿಲು, ಹವಾಮಾನ, ಋತುಚಕ್ರಗಳ ವಿಶೇಷ ಸಂಯೋಜನೆಗಳನ್ನು ಮಾಡುವ ಮೂಲಕ ನಿಸರ್ಗ ವಿಕಾಸ ಹಾದಿಯಲ್ಲಿ ಸೃಷ್ಟಿಸುತ್ತಾ ಬಂದ ಭೌಗೋಳಿಕ ತಳಿಗಳು ಇವು.

ದೇಸಿ ತಳಿಗಳಿಗೆ 'ಭೌಗೋಳಿಕ ಸೂಚಕಗಳ ನೊಂದಣಿ' ಪಟ್ಟ

ಸಿ. ಯತಿರಾಜು

'ನಂಜನಗೂಡಿನ ರಸಬಾಳೆ'ಯ ಹೆಸರೇ ನಮ್ಮ ಬಾಯಲ್ಲಿ ಜೊಲ್ಲು ಸುರಿಯುವಂತೆ ಮಾಡುತ್ತೆ. ಹಾಗಾಗಿ ಈ ಬಾಳೆ ನಂಜುಂಡೇಶ್ವರನಿಂದ ಹಿಡಿದು ನಮ್ಮವರೆಗೂ ಬಹಳ ಪ್ರಿಯ. ಜಾನಪದ ಹಾಡುಗಾರರಿಂದ ಹಿಡಿದು ಕೆ.ಎಸ್. ನರಸಿಂಹಸ್ವಾಮಿಯವರ 'ಮೈಸೂರುಮಲ್ಲಿಗೆ' ಯ ಕಂಪನ್ನು ಹಾಡಿ ಹೊಗಳಿ ಅಜರಾಮರಗೊಳಿಸಿದ್ದಾರೆ. ಉಡುಪಿ ಮತ್ತು ಹರಪನಹಳ್ಳಿಯ 'ಮಲ್ಲಿಗೆ' ಯ ಸುವಾಸನೆ ವಿದೇಶಗಳಿಗೂ ಹರಡಿ ರಫ್ತು ಮಾರುಕಟ್ಟೆಯಲ್ಲಿ ಅನೇಕ ಆಧುನಿಕ ಪುಷ್ಪಗಳ ಬೇಡಿಕೆಯನ್ನು ಹಿಂದೆ ಬೀಳುವಂತೆ ಮಾಡಿದೆ. ಸಾಗರದ ಮಾವಿನ ಕಾಯಿಯ'ಮಿಡಿ' ಉಪ್ಪಿನಕಾಯಿ ಜಗದ್ವಿಖ್ಯಾತಿಯನ್ನು ಪಡೆದುಕೊಂಡಿದೆ. ಜಾಣಗೆರೆಯ 'ಜಂನೇರಳೆ ಹಣ್ಣು' ಬಾಯಲ್ಲಿ ನಿರೂರಿಸುತ್ತದೆ. ಕಮಲಾಪುರದ 'ಕೆಂಪು ಬಾಳೆಹಣ್ಣು' ತನ್ನ ವಿಶಿಷ್ಟ ಬಣ್ಣದಿಂದ ರುಚಿಯಾದ ಗ್ರಾಹಕರ ಗಮನ ಸೆಳೆದಿದೆ. ಬೆಂಗಳೂರಿನ ನೀಲಿ ದ್ರಾಕ್ಷಿ, ದ್ರಾಕ್ಷಾರಸ ಪ್ರಿಯರ ನೆಚ್ಚಿನ ಪಾನೀಯವಾಗಿದೆ. 'ದೇವನಹಳ್ಳಿಯ ಚಕ್ಕೋತಾ' ದ ಹುಳಿ ಮಿಶ್ರಿತ ಸಿಹಿ ಹುಳಿ ಹಣ್ಣುಗಳ ಸಾಮ್ರಾಜ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಳ್ಳುವಂತೆ ಮಾಡಿದೆ. 'ಮುಟ್ಟುಗುಳ್ಳ ಬದನೆ' ಯ ಪಲ್ಯ ರೊಟ್ಟಿಗೆ ಅತಿವಿಶಿಷ್ಟವಾದ ರುಚಿಯನ್ನು ತಂದಿತ್ತಿದೆ. 'ತೋತಾಪುರಿ' ಮಾವಿನಕಾಯಿಗಳಲ್ಲೇ ಅತ್ಯಂತ ವಿಶಿಷ್ಟವಾದ ಸವಿಯನ್ನು ಹೊಂದಿದೆ. ಬೆಂಗಳೂರಿನ ಗುಲಾಬಿ, ಈರುಳ್ಳಿ ವಿದೇಶಗಳಿಗೆ ವಿಶೇಷವಾಗಿ ರಫ್ತಾಗುತ್ತಿದೆ. ಹೀಗೆ ಹೇಳುತ್ತಾ ನಮ್ಮ ನಾಡಿನ ಉದ್ದಗಲಕ್ಕೂ ಲಭ್ಯವಿರುವ ಅತಿ ವಿಶಿಷ್ಟ ಹಣ್ಣು ಹೂವು, ತರಕಾರಿ, ಸೊಪ್ಪು, ಕಾಳು, ಧಾನ್ಯಗಳ ದೊಡ್ಡ ಪಟ್ಟಿಯನ್ನು ದೀರ್ಘವಾಗಿ ವಿಸ್ತರಿಸಬಹುದಾಗಿದೆ.

ಮೇಲೆ ಉದಾಹರಿಸಲಾದ ಈ ಎಲ್ಲಾ ತಳಿಗಳನ್ನೂ ಯಾವುದೇ ಕೃಷಿ ಸಂಶೋಧನಾಲಯವಾಗಲೀ, ವಿಶ್ವವಿದ್ಯಾಲಯವಾಗಲಿ ತಮ್ಮ ಜ್ಞಾನವನ್ನು ಧಾರೆಯೆರೆದು ಸೃಷ್ಟಿಸಿದ ತಳಿಗಳಲ್ಲಾ, ಆಧುನಿಕ ವಿಜ್ಞಾನದ ಗಂಧಗಾಳಿ ತಿಳಿಯದ 'ಅನಾಮಿಕ' ಪಾರಂಪರಿಕ ಕೃಷಿ ಪಂಡಿತರು ತಮ್ಮ ಆವಾಸಗಳ ಸುತ್ತಮುತ್ತ ನಿಸರ್ಗದೊಂದಿಗೆ ಅತ್ಯಂತ ನಿಕಟ ಭಾಂದವ್ಯವನ್ನಿಟ್ಟುಕೊಂಡು ಸಾವಿರಾರು ವರ್ಷಗಳಿಂದ ವಿಕಾಸಗೊಳಿಸಿ ರೂಪಿಸಿದ ಅತಿ ವಿಶಿಷ್ಟ ತಳಿ ಪ್ರಬೇಧಗಳು ಇವು. ತಲೆಮಾರಿನಿಂದ ತಲೆಮಾರಿಗೆ ಈ ವಿಶಿಷ್ಟ ತಳಿಗಳನ್ನು ಕಾಪಾಡಿ ಅವುಗಳನ್ನು ಅತ್ಯಂತ ಜಾಗರೂಕತೆಯಿಂದ ಪ್ರತಿಫಲಾಕ್ಷೆ ಅಥವಾ ಲಾಭದ ಆಸೆಯಿಲ್ಲದೆ ಜೋಪಾನ ಮಾಡಿದ ನಮ್ಮ ರೈತರು ಆಧುನಿಕ ತಳಿಶಾಸ್ತ್ರದ ಪರಿಣತರಲ್ಲ. ಆಯಾ ಸ್ಥಳದ ಫಲವತ್ತಾದ ಮಣ್ಣು, ನೀರು, ಗಾಳಿ, ಬಿಸಿಲು, ಹವಾಮಾನ, ಋತುಚಕ್ರಗಳ ವಿಶೇಷ ಸಂಯೋಜನೆಗಳನ್ನು ಮಾಡುವ ಮೂಲಕ ನಿಸರ್ಗ ವಿಕಾಸ ಹಾದಿಯಲ್ಲಿ ಸೃಷ್ಟಿಸುತ್ತಾ ಬಂದ ಭೌಗೋಳಿಕ ತಳಿಗಳು ಇವು. ಈ ತಳಿಗಳು ಅತ್ಯಂತ ಸ್ಥಳ ವಿಶಿಷ್ಟವಾದ ವಿಶೇಷ ತಳಿಪ್ರಭೇದಗಳು. ಭಾರತದ ಅತ್ಯಂತ ವೈವಿಧ್ಯಮಯವಾದ ಕೃಷಿ ಹವಾಮಾನ ವಲಯಗಳಲ್ಲಿ ಸ್ಥಳ ವಿಶಿಷ್ಟ ಜೀವಾವಾಸಗಳಲ್ಲಿ ಇಂತಹ ಅಸಂಖ್ಯಾತವಾದ ಭೌಗೋಳಿಕ ಅನನ್ಯತೆಗಳುಳ್ಳ ತಳಿಗಳು ಸೃಷ್ಟಿಗೊಳ್ಳಲು ವಿಪುಲವಾದ ಅವಕಾಶಗಳಿವೆ. ಇಂತಹ ಶ್ರೀಮಂತ ಜೀವವೈವಿಧ್ಯತೆ ಇರುವುದರಿಂದಲೇ ನಮ್ಮ ದೇಶವನ್ನು ವಿಶ್ವದ 12 ಮಹಾಜೀವ ವೈವಿಧ್ಯ ತಾಣಗಳಲ್ಲಿ ಒಂದೊಂದು ಗುರುತಿಸಲಾಗಿದೆ.

ಆದರೆ ಇತ್ತೀಚೆಗಿನ ವರ್ಷಗಳಲ್ಲಿ ಇಂತಹ ಭೌಗೋಳಿಕ ವಿಶೇಷತೆಗಳುಳ್ಳ ಅಪರೂಪದ ತಳಿ ಪ್ರಭೇಧಗಳ ಬಗ್ಗೆ ಅಸಡ್ಡೆ ಅನಾದರ ತೋರುತ್ತಾ ಬಂದದ್ದರ ಫಲವಾಗಿ ಇಂತಹ ಅನೇಕ ಸ್ಥಳ ವಿಶೇಷಗಳುಳ್ಳ ಭೌಗೋಳಿಕ ತಳಿಗಳು ಕಣ್ಮರೆಯಾಗುತ್ತಿವೆ ಇಲ್ಲವೆ ವಿನಾಶದ ಅಂಚಿನಲ್ಲಿವೆ. ಅಧಿಕ ಇಳುವರಿಯ ತಳಿಗಳನ್ನು ಬೆನ್ನತ್ತಿ ಹೋದದ್ದರ ಫಲವಾಗಿ ಕೃಷಿ ಉತ್ಪಾದಕತೆ ಹೆಚ್ಚೇನೋ ಆಯಿತು. ಆದರೆ ಅದೇ ಸಂದರ್ಭದಲ್ಲಿ ನಾವು ಅಪೂರ್ವವಾಗಿದ್ದ ಹಣ್ಣು, ತರಕಾರಿ, ಹೂವು ಮತ್ತು ಬೇಳೆ ತಳಿಗಳನ್ನು ಕಳೆದುಕೊಳ್ಳುತ್ತಾ ಜೀವ ವೈವಿಧ್ಯತೆಯಲ್ಲಿ ನಮಗಿದ್ದ ಶ್ರೀಮಂತಿಯನ್ನು ಕಳೆದುಕೊಳ್ಳುತ್ತಾ



ಬಡವಾಗುತ್ತಿದ್ದೇವೆ. ನಮ್ಮ ಹೊಲ ಗದ್ದೆಗಳಲ್ಲಿ, ತೋಪುಗಳಲ್ಲಿ, ಹಳ್ಳ ತೊರೆಗಳಲ್ಲಿ, ಕಾಡು ಕಣಿವೆಗಳಲ್ಲಿ ಶ್ರೀಮಂತವಾಗಿದ್ದ ಜೀವ ವೈವಿಧ್ಯತೆ ಕ್ರಮೇಣ ಕಡಿಮೆಯಾಗುತ್ತಾ ಸಾಗಿ ಇಂದು ವಿಶಾಲ ಭೂ ಪ್ರದೇಶಗಳಲ್ಲಿ ಏಕ ಪ್ರಬೇಧ ಬೆಳೆಗಳೇ ವಿಜೃಂಭಿಸುತ್ತಿವೆ. ನಮ್ಮ ಹಿತ್ತಲುಗಳಲ್ಲಿ, ಹೊಲದ ಸಾಲುಗಳಲ್ಲಿ, ಬದುಬಂಕಗಳಲ್ಲಿ, ಹಸಿರಿನಿಂದ ಸಮೃದ್ಧವಾಗಿದ್ದ ಬೇಲಿಗಳಲ್ಲಿ, ಕಾಲುವೆ, ತೊರೆದಂಡೆಗಳಲ್ಲಿ, ಕಟ್ಟೆ ಕಲ್ಯಾಣಿಗಳ ಅಂಚಿನಲ್ಲಿ ಕೆರೆಯಂಗಳಗಳಲ್ಲಿ ಎಲ್ಲೆಂದರಲ್ಲಿ ಹುಟ್ಟಿ ಅತಿ ವೈಶಿಷ್ಟ್ಯಪೂರ್ಣ ಸುವಾಸನೆ, ರುಚಿ, ಹದ, ಪೌಷ್ಠಿಕಾಂಶಗಳಿಂದ, ಔಷಧಿಯ ಅಂಶಗಳನ್ನೂ ಹೊಂದಿದ್ದ ಈ ವಿಶೇಷ ತಳಿಗಳು ಆಧುನಿಕ ಕೃಷಿ ಅಭ್ಯಾಸ/ ವಿಧಾನಗಳಿಂದಾಗಿ ಅಂಚಿಗೆ ತಳ್ಳಲ್ಪಟ್ಟು ಶಾಶ್ವತವಾಗಿ ಕಣ್ಮರೆಯಾಗಬಹುದಾದ ದಾರಿಯಲ್ಲಿ ಸಾಗಿವೆ. ನಾವು ಈಗಾಗಲೇ ಇಂತಹ ಸ್ಥಳ ವಿಶಿಷ್ಟಗಳುಳ್ಳ ಭೌಗೋಳಿಕ ಅನನ್ಯತೆಗಳುಳ್ಳ ಅನೇಕ ತಳಿಗಳನ್ನು ಕಳೆದುಕೊಂಡಿದ್ದೇವೆ. ಈ ಅನಾದರ ಹೀಗೆಯೇ ಮುಂದುವರಿದು ಏಕ ಪ್ರಭೇದದ ವಾಣಿಜ್ಯ ಬೆಳೆಗಳ ಕುರುಡು ಆರಾಧನೆಯನ್ನು ಮುಂದುವರಿದು ಏಕ ಪ್ರಬೇಧದ ನೆನಪು ಕೂಡ ನಮ್ಮ ನಂತರದ ತಲೆಮಾರುಗಳಿಗೆ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ. ಇಂತಹ ಅಮೂಲ್ಯ ತಳಿಗಳು ನಮ್ಮಲ್ಲಿದ್ದವೆಂಬ ಇತಿಹಾಸ ಕೂಡ ಇಲ್ಲದಂತೆ ಅವು ಕಾಲಗರ್ಭದಲ್ಲಿ ನಮಗೆ ಶಾಶ್ವತ ವಿದಾಯ ಹೇಳಿ ಬಿಡಬಹುದಾಗಿದೆ.

ಸ್ಕಾಂಡಿನೇವಿಯಾದ ಕಾಫಿ ಪ್ರಿಯರಿಗೆ ಮಲಬಾರಿನ ಮಾನ್ಸೂನ್ಡ್ ಕಾಫಿ ಅತ್ಯಂತ ರುಚಿಕರ. ಅದು ಇಂದಿಗೂ ತನ್ನ ವಿಶಿಷ್ಟ ಸ್ವಾದ, ನರುಗಂಪು, ಬಂಗಾರದ ಹೊಳಪು ಮೃದು ಮಧುರವಾದ ವಿಶಿಷ್ಟ ರುಚಿಯನ್ನು ಕಾಪಾಡಿಕೊಂಡಿರುವುದರಿಂದ ಆ ದೇಶದಲ್ಲಿ ಅದಕ್ಕೆ ಅಪಾರ ಬೇಡಿಕೆ ಇದೆ. ಈ ಮಾನ್ಸೂನ್ಡ್ ಕಾಫಿ ಹುಟ್ಟಿದ ಕತೆಯೇ ಬಹಳ ರೋಚಕವಾದದ್ದು. ಹಿಂದೆ ಮಲಬಾರಿನ ಕರಾವಳಿಯಿಂದ ಹಡಗಿನಲ್ಲಿ ಕಾಫಿ ಬೀಜಗಳನ್ನು ಸಾಗಿಸಲಾಗುತ್ತಿತ್ತು. ಅವು ನಿಗದಿತ ಸ್ಥಳಗಳನ್ನು ತಲುಪಲು ಹಲವಾರು ತಿಂಗಳುಗಳೇ ಹಿಡಿಯುತ್ತಿತ್ತು. ಪ್ರಯಾಣದ ದಾರಿಯಲ್ಲಿ ಸಮುದ್ರ ಗಾಳಿಯ ತೇವಾಂಶವನ್ನು ಹೀರಿಕೊಂಡು ಉಬ್ಬಿ ಹದಗೊಂಡು ಈ ವಿಶಿಷ್ಟ ರುಚಿಯನ್ನು ಪ್ರಾಪ್ತಗೊಳಿಸಿರಬೇಕು. ಇಂದಿಗೂ ವಿಶೇಷ ಬಣ್ಣ, ಸುವಾಸನೆ ಭರಿತ ಈ ಕಾಫಿ ಬೀಜಗಳನ್ನು ಮಲಬಾರ್ ತೀರ ಪ್ರದೇಶದಲ್ಲಿ ಸಂಸ್ಕರಿಸಿ ರಫ್ತು ಮಾಡಲಾಗುತ್ತದೆ. ಈ ಕಾಫಿಗೆ ಈಗ ಭೌಗೋಳಿಕಾ ಸೂಚಕ ಲಾಂಛನವನ್ನು ಪ್ರಧಾನ ಮಾಡಲಾಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂತಹ ಭೌಗೋಳಿಕ ಅನನ್ಯತೆಗಳುಳ್ಳ ತಳಿ ಪ್ರಭೇದಗಳ ಬಗ್ಗೆ ಆಸಕ್ತಿ ಮತ್ತು ಬೇಡಿಕೆ ಪುರುಜ್ಜೀವನಗೊಳ್ಳುತ್ತಿದೆ. ಬಿರ್ಯಾನಿ, ಪಲಾವ್‌ಗಳಲ್ಲಿ ಬಳಸುತ್ತಿದ್ದ 'ಬಸ್‌ಮತಿ' ಅಕ್ಕಿಗೆ ಶ್ರೀಮಂತ ರಾಷ್ಟ್ರಗಳಲ್ಲಿ ಅಪಾರ ಬೇಡಿಕೆ ಸೃಷ್ಟಿಯಾದಾಗ 'ರೈಸ್ ಟೆಕ್‌ಇಂಕ್' ಎಂಬ ಕಂಪನಿ ಬಸ್‌ಮತಿ ಅಕ್ಕಿ ಪ್ರತಿರೂಪವೊಂದನ್ನು ಸೃಷ್ಟಿಸಿ 'ಟೆಕ್ಸ್‌ಮತಿ' ಅಥವಾ 'ಕಸ್‌ಮತಿ' ಎಂದು ನಾಮಕರಣ ಮಾಡಿ ಅಮೇರಿಕಾದ ಪೇಟೆಂಟ್ ಮತ್ತು ಟ್ರೇಡ್ ಕಛೇರಿಯಿಂದ 1997ರಲ್ಲಿ ಪೇಟೆಂಟ್ ಪಡೆಯಿತು. ಪಂಜಾಬ್ ಮತ್ತು ಹಿಮಾಲಯದ ತಪ್ಪಲು ಪ್ರದೇಶಗಳಲ್ಲಿ ಮಾತ್ರ ಬೆಳೆಯಲಾಗುತ್ತಿದ್ದ ಬಸ್‌ಮತಿ ಎಂಬ ಭೌಗೋಳಿಕ ಅನನ್ಯತೆಯುಳ್ಳ ಈ ತಳಿಯ ಮೇಲಿನ ಪೇಟೆಂಟ್ ಹಕ್ಕನ್ನು ವಜ್ಞಾಗೊಳಿಸಲು ಭಾರತದ ಸಿ.ಎಸ್.ಐ.ಆರ್.ಸಂಸ್ಥೆ ದಾವೆ ಹೂಡಿ ಹೋರಾಡಬೇಕಾಯಿತು. ಇದೇ ರೀತಿ ಬೇವಿನ ಉತ್ಪನ್ನಗಳ ಪೇಟೆಂಟ್‌ಗಳನ್ನು ವಜಾ ಗೊಳಿಸಲು ನಾವು ಹರ ಸಾಹಸ ಮಾಡಬೇಕಾಯಿತು. ಶುಂಠಿ, ಅರಿಶಿನ ಮುಂತಾದ ಮನೆಮದ್ದುಗಳ ಮೇಲೂ ಪೇಟೆಂಟ್ ಪಡೆದುಕೊಳ್ಳುವ ಪ್ರಯತ್ನಗಳನ್ನು ಹಿಮ್ಮೆಟ್ಟಿಸಲು ಅಂತರಾಷ್ಟ್ರೀಯ ಮಟ್ಟದಲ್ಲಿ ನಾವು ಹೋರಾಟ ಮುಂದುವರಿಸುವ ಅಗತ್ಯವಿದೆ. ಇಂತಹ ಅಂತರರಾಷ್ಟ್ರೀಯ ಪೇಟೆಂಟ್ ಅಪಾಯಗಳಿಂದ ನಮ್ಮ ಭೌಗೋಳಿಕ ಅನನ್ಯತಾ ತಳಿಗಳನ್ನು ಕಾಯ್ದುಕೊಳ್ಳಲು ತಡವಾಗಿಯಾದರೂ ಪ್ರಯತ್ನ ಗಳನ್ನು ಮಾಡುತ್ತಿರುವುದು ಅತ್ಯಂತ ಸ್ತುತ್ಯಾರ್ಹ.

ಭೌಗೋಳಿಕಾ ಅನನ್ಯತಾ ತಳಿಗಳನ್ನು ಪೇಟೆಂಟ್ ಅಪಾಯದಿಂದ ಪಾರುಮಾಡಿಕೊಳ್ಳಲು ಭಾರತ ಸರ್ಕಾರ 'ಬೆಳೆಗಳು ಮತ್ತು ವಸ್ತುಗಳ ಭೌಗೋಳಿಕ ಸೂಚಕಗಳ ನೋಂದಣಿ ಕಾಯಿದೆ-1999' ನ್ನು ಜಾರಿಗೆ ತಂದಿದೆ. ಈ ಕಾಯಿದೆಯಿಂದ ಆ ಬೆಳೆಗಳ ಮೇಲೆ ರೈತರಿಗೆ ಇದ್ದ ಹಕ್ಕು ಸ್ವಾಮ್ಯಗಳಿಗೆ ಮಾನ್ಯತೆ ನೀಡಿ ಅವುಗಳಿಗೆ ಬ್ರ್ಯಾಂಡ್ ಮೌಲ್ಯವನ್ನು ನೀಡಲಾಗುತ್ತಿದೆ. ಮೇಲಿನ ಶಾಸನದನ್ವಯ ಭೌಗೋಳಿಕಾ ಅನನ್ಯತೆಗಳುಳ್ಳ ಈ ವಿಶೇಷ ತಳಿಗಳಿಗೆ 'ಭೌಗೋಳಿಕಾ ಸೂಚಕ' ನೋಂದಣಿ (Geographical Indications Tag) ಅಥವಾ ಜಿ.ಐ.ಟ್ಯಾಗ್ ನೀಡಲಾಗುತ್ತದೆ. ಎಲ್ಲಾ ತಳಿಗಳಿಗೆ, ಉತ್ಪನ್ನಗಳಿಗೆ ಈ ಶಾಸನದನ್ವಯ ನೋಂದಣಿಯಾಗುವ ಅರ್ಹತೆ ಮತ್ತು ಸ್ಥಾನಮಾನಗಳ ರಕ್ಷಣೆ ನೀಡಲು ಸಾಧ್ಯವಿಲ್ಲ. ಕೆಲವು ವಿಶಿಷ್ಟ ಗುಣಲಕ್ಷಣಗಳ ಮಾನದಂಡಗಳನ್ನಾಧರಿಸಿ ಅವುಗಳನ್ನು ನೋಂದಾವಣೆ ಮಾಡಿಕೊಳ್ಳಲಾಗುವುದು. ಪಾರಂಪರಿಕ ಮೌಲ್ಯಗಳುಳ್ಳ ಬೆಳೆಗಳನ್ನು, ಉತ್ಪನ್ನಗಳನ್ನು ನೋಂದಾಯಿಸಿಕೊಳ್ಳುವ ಮೂಲಕ ಅವುಗಳಿಗಿರುವ ವಿಶೇಷತೆಗಳಿಗೆ ಒಂದು ಶಾಸನಾತ್ಮಕ ಮಾನ್ಯತೆ ದೊರೆತಂತಾಗಿದೆ.

ಅನೇಕ ದೇಶಗಳು ಇಂದು ತಮಗೆ ಅತ್ಯಂತ ಪರಕೀಯವಾದ ಬೆಳೆಗಳು, ಉತ್ಪನ್ನಗಳು ಮತ್ತು ಸಾಮಾನುಗಳ ಮೇಲೆ ಏಕಸ್ವಾಮ್ಯದ ಹಕ್ಕುಗಳನ್ನು ಮಂಡಿಸುತ್ತಾ ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಲಾಭದ ಲೂಟಿಗೆ ಹುನ್ನಾರ ನಡೆಸುತ್ತಿವೆ. ಇಂತಹ ಸಂದರ್ಭಗಳಲ್ಲಿ 'ಭೌಗೋಳಿಕಾ ಸೂಚಕ ಪಟ್ಟಿಯ' (ಜಿ.ಐ.ಟ್ಯಾಗ್) ಮಾನ್ಯತೆ ಅಂತಹ ವಿಶೇಷ ಉತ್ಪನ್ನ ಮತ್ತು ಸಾಮಾನುಗಳ ಮೇಲೆ ಆ ಮೂಲ ದೇಶಗಳಿಗಿರುವ ಹಕ್ಕನ್ನು ರಕ್ಷಿಸಲು ತುಂಬಾ ಸಹಕಾರಿ. ಇದು ಅನೀತಿಯುತವಾದ ವಾಣಿಜ್ಯ ಅಭ್ಯಾಸಗಳಿಗೆ, ಅನಧಿಕೃತ ಹಕ್ಕು ಪ್ರತಿಪಾದನೆ ಮಾಡುವ ಪಾಶ್ಚಿಮಾತ್ಯ ರಾಷ್ಟ್ರಗಳ ದಾಳಿಗಳಿಂದ ಈ ಬೆಳೆಗಳನ್ನು ಮತ್ತು ಉತ್ಪನ್ನಗಳನ್ನು ಕಾಪಾಡಿಕೊಳ್ಳಲು ತುಂಬಾ ಸಹಕಾರಿಯಾಗಲಿದೆ. ಈ ಜಿ.ಐ. ಮಾನ್ಯತೆ ಜಾಗತಿಕವಾಗಿ ಈ ಬೆಳೆಗಳು ಮತ್ತು ವಸ್ತುಗಳಿಗೆ ಶಾಸನಾತ್ಮಕ ಮಾನ್ಯತೆ ನೀಡುವ ಮೂಲಕ ಅವುಗಳ ಮೇಲೆ ಮೂಲ ದೇಶಗಳಿಗಿರುವ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿದೆ. ಒಮ್ಮೆ ಈ ಕಾಯಿದೆಯ ಮಾನ್ಯತೆ ಪ್ರಾಪ್ತವಾದರೆ ಪರಕೀಯ ರಾಷ್ಟ್ರಗಳು ಲಾಭದಾಸೆಯಿಂದ ಅವುಗಳನ್ನು ಅಲ್ಪಸ್ವಲ್ಪ ಬದಲಾಯಿಸಿದಂತೆ, ರೂಪಾಂತರಿಸಿದಂತೆ ಮಾಡಿ ಅವುಗಳ ಮೇಲೆ ಏಕಸ್ವಾಮ್ಯ ಹಕ್ಕುಗಳನ್ನು ಪಡೆದು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅವುಗಳಿಗಿರುವ ಬೇಡಿಕೆಯನ್ನು ಬಳಸಿಕೊಂಡು ತಾವೇ ಅವುಗಳ ಮೂಲ ಜನಕರೆಂದು ಪ್ರತಿಪಾದಿಸಿ ಏಕಸ್ವಾಮ್ಯ ಸ್ಥಾಪನೆ ಮಾಡಿಕೊಳ್ಳುವುದಕ್ಕೆ ತಡೆ ಹಾಕುತ್ತದೆ. ಆ ಮೂಲಕ ವಸ್ತುಗಳು ಮತ್ತು ಬೆಳೆಗಳ ಮೂಲ ದೇಶಗಳಿಗೆ ಅವುಗಳ ಲಾಭ ಪ್ರಾಪ್ತವಾಗದಂತೆ ತಡೆಯುವುದನ್ನು ಈ ನೊಂದಣಿ ಸಂಪೂರ್ಣವಾಗಿ ನಿರಾಕರಿಸಿ ಮೂಲ ಮಾಲೀಕ ಸಮುದಾಯಗಳಿಗೆ ರಕ್ಷಣೆಯನ್ನೊದಗಿಸುತ್ತದೆ.

ಈ ಶಾಸನ ಜಾರಿಗೆ ಬಂದ ನಂತರ ಇಲ್ಲಿಯವರೆಗೆ ಇಡೀ ದೇಶದಲ್ಲಿ ಸುಮಾರು 10 ಬೆಳೆಗಳಿಗೆ ಜಿ.ಐ. ಮಾನ್ಯತೆ ನೀಡಲಾಗಿದೆ.

ಪುಟ 11 ಕ್ಕೆ

ರಾಷ್ಟ್ರೀಯ ಮುಖಂಡರಾಗಿ ಬೆಳಗಿದ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್

ಮಹಾನ್ ದೇಶಪ್ರೇಮಿ, ಜನ ಸಂಘಟಕ, ಅವಿರತ ಹೋರಾಟಗಾರ ಹರ್ಕಿಶನ್‌ಸಿಂಗ್ ಸುರ್ಜಿತ್‌ರವರ ದೇಹದ ಅಂತ್ಯ ಸಂಸ್ಕಾರ ಆಗಸ್ಟ್ 4 ರಂದು ನವದೆಹಲಿಯಲ್ಲಿ ನಡೆಯಿತು. ದೇಶದ ಗಣ್ಯಾತಿಗಣ್ಯರು, ಸಿಪಿಐ(ಎಂ) ಮುಖಂಡರು, ಅಪಾರ ಸಂಖ್ಯೆಯ ಕಾರ್ಯಕರ್ತರು, ಬಂಧುಗಳೂ ಪಾಲ್ಗೊಂಡ ಅಂತಿಮ ಯಾತ್ರೆಯಲ್ಲಿ ರಾಜ್ಯದಿಂದ ಪಾಲ್ಗೊಂಡ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ.ನಾಯರ್ ಸುರ್ಜಿತ್‌ರವರ ಬಗೆಗೆ ಇಲ್ಲಿ ಬರೆದಿದ್ದಾರೆ.




1964 ರಲ್ಲಿ ರಚನೆಗೊಂಡ ಸಿಪಿಐ(ಎಂ) ಪ್ರಥಮ ಪಾಲಿಟ್‌ಬ್ಯೂರೋ 'ನವರತ್ನ'ಗಳಲ್ಲಿ ಒಬ್ಬರಾಗಿ ಸುರ್ಜಿತ್

ಹರ್ಕಿಶನ್‌ಸಿಂಗ್ ಸುರ್ಜೀತ್‌ರವರು ಆಗಸ್ಟ್ 1 ರಂದು 92ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

14 ರ ಹದಿವಯಸ್ಸಿನಲ್ಲೇ ಭಗತ್‌ಸಿಂಗ್‌ರವರ ನೌಜವಾನ್ ಸಭಾ ಸದಸ್ಯರಾಗಿ ದೇಶದ ಸೇವೆಗೆ ತಮ್ಮನ್ನು ಮುಡುಪಿಟ್ಟು ಅವರು ಮುಂದೆ 1992 ರಲ್ಲಿ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ಏರಿದರು.

ಅವರ ಸಮರ್ಪಣಾಭಾವ ಮತ್ತು ಚಟುವಟಿಕೆಗಳು ನಮ್ಮ ಇತ್ತೀಚಿನ ಇತಿಹಾಸದ ಅತ್ಯಂತ ಕಠಿಣ ಸಮಯದಲ್ಲಿ ಎದ್ದು ಕಾಣುವಂತವು. ಅವರು ಎಡಪಂಥೀಯ ಆಂದೋಲನದ ಒಳಗೂ ಮತ್ತು ಹೊರಗೂ ಒಬ್ಬ ರಾಷ್ಟ್ರೀಯ ಮುಖಂಡನಾಗಿ ವಿಕಾಸಗೊಂಡುದ್ದನ್ನು ಬೆಳಗಿದ್ದನ್ನೂ ಇದು ತೋರಿಸಿದೆ.

ರಾಷ್ಟ್ರೀಯ ಆಂದೋಲದಲ್ಲಿ ಅವರ ಸುದೀರ್ಘ ಅವಧಿಯ ಪಾತ್ರದಲ್ಲಿ ನಾವು 1930 ರಿಂದ 1947ರವರೆಗೆ ಮೊದಲ ಹಂತ ವನ್ನು ಕಾಣಬಹುದು. ನಿಸ್ಸಂದೇಹವಾಗಿಯೂ ಇದು ವಸಾಹತುಶಾಹಿ ವಿರೋಧಿ ಹಂತ. ಈ ಹಂತದ



ಅಂತಿಮ ಪಯಣ, ಹೆಗಲು ಕೊಟ್ಟ ಯೆಚೂರಿ, ಕಾರಟ್....

ಆರಂಭದಲ್ಲೇ ಕಾಂ: ಸುರ್ಜಿತ್ ಹೋಶಿಯಾರ್‌ಪುರ ಧ್ವಜಾರೋಹಣದಲ್ಲಿ ತಮ್ಮ ದೃಢ ಬದ್ಧತೆಯನ್ನು ಮುಖಂಡಕತ್ವ ಗುಣವನ್ನು ಸ್ಥಾಪಿಸಿದರು. ನಂತರ ಅವರು ಸಮಾಜವಾದದ ದಾರಿಯನ್ನು ಆಯ್ದುಕೊಂಡರು. ಮೊದಲಿಗೆ ಇದು ಶಹೀದ್ ಭಗತ್‌ಸಿಂಗ್ ಮುಖಂಡರ ಮುಂದಿಟ್ಟು ಆರಂಭದ ಸ್ವರೂಪಾವಾಗಿತ್ತು. ನಂತರ ಅವರು ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿ, ಅದೇ ವೇಳೆಗೆ ಕಾಂಗ್ರೆಸ್ ಸಮರವಾದಿ ಪಕ್ಷದ ಮುಖಂಡರಾಗಿ ಈ ಹಾದಿಯಲ್ಲಿ ಮುಂದುವರೆದರು. ರೈತರ ನಡುವೆ ಸಾಮೂಹಿಕ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಸೈದ್ಧಾಂತಿಕ ಪ್ರಶ್ನೆಗಳಲ್ಲಿ ಹಿಡಿತ ಸಾಧಿಸುತ್ತಾ ಶ್ರಮಜೀವಿ ಸಮೂಹಗಳ ಹಿತಾಸಕ್ತಿಗಳ ಜೊತೆಗೆ ಅವರು ದೃಢವಾಗಿ ನಿಂತರು, ಅವರ ರಾಜ್ಯ ಇತರ ರಾಷ್ಟ್ರೀಯ ಮುಖಂಡರಂತೆ ದಾರಿ ತಪ್ಪಲಿಲ್ಲ.



ಬಹುಕಾಲದ ಒಡನಾಡಿ ಬಸುರವರೊಂದಿಗೆ ಸುರ್ಜಿತ್

ಸ್ವಾತಂತ್ರ್ಯದ ನಂತರದ ಅವಧಿಯಲ್ಲಿ 1947-1964 ಕಮ್ಯುನಿಸ್ಟ್ ಪಕ್ಷದ ಇತಿಹಾಸದಲ್ಲಿ ಮೊದಲು ನಮಗೆ ದೊರೆತ ಸ್ವಾತಂತ್ರ್ಯ ನಿಜವೋ, ಅಲ್ಲವೋ ಎಂಬ ಪ್ರಶ್ನೆ ಎದ್ದಿವೆ, ನಂತರ ಆಳುವ ವರ್ಗಗಳೊಂದಿಗೆ ಮೈತ್ರಿ ಬಳಸಬೇಕೋ ಅಥವಾ ವಿರೋಧಿಸಬೇಕೋ ಎಂಬ ಪ್ರಶ್ನೆ ಬಂತು. ಇದು ಕೊನೆಗೆ ಅವಿಭಾಜಿತ ಕಮ್ಯುನಿಸ್ಟ್ ಪಕ್ಷದ ವಿಭಜನೆಗೆ ಕಾರಣವಾಯಿತು. ಈ ಎಲ್ಲಾ ಪ್ರಶ್ನೆಗಳಲ್ಲಿ ಕಾಂ:ಸುರ್ಜೀತ್ ಜನಸಮೂಹಗಳ ಹೋರಾಟಗಳ ಆಧಾರದಲ್ಲಿ ಒಂದು ನೇತೃತ್ವದ ಪಾತ್ರ ವಹಿಸಿದ್ದರು. ಸರಿಯಾದ ನಿಲುವು ತಳೆದರು. ಕಮ್ಯುನಿಸ್ಟ್ ಪಕ್ಷ ಮರು ಸಂಘಟನೆಗೊಂಡು ಸಿಪಿಐ(ಎಂ) ಆಯಿತು.

ನಂತರದ ಅವಧಿಯಲ್ಲಿ ಅವರು ದಕ್ಷಿಣ ಪಂಜಾಬ್ ರಾಜ್ಯ ಸಮಿತಿಗೆ ನೇತೃತ್ವ ನೀಡುತ್ತಲೇ, ಭಾರತದ ಕ್ರಾಂತಿಯ ಹಾದಿಯಾವುದು ಎಂಬ ಬಗ್ಗೆ 1964-75ರ ಅವಧಿಯಲ್ಲಿ ಎದ್ದ ಪ್ರಶ್ನೆಗಳನ್ನು ಸವಾಲುಗಳನ್ನು ಕುರಿತ ತೀವ್ರ ಚರ್ಚೆಗಳಲ್ಲಿ ಭಾಗಿಯಾದರು.

ಅವರು ಸಿಪಿಐ(ಎಂ)ನ ಜಾಲಂಧರ್ ಮಹಾಧಿವೇಶನ(1978) ರ ಮುಖ್ಯ ಸಂಘಟಿತರಾಗಿ ಅವರ ಸಿದ್ದತೆಯಲ್ಲಿ ಹಗಲಿರುಳು ಶ್ರಮಿಸಿದರು. ಸಾಲ್ಕಿಯಾ ಪ್ಲೀನಂ ನಂತರ ದಿಲ್ಲಿಯಲ್ಲಿ ಅವರು ಪಟ್ಟಶ್ರಮದಿಂದ ಪಕ್ಷದ ಅಖಿಲ ಭಾರತ ಕೇಂದ್ರ ಆರಂಭಗೊಂಡು, ಗಟ್ಟಿಗೊಳ್ಳಲು ಸಾಧ್ಯವಾಯಿತು.

1992-2005 ರದ್ದು ಕೊನೆಯ ಘಟ್ಟ. ಇದು ಸೋವಿಯೆತ್ ಒಕ್ಕೂಟ ಇಲ್ಲವಾದ ನಂತರದ ಕಾಲಾವಧಿಯಲ್ಲಿ ಅಂತರಾಷ್ಟ್ರಿಯ ಕಮ್ಯೂನಿಸ್ಟ್ ಆಂದೋಲನ ಗಂಭೀರ ಸವಾಲುಗಳನ್ನು ಎದುರಿಸಬೇಕಾಗಿ ಬಂದ ಅವಧಿ.

ಈ ಅವಧಿಯಲ್ಲಿ ಕಾಂ:ಸುರ್ಜೀತ್ ಪಕ್ಷದ ಮುಖ್ಯಸ್ಥರಾಗಿದ್ದರು. ಇಂತಹ ಸವಾಲುಗಳ ನಡುವೆ ಅವರು ಸಿಪಿಐ(ಎಂ)ನ್ನು ದೇಶದ ಎಡ ಆಂದೋಲನ ಪ್ರಮುಖ ತುಕಡಿಯಾಗಿ ಮಾಡುವಲ್ಲಿ ಮಾತ್ರವಲ್ಲ, ಅದು ಅಂತರಾಷ್ಟ್ರೀಯ ರಂಗದಲ್ಲಿಯೂ ಪ್ರಮುಖ ಪಾತ್ರ ವಹಿಸುವಲ್ಲಿ ಮುಖಂಡತ್ವ ನೀಡಿದರು.

ದೇಶದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ನೇತಾರನಾಗಿ ಹಾಗೂ ಮಾರ್ಕ್ಸ್‌ವಾದ-ಲೆನಿನ್‌ವಾದ ಹಾಗೂ ಶ್ರಮ ಜೀವಿಗಳ ಅಂತರಾಷ್ಟ್ರೀಯತೆಗೆ ಬದ್ಧವಾದ ಒಂದು ಕಮ್ಯುನಿಸ್ಟ್ ಪಕ್ಷವಾಗಿ ಸಿಪಿಐ(ಎಂ)ನ ಅವರ ಮುಖಂಡತ್ವದ ಈ ಅವಧಿಯಲ್ಲಿ ಪ್ರಮುಖ ಪಾತ್ರ ವಹಿಸಿತು.

ಭಾರತೀಯ ರಾಜಕಾರಣದಲ್ಲಿ ಕಾಂ: ಸುರ್ಜಿತ್‌ರವರ ನಿರ್ಣಾಯಕ ಪಾತ್ರವನ್ನು ವಿವಿಧ ರಾಜಕೀಯ ಪಕ್ಷಗಳ ಮುಖಂಡರೂ ಒಪ್ಪಿಕೊಳ್ಳುತ್ತಾರೆ. ನಮಗೆ ಭಾರತೀಯ ಜನತೆಯ ಸೇವೆಗೆ ಸಮರ್ಪಿಸಿಕೊಂಡ ಕಮ್ಯುನಿಸ್ಟ್‌ರಿಗೆ ಅವರ ಬದುಕು, ಬದ್ಧತೆ ಮತ್ತು ಸಾಧನೆಗಳು ಸ್ವಾತಂತ್ರ್ಯದ ಮೊದಲಾಗಲೀ, ನಂತರವಾಗಲೀ ಅಥವಾ ಪ್ರಸಕ್ತ ಸಮಯದಲ್ಲಾಗಲೀ ಭಾರತೀಯ ಕಮ್ಯುನಿಸ್ಟ್ ವಿರುದ್ಧ ಮಾಡುವ ಅಪಾದನೆಗಳಿಗೆ ತಕ್ಕ ಉತ್ತರ ನೀಡಲು ನೆರವಾಗುವ ಉಜ್ವಲ ಉದಾಹರಣೆಗಳು.



ಅಂತಿಮ ಪಯಣದಲ್ಲಿ ನೆರೆದ ಜನ

ಗಲಭೆ ಪಿತೂರಿ ಬಯಲಾದ ಶ್ರೀರಾಮಸೇನೆ ಸಂಚು

ಬೆಂಗಳೂರಿನಲ್ಲಿ ಕೋಮುಗಲಭೆ ಸೃಷ್ಟಿಸಲು ಸಂಚು ಮಾಡಿದ ಕಿಡಿಗೇಡಿಗಳು ಸಿಕ್ಕಿಬಿದ್ದಿದ್ದಾರೆ. ಅವರು ಯಾರೆಂದು ನೋಡಿ

ಬೆಂಗಳೂರಿನ ಜೆ.ಸಿ.ನಗರದಲ್ಲಿ ಇತ್ತೀಚೆಗೆ ಮುಸ್ಲೀಮರ ಪವಿತ್ರ ಸ್ಥಳವನ್ನು ಅಪವಿತ್ರಗೊಳಿಸಿ ಕೋಮುಗಳ ನಡುವೆ ಅಶಾಂತಿ ಸೃಷ್ಟಿಸಲು ಕೆಲವು ಶಕ್ತಿಗಳು ಪ್ರಯತ್ನಪಟ್ಟಿದ್ದರಿಂದ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಈ ದುಷ್ಟ ಶಕ್ತಿಗಳ ಜಾಡು ಹಿಡಿದು ತನಿಖೆ ನಡೆಸಲಾಗಿ ಬಯಲಾದ ಸಂಗತಿ ಏನೆಂದರೆ ಆ ಶಕ್ತಿಗಳು ಬೇರಾರು ಅಲ್ಲ. ಮುತಾಲಿಕ್ ನೇತೃತ್ವದ ಶ್ರೀರಾಮಸೇನೆ.

ಬೆಳಗಿನ ಜಾವ ಕಣ್ಮುಚ್ಚಿ ಬಾಗಿಲು ತೆರೆವ ಸಮಯ ಆತಂಕ. ಆಕ್ರೋಶ...,. ಜೆ.ಸಿ.ನಗರದ ಮಸೀದಿ ಎದುರು ಹಂದಿ ತಲೆ ಬಿದ್ದಿತ್ತು. ಕ್ಷಣಾರ್ಧರಲ್ಲಿ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು... ಜನ ಜಾತ್ರೆ.... ಗಲಭೆಯ ಸೂಚನೆ.... ಆದರೂ ಜನ ತಾಳ್ಮೆಯಿಂದ ವರ್ತಿಸಿದ್ದು, ಗಲಭೆಗೆ ಅವಕಾಶ ಕೊಡದೆ ಸಹನೆಯಿಂದ ವರ್ತಿಸಿ ತಕ್ಷಣವೇ ಪೊಲೀಸರಿಗೆ ತಿಳಿಸಲಾಗಿ ಪರಿಸ್ಥಿತಿ ಸಂಪೂರ್ಣ ನಿಯಂತ್ರಣ. ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಜನರ ಸಹನೆಯನ್ನು ಮೆಚ್ಚಲೇಬೇಕು. ಜನತೆ ನಿಜಕ್ಕೂ ಅಭಿನಂದನಾರ್ಹರು.

ಪರಿಸ್ಥಿತಿ ಶಾಂತಗೊಂಡಿದ್ದನ್ನು ಸಹಿಸದ ಈ ಶಕ್ತಿಗಳು ಅಲ್ಲಲ್ಲಿ ಕೋಮುಗಳನ್ನು ಎತ್ತಿಕಟ್ಟಿ ಗಲಭೆಗೆ ಪ್ರಯತ್ನಿಸಿದರಾದರೂ ಪ್ರಯೋಜನವಾಗಲಿಲ್ಲ.

ಶಾಂತಿಸಭೆ

ಮಸೀದಿ ಸಮಿತಿ ಹಾಗೂ ನೌಜವಾನ್ ಸಭಾದ ಯುವಜನರು ಸೇರಿದಂತೆ ಪ್ರಮುಖರ ಸಭೆ ನಡೆಸಿ ಗಲಭೆಗೆ ಅವಕಾಶ ಕೊಡದಂತೆ ಕೋರಲಾಗಿದೆ. ಆಗಬಹುದಾದ ಅನುಹುತವನ್ನು ಯಶಸ್ವಿಯಾಗಿ ತಡೆಯಲಾಗಿದೆ.

ಪರಿಸ್ಥಿತಿಯನ್ನು ಅವಲೋಕಿಸಿದಾಗ ಕಂಡ ಅಂಶಗಳೇನೆಂದರೆ ಇದೊಂದು ಪೂರ್ವಯೋಜಿತ ಕೃತ್ಯ ಹಾಗೂ ಸಂಪೂರ್ಣವಾಗಿ ಹೊರಗಿನವರ ಕೈವಾಡವಿರುವುದು ಸ್ಪಷ್ಟವಾಗಿದೆ.

ಪರಿಸ್ಥಿತಿಯ ಹಿಂದೆ ಜನರ ಧಾರ್ಮಿಕ ಭಾವನೆಗಳನ್ನು ಉದ್ರೇಕಿ ರಾಜಕೀಯ ಧೃವೀಕರಣದಿಂದ ಲಾಭ ಮಾಡಲು ಬಯಸಿರುವ ಶ್ರೀರಾಮಸೇನೆ ಈ ಕೃತ್ಯಕ್ಕೆ ಕಾರಣ ಎಂಬುದು ತನಿಖೆಯಿಂದ ದೃಢಪಟ್ಟಿದೆ:

ತಲೆ ಕೆಳಗಾದ ಶ್ರೀರಾಮಸೇನೆ ಪ್ರಯತ್ನ

ಮುತಾಲಿಕನ ಶ್ರೀರಾಮ ಸೇನೆಯ ಪುಂಡರ ಗುಂಪು ಇಂಗು ತಿಂದ ಮಂಗನಂತಾಗಿದೆ. ಪುಂಡರ ಗುಂಪಿನ ಶೈಲೇಶ್, ನಂದೀಶ್ ಮತ್ತು ಬಾಬು ಎಂಬುವವರನ್ನು ಬಂಧಿಸಲಾಗಿ ತೀವ್ರ ವಿಚಾರಣೆ ನಂತರ ಈ ವಿಷಯ ಬಯಲಾಗಿದೆ. ಈ ಮೂವರು ಗಲಭೆಗೆ ಇನ್ನೂ ಹಲವರ ಕೈವಾಡದ ಬಗ್ಗೆ ಮಾಹಿತಿಯನ್ನೂ ನೀಡಿದ್ದಾರೆ.

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಬಾಂಬ್ ಸ್ಫೋಟಕ್ಕೂ ಈ ಕೋಮು ಗಲಭೆಗೂ ಸಾಮ್ಯತೆ ಇರುವುದು. ಎರಡೂ ದುಷತ್ಯಗಳೂ ಏಕ ಉದ್ದೇಶದೊಂದಿಗೆ ನಡೆಸಿದ ಪೂರ್ವಯೋಜಿತ ವ್ಯವಸ್ಥಿತ ಪಿತೂರಿ... ಈ ಎರಡು ಗುಂಪುಗಳು ದೇವರ ಹೆಸರಿನಲ್ಲಿ ಮಾಡಿದ್ದು ದ್ರೋಹವೇ ಸರಿ.

ಗಮನಿಸಬೇಕಾದ ಮತ್ತೊಂದು ಅಂಶ ಇದು ಗುಜರಾತ್ ಮಾದರಿಯನ್ನು ಹೋಲುತ್ತದೆ. ಸೂಕ್ಷ್ಮ ಪ್ರದೇಶವನ್ನು ಹುಡುಕಿ ಜನರ ಧಾರ್ಮಿಕ ಭಾವನೆ ಕೆರಳಿಸಿ ಜನರ ಮಾರಣ ಹೋಮ ನಡೆಸುವ ಭಾರಿ ದೊಡ್ಡ ಸಂಚಾಗಿದೆ. ಜನರ ಐಕ್ಯತೆಯನ್ನು ಮುರಿಯುವ ಸುಲಿಗೆಕೋರರ ಜನವಿರೋಧಿ ನೀತಿಗಳನ್ನು ರಕ್ಷಿಸುವ ಒಳಸಂಚು ಇದಾಗಿದೆ.

ಇತ್ತೀಚೆಗೆ ಶ್ರೀರಾಮಸೇನೆಯ ಮುತಾಲಿಕ್ ಆತ್ಮಹತ್ಯೆ ದಳಗಳನ್ನು ರಚಿಸಿದ್ದೇವೆಂದು ಘೋಷಿಸಿದ್ದು, ಈ ಮೂಲಕ ಸರಣಿ ಹತ್ಯೆ ನಡೆಸುವ ಕುರಿತು ಬಹಿರಂಗ ಹೇಳಿಕೆ ನೀಡಿರುವುದು ಮೇಲಿನ ಘಟನೆಯನ್ನು ಪುಷ್ಟೀಕರಿಸುತ್ತದೆ.

ಘಟನೆಗೆ ಸಂಬಂಧಿಸಿದಂತೆ ಸಿಪಿಐ(ಎಂ ಬೆಂಗಳೂರು ಜಿಲ್ಲಾ ಸಮಿತಿ ನಿಯೋಗ ಸ್ಥಳಕ್ಕೆ ಭೇಟಿ ನೀಡಿ ಜನತೆ ಸಹನೆಯಿಂದ ವರ್ತಿಸಬೇಕೆಂದು ಮನವಿ ಮಾಡಿತ್ತು. ಪರಿಸ್ಥಿತಿಯನ್ನು ಅವಲೋಕಿಸಿ ಶಕ್ತಿಗಳನ್ನು ತಕ್ಷಣವೇ ಬಂಧಿಸಬೇಕೆಂದು ಆಗ್ರಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ನಿಯೋಗದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ಪ್ರಸನ್ನಕುಮಾರ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯರಾದ ಅಮಾನುಲ್ಲಾಖಾನ್, ವಕೀಲರ ಸಂಘದ ಮುಖಂಡರಾದ ಟಿ.ನಾರಾಯಣಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಅನುಮಾನದ ಹುತ್ತ

ಘಟನೆಯಲ್ಲಿ ಶ್ರೀರಾಮಸೇನೆಯು ನೇರ ಕೈವಾಡವಿದ್ದರೂ ಸರ್ಕಾರ ಈ ವಿಚಾರದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಲಿದೆಯೇ ಎಂಬ ಅನುಮಾನದ ಹುತ್ತ ಹೊಕ್ಕಿದೆ. ಜೆ.ಪಿ.ನಗರ ಹೆಬ್ಬಾಳ ವಿಧಾನಸಭಾ ಕ್ಷೇತ್ರ ಬಿಜೆಪಿಯಿಂದ ಕಟ್ಟಾಸುಬ್ರಮಣ್ಯನಾಯ್ಡು ಗೆದ್ದಿದ್ದಾರೆ. ರಾಜ್ಯದ ಚುಕ್ಕಾಣಿಯೂ ಇವರ ಕೈಯಲ್ಲಿದೆ. ಹೀಗಾಗಿ ಸತ್ಯ ಹೊರಬರಬಹುದೇ ಎಂಬ ಪ್ರಶ್ನೆ ಎದುರಾಗಿದೆ. ಆದಿ ಉಡುಪಿಯಲ್ಲಿ ನಡೆದ ಬೆತ್ತಲೆ ಪ್ರಕರಣದಲ್ಲಿ ವಿಶ್ವ ಹಿಂದೂ ಪರಿಷತ್‌ನ ನೇರ ಕೈವಾಡ ಇದ್ದಾಗ್ಯೂ ಸಾಕ್ಷ್ಯಗಳ ಬರದ ಕಾರಣ ನೀಡಿ ಖುಲಾಸೆಯಾಗಲಿಲ್ಲವೇ....!

ಸತ್ಯ ಬಹಿರಂಗವಾಗಬೇಕಿದೆ. ಇದು ಎಲ್ಲಾ ಶಾಂತಿಪ್ರಿಯ ಜನರ ಆಗ್ರಹವಾಗಿದೆ. ರಾಜ್ಯ ಸರ್ಕಾರ ನಿಷ್ಪಕ್ಷಪಾತ ತನಿಖೆಗೆ ಕ್ರಮ ವಹಿಸುವುದೇ....? ○

ಕೂಲಿಕಾರರ ಮೇಲೆ ಭೂ ಮಾಲೀಕರ ದಬ್ಬಾಳಿಕೆಗೆ ಪೊಲೀಸರದ್ದೇ ಕುಮ್ಮಕ್ಕು

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನಲ್ಲಿ ಇತ್ತೀಚೆಗೆ ಭೂ ಮಾಲೀಕರ ದೌರ್ಜನ್ಯ ದಬ್ಬಾಳಿಕೆ ಹೆಚ್ಚಾಗಿವೆ. ಈ ಭೂ ಮಾಲೀಕರಿಗೆ ಸಂಘ ಪರಿವಾರದ ಸಂಪೂರ್ಣ ಬೆಂಬಲವಿದೆ. ಇದಕ್ಕೆ ರಕ್ಷಣೆಯಾಗಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾದ ಶಿವರಾಜ ತಂಗಡಗಿಯವರ ಸಹಾಯ- ಸಹಕಾರವಿದೆ. ಗೋನಾಳ ಗ್ರಾಮದಲ್ಲಿ ನೂರಾರು ಎಕರೆ ಸರ್ಕಾರಿ ಭೂಮಿ ಇದೆ. ಆದರೆ ಮಂಜೂರಿದಾರರಿಗೆ ಮತ್ತು ದಲಿತರಿಗೆ, ಕೂಲಿಕಾರರಿಗೆ ಭೂಮಿಯ ಸಾಗುವಳಿಯ ಯೋಗವಿಲ್ಲ. ಭೂ ಮಾಲೀಕರ ಭೂಮಿಗೆ ಹೊಂದಿಕೊಂಡಿರುವ ಸರ್ಕಾರಿ ಭೂಮಿಯನ್ನು ಭೂ ಮಾಲೀಕರೇ ಸಾಗುವಳಿ ಮಾಡಬೇಕೆನ್ನುವುದು ಮತ್ತು ಕೆಲವು ಕಂದಾಯ ಅಧಿಕಾರಿಗಳ ಕೆಲವು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ (ಸ್ವಂತ) ಆದೇಶವಾಗಿದೆ. ಇದೇ ಗೋನಾಳ ಗ್ರಾಮದ ಮಾಲೀಕರಾದ ಅಮರೇಶಪ್ಪನವರದೇ ಇಲ್ಲಿ ಸರ್ವಾಧಿಕಾರ. ಸರ್ಕಾರಿ, ಗಾಂವಠಾಣಾ ಜಮೀನುಗಳನ್ನು ಮನೆ ನಿವೇಶನಕ್ಕಾಗಿ ಇವರೇ ಅಳತೆ ಮಾಡಿ ಕೊಟ್ಟು ಬಡವರಿಂದ 50,000 ರೂಪಾಯಿವರೆಗೂ ಹಣ ಪಡೆದು ಕೊಳ್ಳುತ್ತಿದ್ದರು. ಇದನ್ನು ಪ್ರತಿಭಟಿಸಲು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ರಚನೆಯಾಗಿ ಕೂಲಿಕಾರರಿಗೆ ಪಂಚಾಯತ್ ವತಿಯಿಂದ ಉಚಿತವಾಗಿ ಮನೆ ನಿವೇಶನಗಳನ್ನು ಕೊಡಿಸುವಲ್ಲಿ ಸಫಲರಾದರು. ಇದನ್ನು ಸಹಿಸದ ಅಮರೇಶಪ್ಪ ಗೋನಾಳ ಇವರು ಆಗಿನ ಗ್ರಾಮೀಣ ಠಾಣೆಯ ಪೋಲೀಸ್ ಅಧಿಕಾರಿಯಾದ ಗುರುಬಸವರಾಜ ಇವರ ಬೆಂಬಲದೊಂದಿಗೆ ಬಸವರಾಜ ಎನ್ನುವ ಪರಿಶಿಷ್ಟ ಪಂಗಡದ ಯುವಕನ ಕೊಲೆ ಮಾಡಿಸಿದರು. ನೆಪಮಾತ್ರಕ್ಕೆ ಸಿಓಡಿ ತನಿಖೆ ಮಾಡಿಸಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಪ್ರಕರಣವನ್ನು ಮುಚ್ಚಿ ಹಾಕಿದರು. ದಲಿತರ ಗುಡಿಸಲುಗಳನ್ನು ತನ್ನ ಬೆಂಬಲಿಗರೊಂದಿಗೆ ಕಿತ್ತು ಹಾಕಿದರು ಮತ್ತು ದಲಿತರ ಮೇಲೆ ದಬ್ಬಾಳಿಕೆ ನಡೆಸಿ ತಾವೇ ಮೊದಲು ಪ್ರಕರಣ ದಾಖಲಿಸಿ ಕೂಲಿಕಾರರಿಗೆ ಪ್ರಾಣ ಬೆದರಿಕೆ ಹಾಕಿದರು. ಇಲ್ಲಿಂದ ಭೂ ಮಾಲೀಕರ ದಬ್ಬಾಳಿಕೆ ಆರಂಭವಾಯಿತು.

ಅಮರೇಶಪ್ಪನ ಪಟ್ಟಾ ಜಮೀನು ಸ.ನಂ.18ರಲ್ಲಿ 36 ಎಕರೆ ಇದೆ. ಇದನ್ನು ಹೊಂದಿಕೊಂಡಂತೆ ಸರ್ಕಾರಿ ಭೂಮಿ ಸ.ನಂ.19 ಇದೆ. ಮತ್ತು ಹನವಾಳ, ಭಟ್ಟರ ಹಂಚಿನಾಳ ಸೀಮಾ ಇದೆ. ಇಲ್ಲಿಯೂ ಸಹ ಕೂಲಿಕಾರರಿಗೆ ಸರ್ಕಾರಿ ಭೂಮಿ ಮಂಜೂರಿಯಾಗಿದ್ದನ್ನು ಅಮರೇಶಪ್ಪನು ಭೂಮಿಯಿಂದ ಓಡಿಸಿದ್ದಾನೆ. ಪ್ರಸ್ತುತ ಈಗ 2-17 ಸರ್ಕಾರಿ ಭೂಮಿ ಸ.ನಂ.19 ನ್ನು ಭೂ ರಹಿತ ಕೂಲಿಕಾರರು ಸುಮಾರು 8-10 ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಈಗ ತನ್ನ ಭೂಮಿಯನ್ನು ನ್ಯಾಯಾಲಯದಿಂದ ಡಿಕ್ರಿ ಮಾಡಿಸಿಕೊಂಡು ಅಳತೆ ಮಾಡಿಸಿದರು. ಈಗಲೂ ಅಳತೆ ಮಾಡುವ ಸರ್ವೆಯರ್‌ಗಳು ಆತನ ಹೇಳಿಕೆಯಂತೆಯೇ ಅಳತೆ ಮಾಡಿ 36 ಎಕರೆ ಭೂಮಿಯ ಬದಲಾಗಿ 40 ಎಕರೆ ಅಳತೆ ಮಾಡಿ 36 ಎಕರೆ ಇದೆ ಎಂದು ಹೇಳಿ ಕಲ್ಲು ಹಾಕಿ ಬೌಂಡರಿ ನಿಗದಿ ಮಾಡಿ ಹೋದರು. ಪೋಲಿಸರು ಈ ಅಳತೆ ಕಾರ್ಯದ ವಿಡಿಯೋ ಮಾಡಿಕೊಂಡರು. ಈಗ ಅಳತೆ ಮಾಡಿ ಹಾಕಿದ ಕಲ್ಲುಗಳನ್ನು ಅಮರೇಶಪ್ಪನು ಕಿತ್ತುಹಾಕಿ ಈಗ ಸುಮಾರು 45-46 ಎಕರೆದಷ್ಟು ಭೂಮಿಯನ್ನು ಹಿಡಿದುಕೊಂಡಿದ್ದಾನೆ. ಪ್ರಸ್ತುತ ಕೂಲಿಕಾರರು ಸಾಗುವಳಿ ಮಾಡಿದವರನ್ನು ತನ್ನ ಗುಂಡಾ ಜನಗಳ ಮತ್ತು ಸಂಘಪರಿವಾರದವರಿಂದ ಕೂಲಿಕಾರರನ್ನು ಹೆದರಿಸಿ ಓಡಿಸಿದರು. ಸುಮಾರು 100-150 ಜನರು ಕೈಯಲ್ಲಿ ಕಬ್ಬಿಣದ ರಾಡು, ಬಡಿಗೆ ಮತ್ತು ಮಾರಕಾಸ್ತ್ರಗಳನ್ನು ತೆಗೆದುಕೊಂಡು ಕೂಲಿಕಾರರ ಮೇಲೆ ಹಲ್ಲೆಗೆ ಯತ್ನಿಸಿದರು. ಆಗ ಪೋಲೀಸರ ಮಧ್ಯಸ್ಥಿಕೆಯಿಂದ ಈ ಜಗಳ ನಿಲ್ಲಿಸಲಾಯಿತು. ಕಂದಾಯ ಇಲಾಖೆಯವರಿಂದ ಏನಾದರೂ ದಾಖಲೆಗಳನ್ನು ತೆಗೆದುಕೊಂಡು ನಮಗೆ ಇದೇ ಭೂಮಿಯೆಂದು ಸರ್ವೆದಾರರು ತೋರಿಸಿದರೆ ಅಂತಹ ಭೂಮಿಗೆ ನಿಮಗೆ ರಕ್ಷಣೆ ಕೊಡುತ್ತೇನೆಂದು ಸಿಪಿಐ ಶಾಂತಕುಮಾರ್ ಹೇಳಿದರು.

ಈಗ ಕೂಲಿಕಾರರ ಸಂಘದ ನೇತೃತ್ವದಲ್ಲಿ ಅನಿರ್ದಿಷ್ಟಕಾಲದ ಧರಣಿ ಸತ್ಯಾಗ್ರಹವನ್ನು 05.08.2008ರಿಂದ ಆರಂಭಿಸಲಾಗಿದೆ. ಈ ಹೋರಾಟ ಎಷ್ಟು ದಿನಗಳವರೆಗೆ ನಡೆಯುತ್ತದೆಯೋ ಗೊತ್ತಿಲ್ಲ. ಕಂದಾಯ ಅಧಿಕಾರಿಗಳು ಯಾವುದೇ ವಿಚಾರ ಮಾಡಿಲ್ಲ. ಇಂತಹ ಜನ ವಿರೋಧಿ ರಾಜ್ಯ ಸರ್ಕಾರದಲ್ಲಿ ಕೂಲಿಕಾರರ ಪ್ರಾಣಕ್ಕೆ ಬೆಲೆಯೇ ಇಲ್ಲದಾಗಿದೆ. ಸರ್ಕಾರದ ವಿರುದ್ಧ ಘೋಷಣೆ ಹಾಕುತ್ತಾ ಮಹಿಳೆಯರು. ಮಕ್ಕಳು ಕೂಲಿಕಾರರು ರಾತ್ರಿಯಲ್ಲಿ ಮಳೆಗೆ ನೆನೆದು ಚಳಿಗೆ ಮುದುರಿಕೊಂಡರೂ, ಹೋರಾಟ ಹಗಲು-ರಾತ್ರಿ ಸತತವಾಗಿ ಮುಂದುವರೆದಿದೆ. ಇದರ ನೇತೃತ್ವವನ್ನು ಹೆಚ್.ಗಂಗಾಧರಯ್ಯ, ಹೆಚ್.ಲಿಂಗಪ್ಪ, ಬಸವರಾಜ ಮರಕುಂಬಿ, ಬಸವರಾಜ ಗೋನಾಳ, ಹುಸೇನ್‌ಬಿ, ವರ್ತುಜಸಾಬ ವಹಿಸಿದ್ದಾರೆ. ○

ಇದೀಗ ಜನ-ವಿರೋಧಿ ನೀತಿಗಳ ಪರ್ವ! ಮತ್ತು ಬೃಹತ್ ಹೋರಾಟಗಳ ಪರ್ವ!

> ಒಂದೆಡೆ, ಇನ್ನು ಎಡಪಕ್ಷಗಳ ಅಂಕುಶವಿಲ್ಲವೆಂದು ಕಾರ್ಪೊರೇಟ್ ಕುಳಗಳ ಅತಿ ಲಾಭಗಳ ನಿರೀಕ್ಷೆಗಳನ್ನು ಈಡೇರಿಸಲು ಜನ-ವಿರೋಧಿ ಕ್ರಮಗಳನ್ನು ಆರಂಭಿಸಿಯೇ ಬಿಟ್ಟಿರುವ ಯುಪಿಎ ಸರಕಾರ, ಇನ್ನೊಂದೆಡೆ ಹಣದುಬ್ಬರ ತಡೆಯುವ ಹೆಸರಿನಲ್ಲಿ ಕೈಗೊಳ್ಳುತ್ತಿರುವ ಕ್ರಮಗಳೂ ಜನಗಳ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸುತ್ತಿವೆ. ದುಡಿಯುವ ಜನಗಳು ತಮ್ಮ ಜೀವನ ಮಟ್ಟವನ್ನು ಉಳಿಸಿಕೊಳ್ಳಲು ಬೃಹತ್ ಹೋರಾಟಗಳಿಗೆ ಸಿದ್ಧರಾಗುತ್ತಿದ್ದಾರೆ.

ಯುಪಿಎ ಸರಕಾರ ಸಮಾಜವಾದಿ ಪಕ್ಷದ ಬೆಂಬಲ ಮತ್ತು ಕುದುರೆ ವ್ಯಾಪಾರದಿಂದ ಬದುಕುಳಿದ ಒಂದೇ ವಾರದೊಳಗೆ ಪ್ರತಿಗಾಮಿ ಆರ್ಥಿಕ ನೀತಿಗಳನ್ನು ಆರಂಭಿಸಿಯೇ ಬಿಟ್ಟಿದೆ. ಕಾರ್ಮಿಕರ ಮತ್ತು ನೌಕರರ ದೀರ್ಘ ಕಾಲದ ಉಳಿತಾಯವಾದ ಭವಿಷ್ಯ ನಿಧಿಯ ನಿರ್ವಹಣೆಯನ್ನು ಖಾಸಗಿ ಹಣಕಾಸು ಸಂಸ್ಥೆಗಳಿಗೆ ವಹಿಸಿಕೊಟ್ಟು ಅವರು ಅದನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸಲು ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಕಾರ್ಮಿಕರಿಗೆ ಇದುವರೆಗೆ ಸಿಗುತ್ತಿದ್ದ ಗ್ಯಾರಂಟಿ ಪ್ರತಿಫಲ ಇನ್ನು ಮುಂದೆ ಸಿಗಲಿಕ್ಕಿಲ್ಲ, ಅದು ಇನ್ನು ಶೇರು ಮಾರುಕಟ್ಟೆಯ ತೇಜಿ-ಮಂದಿಗಳನ್ನೆ ಅವಲಂಬಿಸಿರುತ್ತದೆ. ಕಾರ್ಮಿಕರು ಮತ್ತು ನೌಕರರು ದೀರ್ಘ ಹೋರಾಟಗಳಿಂದ ಪಡೆದಿದ್ದ ಸೌಲಭ್ಯವಿದು. ಭವಿಷ್ಯ ನಿಧಿಯ ಮೊತ್ತ ಈಗ ಸುಮಾರು 3ಲಕ್ಷ ಕೋಟಿ ರೂಪಾಯಿಗಳು ಎಂಬುದನ್ನು ಇಲ್ಲಿ ಗಮನಿಸಬೇಕು. ಇಷ್ಟೊಂದು ಅಗಾಧ ಬಂಡವಾಳ ಇನ್ನು ಖಾಸಗೀ ಬಂಡವಾಳಿಗರ ಹತೋಟಿಗೆ ಒಳಪಡುತ್ತದೆ.

ಯುಪಿಎ ಸರಕಾರದ ಮೇಲೆ ಈಗ ಎಡಪಕ್ಷಗಳ ಅಂಕುಶವಿಲ್ಲ ಎಂದು ಆನಂದ ಪರವಶರಾಗಿರುವ ಭಾರತದ ಕಾರ್ಪೊರೇಟ್ ಕುಳಗಳ ನಿರೀಕ್ಷೆಗಳನ್ನು ಪೂರೈಸುವ, ಅವರ ಲಾಭಗಳನ್ನು ಹೆಚ್ಚಿಸುವ ಇನ್ನೂ ಹಲವು ಜನ-ವಿರೋಧಿ ಕ್ರಮಗಳನ್ನು ಕೈಗೊಳ್ಳಲು ಹಣಕಾಸು ಮಂತ್ರಿಗಳು ಕಾತುರರಾಗಿದ್ದಾರೆ ಎಂಬುದು ಅವರ ಮಾತುಗಳಿಂದ, ಹೇಳಿಕೆಗಳಿಂದ ಹೊಮ್ಮಿ ಬರುತ್ತಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಈಗ ಹಣದುಬ್ಬರ ತಡೆಯಲೆಂದು ಪ್ರಕಟಪಡಿಸಿರುವ ಕ್ರಮಗಳು ಕೂಡ ಜನಗಳಿಗೆ ಬೆಲೆಯೇರಿಕೆಗಳಿಂದ ಪರಿಹಾರ ಒದಗಿಸುವ ಬದಲು ಇನ್ನಷ್ಟು ಹೊರೆಗಳನ್ನು ಹಾಕುತ್ತವೆ. ಈಗ ಬೆಲೆಯೇರಿಕೆ ಆಗಿರುವುದು ಜನಗಳ ಬಳಿ ಹೆಚ್ಚು ಹಣವಿದೆ, ಅದಕ್ಕೆ ಅನುಗುಣವಾಗಿ ಸರಕುಗಳು ಆರ್ಥಿಕತೆದಲ್ಲಿ ಇಲ್ಲ ಎಂಬ ಕಾರಣದಿಂದಾಗಿ ಎಂಬುದು ನಮ್ಮನ್ನು ಆಳುವವರ ಭಾವನೆ. ಆದ್ದರಿಂದ ಆರ್ಥಿಕದಲ್ಲಿ ಹಣದ ಹರಿವನ್ನು ಕಡಿಮೆ ಮಾಡಿದರೆ ಹಣದುಬ್ಬರ ಇಳಿಯುತ್ತದೆ ಎಂಬುದು ಅವರ ಬಳಿಯಿರುವ ಪರಿಹಾರ. ಆದ್ದರಿಂದಲೇ ರಿಸರ್ವ್ ಬ್ಯಾಂಕ್ ಜುಲೈ 29ರಂದು ಪ್ರಕಟಿಸಿದ ಕ್ರಮವೆಂದರೆ ಬಡ್ಡಿದರಗಳನ್ನು ಹೆಚ್ಚಿಸುವುದು. ಆದರೆ ನಮ್ಮ ದೇಶದ 70 ಶೇಕಡ ಜನಗಳ ದಿನದ ಆದಾಯ ಕೇವಲ 20 ರೂಪಾಯಿಯೆಂದು ಸರಕಾರ ನೇಮಿಸಿದ ತಜ್ಞರೇ ಹೇಳುತ್ತಿರುವಾಗ ಜನಗಳ ಕೈಗಳಲ್ಲಿ ಬಹಳ ಹಣ ಹರಿದಾಡುತ್ತಿದೆ ಎಂಬ ಭಾವನೆಯೇ ಅರ್ಥಹೀನ, ಅಸಂಬದ್ಧವೆನಿಸುವುದಿಲ್ಲವೇ?

ಬೆಲೆಯೇರಿಕೆ ಏಕೆ?

ಈಗ ಕಾಣುತ್ತಿರುವ ಬೆಲೆಯೇರಿಕೆ, ಹಣದುಬ್ಬರ ಸಂಭವಿಸಿರುವುದು ಆವಶ್ಯಕ ಸರಕುಗಳ ಬೆಲೆಗಳು ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಏರಿರುವುದ ರಿಂದಾಗಿಯೇ ಹೊರತು, ಆರ್ಥಿಕದಲ್ಲಿ ಹಣದ ಪೂರೈಕೆ ಹೆಚ್ಚಿದುದರಿಂದ ಅಲ್ಲ. ವಿಶ್ವ ಆಹಾರ ಬೆಲೆಗಳಲ್ಲಿ ಮತ್ತು ತೈಲಬೆಲೆಗಳಲ್ಲಿ ಹೆಚ್ಚಳ ಇದಕ್ಕೆ ಕೊಡುಗೆ ನೀಡಿದೆ. ಅದಕ್ಕಿಂತಲೂ ಮುಖ್ಯವಾಗಿ, ಭಾರತದಲ್ಲಿ ಆಹಾರ ಬೆಲೆಗಳು ಏರಲು ಕಾರಣ ಆಹಾರ ಸರಕುಗಳ ವ್ಯಾಪಾರದಲ್ಲಿ ವ್ಯಾಪಕವಾಗಿರುವ ಜೂಜುಕೋರತನ. ಎಡಪಕ್ಷಗಳ ನಿರಂತರ ಒತ್ತಡಗಳ ನಂತರ ಸರಕಾರ ಕೆಲವು ಸರಕುಗಳಲ್ಲಿ ವಾಯಿದಾ ವ್ಯಾಪಾರವನ್ನು ನಿಷೇಧಿಸಿತು. ಆದರೆ ಸಂಸದೀಯ ಸ್ಥಾಯೀ ಸಮಿತಿ ಆಗ್ರಹಿಸಿದಂತೆ ಎಲ್ಲ 25 ಸರಕುಗಳಲ್ಲಿ ಇದನ್ನು ಪ್ರತಿಬಂಧಿಸಿಲ್ಲ.

ಆಮದಾದ ಖಾದ್ಯತೈಲಗಳ ಬೆಲೆಗಳನ್ನು ಇಳಿಸಲು ಅಲ್ಲದಿದ್ದರೂ, ಅದನ್ನು ಹತೋಟಿಯಲ್ಲಿಡಲು ಅವುಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಮಾಫಿ ಮಾಡಲಾಯಿತು. ಆದರೂ ಅವುಗಳ ಬೆಲೆಗಳು ಏರುತ್ತಲೇ ಇವೆ. ಏಕೆ? ಖಾಸಗೀ ವ್ಯಾಪಾರಿಗಳು ಆಮದು ಮಾಡಿಕೊಂಡ ಎಣ್ಣೆ ಎಲ್ಲಿ ಹೋಯಿತು? ಅವು ಬೆಲೆಗಳನ್ನು ಇಳಿಸಲು ಮಾರುಕಟ್ಟೆ ಯನ್ನಂತೂ ಪ್ರವೇಶಿಸಲಿಲ್ಲ. ಇನ್ನಷ್ಟು ಬೆಲೆಗಳು ಏರಲಿವೆ ಎಂಬ ನಿರೀಕ್ಷೆಯಿಂದ ಅವು ಕಳ್ಳದಾಸ್ತಾನಿನಲ್ಲಿವೆ. ಈ ಕಳ್ಳದಾಸ್ತಾನುಗಳಿಗೆ ಬ್ಯಾಂಕ್ ಸಾಲಗಳು ಎಷ್ಟು ನೆರವು ನೀಡಿವೆ ಎಂದು ಪರಾಮರ್ಶಿಸಿ ಮೇ 15ರೊಳಗೆ ವರದಿ ಮಾಡಬೇಕು ಎಂದು ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕ್ ಹೇಳಿತ್ತು. ಆದರೆ ಈ ಪರಾಮರ್ಶೆಗಳು ಏನು ಹೇಳಿವೆ ಎಂಬುದನ್ನು ರಿಸರ್ವ್ ಬ್ಯಾಂಕ್ ಬಹಿರಂಗ ಪಡಿಸಿಲ್ಲ.

ಆಹಾರಧಾನ್ಯಗಳ ಉತ್ಪಾದನೆ ಹೆಚ್ಚಿದೆ, ಸರಕಾರದಿಂದ ಧಾನ್ಯ ಸಂಗ್ರಹಣೆಯೂ ಹೆಚ್ಚಿದೆ. ಆದರೂ ಬೆಲೆಗಳು ಏರುತ್ತಲೇ ಇವೆ. ಹೀಗಾಗುತ್ತಿರುವುದು ರಿಸರ್ವ್ ಬ್ಯಾಂಕ್ ಭಾವಿಸಿದಂತೆ ಆರ್ಥಿಕದಲ್ಲಿ ಹಣದ ಚಲಾವಣೆ ಅಗತ್ಯಕ್ಕಿಂತ ಹೆಚ್ಚಿಗಿರುವುದರಿಂದ ಅಲ್ಲ, ಬದಲಾಗಿ ಈ ಆಹಾರ ಸರಕುಗಳಲ್ಲಿ ಯಾವುದೇ ಅಂಕುಶವಿಲ್ಲದ ವ್ಯಾಪಾರ ಮತ್ತು ಜೂಜುಕೋರತನದಿಂದಾಗಿ. ಇಂತಹ ವ್ಯವಹಾರವನ್ನು ಪ್ರತಿಬಂಧಿಸದೆ ಬೆಲೆಯೇರಿಕೆ ತಡೆಯುವ ಬೇರೆ ಯಾವುದೇ ಕ್ರಮ ಸಫಲವಾಗುವುದಿಲ್ಲ. ಬೆಲೆಯೇರಿಕೆ ತಡೆಯಬೇಕೆಂದಿದ್ದರೆ ಕೈಗೊಳ್ಳಬೇಕಾದ ಮೊದಲ ಕ್ರಮ ಇದು.

ತೈಲ ಬೆಲೆಗಳು ಇಳಿದಿವೆ

ಕಳೆದ ಕೆಲವು ವಾರಗಳಲ್ಲಿ ಅಂತರ್ರಾಷ್ಟ್ರೀಯ ತೈಲ ಬೆಲೆಗಳು ಇಳಿದಿವೆ. ಬ್ಯಾರಲ್ಲಿಗೆ 145 ಡಾಲರುಗಳಿಂದ 125 ಡಾಲರುಗಳಿಗೆ ಬಂದಿದೆ. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆಯೇರಿತೆಂದು ಇಲ್ಲಿಯೂ ತೀವ್ರವಾಗಿ ಬೆಲೆಯೇರಿಸಿದ ಸರಕಾರ ಅಲ್ಲಿ ಇಳಿದಾಗ ಇಲ್ಲಿಯೂ ಇಳಿಸಬೇಕಾಗಿತ್ತು. ಇದು ಸಾರ್ವತ್ರಿಕ ಬೆಲೆಯೇರಿಕೆಯನ್ನು ತಡೆಯುವಲ್ಲಿ ಬಹಳ ಸಹಾಯಕವಾಗುತ್ತಿತ್ತು. ಇದನ್ನು ತುರ್ತಾಗಿ ಮಾಡಬೇಕಿತ್ತು. ಆದರೆ ಈ ಸರಕಾರಕ್ಕೆ ತೈಲ ಕಂಪನಿಗಳ ಲಾಭವೇ ಮುಖ್ಯ. ತಮ್ಮ ಸ್ವಂತ ಪರಿಶ್ರಮವೇನೂ ಇಲ್ಲದೆ ಕೇವಲ ಮಾರುಕಟ್ಟೆ ಬೆಲೆಗಳಿಂದ ಖಾಸಗಿ ಕಂಪನಿಗಳು ಒಮ್ಮೆಲೇ ಮಾಡಿಕೊಂಡ ಅಪಾರ ಲಾಭಗಳ ಮೇಲೆ, ಅಮೆರಿಕಾದಲ್ಲಿ ಮಾಡಿದಂತೆ ತೆರಿಗೆ ಹಾಕಲು ಈ ಸರಕಾರ ನಿರಾಕರಿಸುತ್ತಿದೆ.

ತೈಲ ಬೆಲೆಗಳನ್ನು ಏರಿಸಬಾರದೆಂದು ಎಡಪಕ್ಷಗಳು ದೇಶಾದ್ಯಂತ ಪ್ರತಿಭಟಿಸಿದರೂ ಸಾರ್ವಜನಿಕ ವಲಯದ ಕಂಪನಿಗಳ ಆರೋಗ್ಯ ಕಾಪಾಡಲು ತೈಲ ಬೆಲೆಯೇರಿಕೆ ಅಗತ್ಯ ಎಂದು ಹೇಳಲಾಯಿತು. ಒಎನ್‌ಜಿಸಿ(ತೈಲ ಮತ್ತು ಅನಿಲ ಕಂಪನಿ)ಯ ನಿವ್ವಳ ಲಾಭ ಈ ಆರ್ಥಿಕ ವರ್ಷದ ಮೊದಲ ಮೂರು ತಿಂಗಳಲ್ಲಿ 44 ಶೇಕಡಾದಷ್ಟು ಹೆಚ್ಚಿದೆ ಎಂದು ಜುಲೈ 28 ರಂದು ಪ್ರಕಟವಾಗಿದೆ. ಲಾಭದ ಪ್ರಮಾಣ 6636 ಕೋಟಿ ರೂಪಾಯಿಗಳು! ಇದರಲ್ಲಿ ಸ್ವಲ್ಪವಾದರೂ ಹಣ ಬಳಸಿ ಜನಗಳ ಮೇಲಿನ ಬೆಲೆಯೇರಿಕೆಯ ಹೊರೆಯನ್ನು ತಪ್ಪಿಸಲು ಸಾಧ್ಯವಿರಲಿಲ್ಲವೇ? ಇದರಿಂದ ಒಟ್ಟಾರೆ ಯಾಗಿ ಹಣದುಬ್ಬರವನ್ನೂ ತಡೆಯ ಬಹುದಿತ್ತು. ಏಕೆಂದರೆ ಬಹಳಷ್ಟು ಉತ್ಪಾದನಾ ಚಟುವಟಿಕೆಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳು ಪ್ರಮುಖ ವಾಗಿ ಬೇಕಾಗುತ್ತವೆ. ಅವುಗಳ ಬೆಲೆಗಳೇರಿದರೆ ಈ ಎಲ್ಲಾ ಉತ್ಪಾದನೆಗಳ ಬೆಲೆಗಳೂ ಏರಿ ಹಣದುಬ್ಬರ ದರವೂ ಏರುತ್ತದೆ.

ಆದ್ದರಿಂದ ಬೆಲೆಯೇರಿಕೆಯ ಮೇಲೆ ಹತೋಟಿ ಪಡೆಯಬೇಕೆಂದಿದ್ದರೆ ಪೆಟ್ರೋಲಿಯಂ ಉತ್ಪನ್ನಗಳ ದರಗಳನ್ನು ಇಳಿಸಬೇಕಾದ್ದು ಸರಕಾರ ಕೈಗೊಳ್ಳಬೇಕಾದ ಎರಡನೇ ಕ್ರಮ.

ಮೂರನೆಯದಾಗಿ, ಆಹಾರ ಧಾನ್ಯಗಳ ಸಂಗ್ರಹಣೆ ಈ ವರ್ಷ ಉತ್ತಮಗೊಂಡಿರುವ ಹಿನ್ನೆಲೆಯಲ್ಲಿ ತಕ್ಷಣವೇ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು ಸಾಧ್ಯವಿದೆ.

ಇನ್ನಷ್ಟು ಹಣದುಬ್ಬರ, ನಿರುದ್ಯೋಗ

ಇಂತಹ ಕ್ರಮಗಳ ಜೊತೆಗೆ ಕೃಷಿಯಲ್ಲಿ ಹೂಡಿಕೆಗಳನ್ನು ಗಮನಾರ್ಹವಾಗಿ ಹೆಚ್ಚಿಸಿ ಪೂರೈಕೆ ಹೆಚ್ಚಿಸುವ ದೀರ್ಘಾವಧಿ ಕ್ರಮದತ್ತ ಅಗತ್ಯ ಮುತುವರ್ಜಿ ವಹಿಸುವ ಬದಲು, ಕೇಂದ್ರ ಸರಕಾರ ಮತ್ತು ರಿಸರ್ವ್ ಬ್ಯಾಂಕ್ ಕೇವಲ ಹಣ ಪೂರೈಕೆಯ ಮೇಲೆ ಮಿತಿ ಹಾಕುವ ಕ್ರಮಗಳಿಗೆ ಮೊರೆ ಹೋಗುತ್ತಿದೆ. ಇವು ಹಣದುಬ್ಬರವನ್ನು ತಡೆಯುವಲ್ಲಿ ಪರಿಣಾಮಕಾರಿಯೇನೂ ಆಗುವುದಿಲ್ಲ ಎಂಬುದು ಖಂಡಿತ. ಅಷ್ಟೇ ಅಲ್ಲ, ಅದನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆಗಳೇ ಬಹಳ. ಏಕೆಂದರೆ, ಇವು ಬೆಳವಣಿಗೆಯನ್ನು ನಿಧಾನಗೊಳಿಸುತ್ತವೆ. ಈಗಾಗಲೇ ಇರುವ ಹಣದುಬ್ಬರದಿಂದ ಕಚ್ಚಾವಸ್ತುಗಳ ಬೆಲೆಗಳು ಹೆಚ್ಚಿವೆ. ಈಗ ಸರಕಾರದ ಈ ಕ್ರಮದಿಂದ ಉತ್ಪಾದನೆಗೆ ಬೇಕಾಗುವ ಬಂಡವಾಳದ ಖರ್ಚು ಕೂಡ (ಅಂದರೆ ಬಡ್ಡಿದರ) ಹೆಚ್ಚಿ ಉತ್ಪಾದನಾ ವೆಚ್ಚಗಳು ಇನ್ನಷ್ಟು ಹೆಚ್ಚುತ್ತವೆ. ಸಾಮಾನ್ಯವಾಗಿ ಈ ಹೆಚ್ಚಿದ ವೆಚ್ಚದ ಭಾರವನ್ನೂ ಬಳಕೆದಾರರ ಮೇಲೆಯೆ ಮತ್ತಷ್ಟು ಬೆಲೆಯೇರಿಕೆಗಳ ಮೂಲಕ ವರ್ಗಾಯಿಸಲಾಗುತ್ತದೆ ಎಂಬುದು ನಮ್ಮ ಅನುಭವ. ಇದೀಗ ಈ ರಿಸರ್ವ್ ಬ್ಯಾಂಕ್ ಕ್ರಮಗಳ ತರ್ಕ!

ಬಡ್ಡಿದರಗಳ ಏರಿಕೆಯಿಂದ ಸಾಲದ ವೆಚ್ಚಗಳ ಏರಿಕೆ ಉತ್ಪಾದನಾ ಮಟ್ಟವನ್ನೂ ತಟ್ಟುತ್ತದೆ. ಏಕೆಂದರೆ ವಾಣಿಜ್ಯ ಸಾಲಗಳನ್ನು ಅವಲಂಬಿಸಿರುವ ಉತ್ಪಾದನಾ ಘಟಕಗಳು ತಮ್ಮ ಖರ್ಚುಗಳನ್ನು ಹತೋಟಿಯಲ್ಲಿಡಲು ಉತ್ಪಾದನೆಯನ್ನು ಇಳಿಸುತ್ತವೆ. ಈಗಾಗಲೇ ಉತ್ಪಾದನಾ ವಲಯದ ಬೆಳವಣಿಗೆ ದರ ತೀವ್ರವಾಗಿ ಇಳಿಮುಖವಾಗಿದೆ. ಮೇ 2007 ರಲ್ಲಿ ಅದು 11.3 ಶೇ. ಇತ್ತು, ಮೇ 2008 ರಲ್ಲಿ ಅದು 3.8 ಶೇ. ಕ್ಕೆ ಇಳಿದಿದೆ. ಈಗಿನ ಬಡ್ಡಿದರ ಏರಿಕೆಯಿಂದ ಇದು ಇನ್ನಷ್ಟು ಕೆಳಗಿಳಿಯಬಹುದು. ಇದು ಉದ್ಯೋಗಾವಕಾಶಗಳನ್ನು ಕೂಡಾ ಕುಂಠಿತಗೊಳಿಸುತ್ತದೆ. ಅಂದರೆ ಹೆಚ್ಚಿದ ಹಣದುಬ್ಬರದೊಂದಿಗೆ ಹೆಚ್ಚಿದ ನಿರುದ್ಯೋಗ!

ಜೀವನಮಟ್ಟಗಳನ್ನು ರಕ್ಷಿಸಲು

ಆದರೆ ಈ ಕಥೆ ಇಲ್ಲಿಗೇ ಮುಗಿಯುವುದಿಲ್ಲ. ನಿರುದ್ಯೋಗ ಹೆಚ್ಚಿದರೆ ಜನಗಳ ಕೊಳ್ಳುವ ಶಕ್ತಿ ಇಳಿಯುತ್ತದೆ, ಅಂದರೆ ಆರ್ಥಿಕದಲ್ಲಿ ಬೇಡಿಕೆ ಇಳಿಮುಖವಾಗುತ್ತದೆ. ಇದರಿಂದ ಉತ್ಪಾದನೆ ಮತ್ತಷ್ಟು ಇಳಿಯುತ್ತದೆ. ಇದರಿಂದ ಕೈಗಾರಿಕಾ ಚಟುವಟಿಕೆಗಳು ಮಂದಗೊಂಡು ಹಿಂಜರಿತದ ಪರಿಸ್ಥಿತಿ ಉಂಟಾಗುತ್ತದೆ. ಅಂದರೆ ದುಡಿಯುವ

ಪುಟ 10ಕ್ಕೆ

ಜಮ್ಮು-ಕಾಶ್ಮೀರವನ್ನು ಆವರಿಸಿದೆ ದಳ್ಳುರಿ

ಜಮ್ಮು ಮತ್ತು ಕಾಶ್ಮೀರದಲ್ಲಿ ಪರಿಸ್ಥಿತಿ ಗಂಭೀರಗೊಂಡಿದೆ.ಆಗಸ್ಟ್ 6 ರಂದು ನವದೆಹಲಿಯಲ್ಲಿ ನಡೆದ ಸರ್ವ ಪಕ್ಷ ಸಭೆ ಜಮ್ಮುವಿನಲ್ಲಿ ನಡೆಯುತ್ತಿರುವ ಚಳುವಳಿ ಸ್ಥಗಿತಗೊಳಿಸಿ ಸಂವಾದ ಪ್ರಕ್ರಿಯೆ ಆರಂಭಗೊಳ್ಳುವಂತಹ ವಾತಾವರಣವನ್ನು ನಿರ್ಮಿಸಬೇಕು ಎಂದು ಒಕ್ಕೊರಲಿನಲ್ಲಿ ಕರೆ ನೀಡಿದೆ. ಈ ಸಭೆಯಲ್ಲಿ ಬಿಜೆಪಿಯೂ ಸೇರಿದಂತೆ ಎಲ್ಲ ಪಕ್ಷಗಳ ಪ್ರತಿನಿಧಿಗಳೂ ಇದ್ದರು. ಸಭೆಯಲ್ಲಿ ಪ್ರಧಾನ ಮಂತ್ರಿಗಳ ಮಾತುಗಳನ್ನು ಕೇಳಿದಾಗ ಇದು ಬಹಳ ತಡವಾಗಿ ನಡೆಯುತ್ತಿದೆ, ಈ ಮುತುವರ್ಜಿಯನ್ನು ಈ ಮೊದಲೇ ವಹಿಸಿದ್ದರೆ ಒಳ್ಳೆಯದಿತ್ತು ಎಂದು ಹಲವರಿಗೆ ಅನಿಸಿದೆ.

ಅಮರನಾಥ ಯಾತ್ರಾ ಸಂಘರ್ಷ ಸಮಿತಿ ನಡೆಸುತ್ತಿರುವ ಚಳುವಳಿ ಈಗ ನಲ್ವತ್ತು ದಿನಗಳನ್ನು ದಾಟಿದೆ. ಜಮ್ಮುವಿನಿಂದ ಕಾಶ್ಮೀರ ಕಣಿವೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಇದರಿಂದ ಕಾಶ್ಮೀರ ಕಣಿವೆಯ ಮೇಲೆ ಆರ್ಥಿಕ ದಿಗ್ಬಂಧನ ಹೇರಿದಂತಾಗಿದೆ. ಕಾಶ್ಮೀರದ ಜನಗಳಿಗೆ ಆವಶ್ಯಕ ಸಾಮಗ್ರಿಗಳು, ಔಷಧಿಗಳೂ ತಲುಪುತ್ತಿಲ್ಲ. ಅಲ್ಲಿನ ಸೇಬು ಮುಂತಾದ ಬೇಗನೇ ಹಾಳಾಗುವ ಉತ್ಪನ್ನಗಳು ಬಯಲು ಪ್ರದೇಶಗಳಿಗೆ ಬರುತ್ತಿಲ್ಲ. ಇದು ಕಾಶ್ಮೀರಿಗಳ ದೈನಂದಿನ ಬದುಕನ್ನೇ ತಟ್ಟಿದೆ. ಬಹಳಷ್ಟು ಹಿಂಸಾಚಾರ ನಡೆದಿದೆ.

ವಿವಾದ ಸೃಷ್ಟಿ

ಅಮರನಾಥ ತೀರ್ಥ ಮಂಡಳಿಗೆ ನೀಡಲಾಗಿದ್ದ ಭೂಮಿಯನ್ನು ಕಾಶ್ಮೀರ ಕಣಿವೆಯ ಜನಗಳ ಒತ್ತಡಕ್ಕೆ ಮಣಿದು ಹಿಂದಕ್ಕೆ ಪಡೆಯಲಾಗಿದೆ ಎಂಬ ಭಾವನೆ ಜಮ್ಮು ಭಾಗದಲ್ಲಿ ವ್ಯಾಪಕವಾಗಿದ್ದು ಇದರ ಸುತ್ತಲೇ ಈ ವಿವಾದ ಸೃಷ್ಟಿಯಾಗಿದೆ. ಆದರೆ ವಾಸ್ತವ ಸಂಗತಿ ಬೇರೆಯೇ ಆಗಿದೆ. ಕಾನೂನಿನ ಪ್ರಕಾರ ಯಾರಿಗೂ ಅರಣ್ಯ ಪ್ರದೇಶದ ಒಡೆತನವನ್ನು ವರ್ಗಾಯಿಸುವಂತಿಲ್ಲ. ಆದರೆ ಸರಕಾರ ಅದನ್ನು ಬಳಸಬಹುದಾದ ರೀತಿಯಲ್ಲಿ ಬದಲಾವಣೆಗೆ ಅವಕಾಶ ನೀಡಬಹುದು.

ಈ ಹಿಂದೆ ಇಲ್ಲಿಯ ರಾಜ್ಯ ಸರಕಾರ ಯಾತ್ರಾರ್ಥಿಗಳಿಗೆ ಸೌಲಭ್ಯಗಳನ್ನು ಒದಗಿಸಲು ಅರಣ್ಯ ಪ್ರದೇಶದ ಒಂದು ಭಾಗವನ್ನು ಮಂಡಳಿಗೆ ನೀಡಿತ್ತು. ಇದು ಕಾಶ್ಮೀರ ಕಣಿವೆಯಲ್ಲಿ ವಿವಾದಕ್ಕೆ ಕಾರಣವಾದ್ದರಿಂದ ಹೊಸದಾಗಿ ಬಂದ ರಾಜ್ಯಪಾಲರು ಹಿಂದಿನ ರಾಜ್ಯಪಾಲರ ನಿರ್ಣಯವನ್ನು ಹಿಂತೆಗೆದುಕೊಂಡರು. ಆದರೆ ಅದರ ಮೊದಲು ರಾಜ್ಯ ಸರಕಾರದಿಂದ ಅಮರನಾಥ ಯಾತ್ರಾರ್ಥಿಗಳಿಗೆ ಸಕಲ ಸೌಲಭ್ಯಗಳನ್ನೂ ಒದಗಿಸುವ ಭರವಸೆಯನ್ನು ಅವರು ಪಡೆದರು. ಈಗ ಜಮ್ಮು-ಕಾಶ್ಮೀರ ಸರಕಾರ ಯಾತ್ರಾರ್ಥಿಗಳಿಗೆ ಸೌಲಭ್ಯಗಳನ್ನು ಒದಗಿಸಿದ್ದು ಅಮರನಾಥ ಯಾತ್ರೆ ಸಾಂಗವಾಗಿ ನಡೆಯುತ್ತಿದೆ.

ಕಾಶ್ಮೀರ ಕಣಿವೆಯಲ್ಲಿನ ಚಳುವಳಿ ತಣ್ಣಗಾಗುತ್ತಿದ್ದಂತೆ ಈಗ ಜಮ್ಮು ಪ್ರದೇಶದಲ್ಲಿ ಚಳುವಳಿ 40 ದಿನಗಳಿಂದ ನಡೆಯುತ್ತಿದೆ. ಈ ದಳ್ಳುರಿಯನ್ನು ಕೂಡಲೇ ನಂದಿಸಬೇಕು, ಇಲ್ಲವಾದರೆ ಇದು ದೇಶದ ಐಕ್ಯತೆ ಮತ್ತು ಭದ್ರತೆಗೆ ಅಪಾಯ ತರಲಿದೆ. ಸರ್ವಪಕ್ಷಗಳ ಸಭೆ ಪರಿಸ್ಥಿತಿಯನ್ನು ತಿಳಿಗೊಳಿಸಲು ಸಂವಾದಕ್ಕೆ ಕರೆ ನೀಡಿದೆ.

ಈ ರೀತಿ ನೀಡಿದ ಭೂಮಿಯನ್ನು ಹಿಂತೆಗೆದುಕೊಂಡಿರುವುದು ಕೂಡಾ ಇದು ಮೊದಲ ಬಾರಿಯೇನೂ ಅಲ್ಲ. ರಾಜ್ಯಪಾಲರು ಅಮರನಾಥ ಕ್ಷೇತ್ರ ಮಂಡಳಿಯ ಪದನಿಮಿತ್ತ (ಎಕ್ಸ್-ಆಫಿಶಿಯೋ) ಅಧ್ಯಕ್ಷರಾಗಿದ್ದು ಈ ಹಿಂದೆ 2005ರಲ್ಲಿ ಕೂಡಾ ರಾಜ್ಯ ಸರಕಾರ ಮಂಡಳಿಗೆ ಭೂಮಿ ಒದಗಿಸಿತ್ತು. ನಂತರ ಆ ಆದೇಶವನ್ನು ಹಿಂದಕ್ಕೆ ಪಡೆದು ರಾಜ್ಯ ಸರಕಾರವೇ



ಕೃಪೆ: ಪ್ರಜಾವಾಣಿ

ಸ್ವತಃ ಎಲ್ಲ ಸೌಲಭ್ಯಗಳನ್ನು ಒದಗಿಸುವ ಹೊಣೆ ಹೊತ್ತಿತ್ತು. ಆಗ ಇಂತಹ ವಿವಾದವೇನೂ ಹುಟ್ಟಿಕೊಳ್ಳಲಿಲ್ಲ, ಇಂತಹ ಚಳುವಳಿ ನಡೆಯಲಿಲ್ಲ.

ಚುನಾವಣೆಗಳ ಮೇಲೆ ಕಣ್ಣು

ಆದರೆ ಈ ಬಾರಿ ಇಂತಹ ಚಳುವಳಿ ಏಕೆ ಎದ್ದು ಬಂತು ಎಂಬುದು ಸಹಜವಾಗಿ ಬರುವ ಪ್ರಶ್ನೆ. ಅದಕ್ಕೆ ಉತ್ತರವೂ ಸಾಕಷ್ಟು ಸ್ಪಷ್ಟವಾಗಿಯೇ ಇದೆ. ಈ ಅಕ್ಟೋಬರಿನಲ್ಲಿ ಜಮ್ಮು-ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಬೇಕಾಗಿದೆ. ಮುಂದಿನ ವರ್ಷದ ಆರಂಭದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಈ ಚುನಾವಣೆಗಳ ಮೇಲೆ ಕಣ್ಣಿಟ್ಟು ಈ ಚಳುವಳಿ ನಡೆಯುತ್ತಿರುವಂತೆ ಕಾಣುತ್ತದೆ. ಹಿಂದೂಗಳಿಗೆ ಯಾತ್ರೆ ನಡೆಸಲು ಬಿಡಲಾಗುತ್ತಿಲ್ಲ ಎಂದೆಲ್ಲಾ ವದಂತಿ ಹಬ್ಬಿಸಿ ಕೋಮುಭಾವನೆಗಳನ್ನು ಬಡಿದೆಬ್ಬಿಸಲಾಗುತ್ತಿದೆ. ಅತ್ತ ಕಾಶ್ಮೀರ ಕಣಿವೆಯಲ್ಲಿಯೂ ಉಗ್ರಗಾಮಿಗಳು ಉದ್ರೇಕಕಾರಿ ವಾತಾವರಣ ಸೃಷ್ಟಿಸುವ ಪ್ರಯತ್ನ ನಡೆಸಿದ್ದಾರೆ.

ಜಮ್ಮು-ಕಾಶ್ಮೀರವನ್ನು ಆವರಿಸಿರುವ ಈ ದಳ್ಳುರಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನೇ ಸುಟ್ಟು ಹಾಕುವ ಅಪಾಯ ಹೊಂದಿದೆ. ಕೇವಲ ಚುನಾವಣಾ ಮತ್ತು ರಾಜಕೀಯ ಲಾಭಕ್ಕಾಗಿ ಈ ಗಡಿ ರಾಜ್ಯದಲ್ಲಿ ಗಲಭೆಗಳನ್ನು ಸೃಷ್ಟಿಸಿ ದೇಶದ ಭದ್ರತೆಗೆ ಸಂಚಕಾರ ತರಲಾಗುತ್ತಿದೆ. ಅತ್ತ ಗಡಿಯಾಚೆಯಿಂದ ಭಯೋತ್ಪಾದನೆ ತಲೆಯೆತ್ತಲು ಫಲವತ್ತಾದ ನೆಲ ಒದಗಿಸಲಾಗುತ್ತಿದೆ. ಒಂದೆಡೆ ಬಿಜೆಪಿ ಮುಖಂಡತ್ವ ಸರ್ವ ಪಕ್ಷ ಸಭೆಯಲ್ಲಿ ಭಾಗವಹಿಸಿ ಇತರರೊಂದಿಗೆ ಸಂವಾದಕ್ಕೆ ಕರೆ ನೀಡಿದರೂ, ಇನ್ನೊಂದೆಡೆ ಆರೆಸ್ಸೆಸ್/ಬಿಜೆಪಿ ಈ ಪ್ರಶ್ನೆಯ ಮೇಲೆ ಮೂರು ದಿನಗಳ ಅಖಿಲ ಭಾರತ ಬಂದ್‌ಗೆ ಕರೆ ನೀಡಿರುವುದು ಅದು ತನ್ನ ವೋಟ್ ಬ್ಯಾಂಕ್ ರಾಜಕೀಯವನ್ನು ನಡೆಸಲಿಕ್ಕಾಗಿ ಕೋಮುಭಾವನೆಗಳನ್ನು ಬಡಿದೆಬ್ಬಿಸುತ್ತಿದೆ ಎಂಬುದನ್ನು ಸೂಚಿಸುತ್ತದೆ.

ತುರ್ತಾಗಿ ನಂದಿಸಬೇಕು

ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸಲು, ಕೋಮುಸೌಹಾರ್ದ ಮತ್ತು ಸಾಮಾಜಿಕ ಸೌಹಾರ್ದವನ್ನು ಉಳಿಸಿಕೊಳ್ಳಲು ಮತ್ತು ಆಧುನಿಕ ಭಾರತೀಯ ಗಣರಾಜ್ಯದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಕಾಪಾಡಿಕೊಳ್ಳಲು ಜಮ್ಮು-ಕಾಶ್ಮೀರವನ್ನು ಆವರಿಸಿದ ಈ ದಳ್ಳುರಿಯನ್ನು ತುರ್ತಾಗಿ ನಂದಿಸಬೇಕಾಗಿದೆ.

ನವದೆಹಲಿಯಲ್ಲಿ ನಡೆದ ಸರ್ವ ಪಕ್ಷ ಸಭೆಯ ಕರೆಯಂತೆ ತಕ್ಷಣವೇ ಸಂವಾದ ಪ್ರಕ್ರಿಯೆ ಆರಂಭವಾಗಬೇಕು ಮತ್ತು ಅಮರನಾಥ ಯಾತ್ರಾ ಸಂಘರ್ಷ ಸಮಿತಿ ತನ್ನ ಚಳುವಳಿಯನ್ನು ಸದ್ಯಕ್ಕೆ ಸ್ಥಗಿತಗೊಳಿಸಬೇಕು ಎಂಬುದು ಎಲ್ಲಾ ದೇಶಪ್ರೇಮಿಗಳ ಬಯಕೆ.

ಈಗಾಗಲೇ ಜಮ್ಮು-ಕಾಶ್ಮೀರದ ರಾಜ್ಯಪಾಲರಾದ ಎನ್. ಎನ್. ವೋರಾರವರು ಸಂಘರ್ಷ ಸಮಿತಿಯ ಮುಖಂಡರೊಂದಿಗೆ ಮಾತುಕತೆ ನಡೆಸಲು ನಾಲ್ವರು ಸದಸ್ಯರಿರುವ ಒಂದು ತಂಡವನ್ನು ಪ್ರಕಟಿಸಿದ್ದಾರೆ. ಜಮ್ಮು ವಿಶ್ವವಿದ್ಯಾಲಯದ ಉಪಕುಲಪತಿ ಅಮಿತಾಭ ಮಟ್ಟೂ, ರಾಜ್ಯ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಜಿ.ಡಿ. ಶರ್ಮ, ಮಾಜಿ ಮುಖ್ಯ ಕಾರ್ಯದರ್ಶಿ ಎಸ್.ಎಸ್. ಬಿಲ್ಲೋರಿಯ ಹಾಗೂ ರಾಜ್ಯಪಾಲರ ಪ್ರಮುಖ ಕಾರ್ಯದರ್ಶಿ ಬಿ.ಬಿ.ವ್ಯಾಸ್ ಈ ತಂಡದಲ್ಲಿದ್ದಾರೆ.

ಹಾವೇರಿಯಲ್ಲಿ ಗೊಬ್ಬರ ಕೇಳಿದ ರೈತರ ಎದೆಗೆ ಗುಂಡು ಹಾಕಿದ ಸರ್ಕಾರ ರಾಜ್ಯದೆಲ್ಲೆಡೆ ರೈತರ ಮೇಲೆ ಲಾಠಿ ಬೀಸಿದ್ದು ಆಯ್ತು. ಸದ್ಯ ಮಂಗಳೂರಿನಲ್ಲಿ ನೀರು ಕೇಳಿದ ಪ್ರತಿಭಟನಾಕಾರರ ತಲೆ ಹೊಡೆದು ರಕ್ತ ಹರಿಸಿದೆ. ಈ ಮೂಲಕ ಬಿಜೆಪಿ ತಾನೆಂದೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಗೌರವಿಸುವುದಿಲ್ಲವೆಂದು ಸಾಬೀತು ಪಡಿಸಿದೆ.

ತನಗೆ ಸರ್ಕಾರ ರಚಿಸಲು ರಾಜ್ಯಪಾಲರು ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕೆ ಬೆಂಗಳೂರಿನ ಗಾಂಧಿ ಪ್ರತಿಮೆ ಬಳಿ ಅಹೋ ರಾತ್ರಿ ಪ್ರತಿಭಟನೆ ನಡೆಸಿ ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕ ಎಂದು ಬೊಬ್ಬೆ ಹಾಕಿದ್ದರು. ಆದರೀಗ ಯಾರೂ ಚಳುವಳಿ ಮಾಡಬಾರದು ಎಂದು ಯಡಿಯೂರಪ್ಪ ಫರ್ಮಾನು ಹೊರಡಿಸಿದ್ದಾರೆ. ಈ ಮೂಲಕ ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಚಳುವಳಿಗಳ ಬಗ್ಗೆ ಬಿಜೆಪಿಗಿರುವ ಅಸಹನೆ ಎಂಥದ್ದು ಎಂದು ತೋರ್ಪಡಿಸುತ್ತಿದ್ದಾರೆ.

ಅಸಲಿಗೆ ಮಂಗಳೂರಿನಲ್ಲಿ ನಡೆದದ್ದೇನು....?

ಮಂಗಳೂರು ಮಹಾನಗರ ಪಾಲಿಕೆ ನೀರಿನ ಮೇಲಿನ ದರಗಳನ್ನು ಶೇ.400ರಷ್ಟು ಹೆಚ್ಚಿಸಿತ್ತು. ಅಲ್ಲದೆ ಬಿಲ್ ಪಾವತಿ ಹಣವನ್ನು ವಸೂಲಿ ಮಾಡಲು ಖಾಸಗಿಯವರಿಗೆ ವಹಿಸಲಾಗಿ ಭಾರಿ ಅವ್ಯವಹಾರವೇ ನಡೆದಿತ್ತು. ಪ್ರತೀ ಮನೆಗಳಿಗೆ ಲಕ್ಷಗಟ್ಟಲೆ ಬಾಕಿಗಳನ್ನು ತೋರಿಸಲಾಯ್ತು. ಗೂಂಡಾಗಿರಿಯ ಮೂಲಕ ಬೆದರಿಕೆ ಹಾಕಿ ಹಣ ವಸೂಲಿ ಮಾಡಲು ಮುಂದಾದಾಗ ಸಾರ್ವಜನಿಕರು ಭಯಭೀತರಾದರು. ಇದರಿಂದ ತೀರ ಆತಂಕ್ಕೊಳಗಾದ ಜನತೆ ಪಾಲಿಕೆಯ ಕ್ರಮದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪಾಲಿಕೆಯ ಈ ಕ್ರಮದ ವಿರುದ್ಧ ಕಳೆದ ಮೂರ್‍ನಾಲ್ಕು ತಿಂಗಳುಗಳಿಂದ ಡಿವೈಎಫ್‌ಐ ಹಾಗೂ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಹಲವಾರು ಬಾರಿ ಪ್ರತಿಭಟನೆ ನಡೆಸಿ ನೀರಿನ ದರ ಏರಿಕೆ ಹಾಗೂ ಖಾಸಗೀಕರಣ ಪ್ರಕ್ರಿಯೆಯನ್ನು ಕೈಬಿಡಬೇಕೆಂದು ಒತ್ತಾಯಿಸಲಾಗಿತ್ತು.



ಪಾಲಿಕೆಯ ಅಧಿಕಾರ ಹಿಡಿದಿರುವ ಬಿಜೆಪಿ, ಆ ಪಕ್ಷದ ಮೇಯರ್ ಗಣೇಶ್ ಹೊಸಬೆಟ್ಟು ಈ ಬಗ್ಗೆ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಮಾತ್ರವಲ್ಲ ಚಳುವಳಿಗಾರರನ್ನು ಉದ್ದಟತನದಿಂದ ಕಂಡಿದ್ದಾರೆ. ಕನಿಷ್ಠ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸುವ ಗೋಜಿಗೂ ಹೋಗಿಲ್ಲ. ಕಛೇರಿಯ ಒಳಗೆ ಕುಳಿತು ತಮ್ಮ ದರ್ಪ ಮೆರೆದಿದ್ದಾರೆ. ಹೀಗಾಗಿ ಪ್ರತಿಭಟನಾಕಾರರು ಪಾಲಿಕೆ ಆಯುಕ್ತರು ಅಥವಾ ಮೇಯರ್ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಬೇಕೆಂದು ಪೋಲೀಸ್ ಅಧಿಕಾರಿಗಳ ಮೂಲಕ ತಿಳಿಸಲಾಗಿಯೂ ಕೂಡ ಯಾವುದೇ ಪ್ರಯೋಜನವಾಗಲಿಲ್ಲ. ನಂತರ ನಡೆದದ್ದೇ ಪೋಲೀಸ್ ದೌರ್ಜನ್ಯ, ರಕ್ತಪಿಪಾಸುಗಳ ದರ್ಬಾರು.

ಪೋಲೀಸ್ ಪಶುಗಳ ಪೈಶಾಚಿಕ ದೌರ್ಜನ್ಯ

ಇದೊಂದು ಕಠಿಣ ಶಬ್ದಗಳಲ್ಲಿ ಖಂಡಿಸಬೇಕಾದ

ಜನಶಕ್ತಿ ಕನ್ನಡ ವಾರಪತ್ರಿಕೆ



ಹಾವೇರಿ ಗೋಲಿಬಾರ್‌ನಿಂದಾಗಿ ಇಬ್ಬರು ಅಮಾಯಕ ರೈತರು ಬಿಜೆಪಿ ಸರ್ಕಾರದ ತೀಟೆಗೆ ಬಲಿಯಾದಾಗ "ಇನ್ನೆಂದೂ ಪ್ರತಿಭಟನಾಕಾರರ ಮೇಲೆ ಬಲಪ್ರಯೋಗ ಮಾಡುವುದಿಲ್ಲ"ವೆಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ ಕೆಲವೇ ದಿನಗಳಲ್ಲಿ ಮಂಗಳೂರಿನಲ್ಲಿ ನೀರಿಗಾಗಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಪೊಲೀಸ್ ದೌರ್ಜನ್ಯ ನಡೆಸಿ ತಮದೊಂದು ಹಸಿ ಹಸಿ ಸುಳ್ಳುಗಾರ ಸರ್ಕಾರ, ದೌರ್ಜನ್ಯಕೋರ ಸರ್ಕಾರ ಎಂಬುದನ್ನು ಸಾಬೀತುಪಡಿಸಲಾಗಿದೆ.

ನೀರಿನ ಹಕ್ಕು ಕೇಳಿದವರ ತಲೆ ಒಡೆದ ಕೇಡಿಗರು

ಅಂಗರಾಜು

ಪೊಲೀಸ್ ದೌರ್ಜನ್ಯ. ಮಾತ್ರವಲ್ಲ ಪೂರ್ವನಿಯೋಜಿತವಾದ ಬಿಜೆಪಿಯ ಸಂಚು. ಪ್ರತಿಭಟನಾಕಾರರ ನಡುವೆ ನಸುಗುನ್ನಿಯಂತೆ ನುಗ್ಗಿದ 'ಚಡ್ಡಿ' ಗೂಂಡಾಗಳು ಗಲಭೆ ಎಬ್ಬಿಸುವ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ಒಬ್ಬಾತ ಪಕ್ಕದಲ್ಲಿದ್ದ ಕುರ್ಚಿಯಿಂದ ಪಿಎಸ್‌ಐಗೆ ಹೊಡೆದಿದ್ದಾನೆ. ಇದನ್ನೇ ನೆಪವಾಗಿಟ್ಟುಕೊಂಡು ಬಿಜೆಪಿಯ ಮೇಯರ್ ಪೊಲೀಸರನ್ನು ಛೂಬಿಟ್ಟು ಧಾಳಿ ನಡೆಸಲು ತನ್ನ ಶ್ವಾನಗಳಿಗೆ ಸೂಚನೆ ನೀಡಿದ್ದಾನೆ. ಪರಿಣಾಮ ಪ್ರತಿಭಟನಾಕಾರರ ತಲೆಯಿಂದ ಹರಿದು ಬಂತು ನೆತ್ತರು. ಪೊಲೀಸರ ಅಸಹ್ಯ, ಅಮಾನವೀಯ ವರ್ತನೆಗೆ ಬಲಿಯಾದರು ನೊಂದ ಸಾಮಾನ್ಯ ಜನ.



ದಬ್ಬಾಳಿಕೆ ಹಲ್ಲೆ

ಪಾಲಿಕೆ ಕಛೇರಿ ಎದುರು ಶಾಂತಿಯುತವಾಗಿ ಕುಳಿತು ಸತ್ಯಾಗ್ರಹ ನಡೆಸುತ್ತಿದ್ದ ಪ್ರತಿಭಟನಾಕಾರರ ಮೇಲೆ ಏಕಾಏಕಿ ಲಾಠಿ ಪ್ರಹಾರ ನಡೆಸಲಾಗಿದೆ. ಮಹಿಳೆಯರನ್ನು ಲೆಕ್ಕಿಸದ ಪುರುಷ ಪೇದೆಗಳು ಅತ್ಯಂತ ಅಮಾನುಷವಾಗಿ ರಕ್ತ ಬರುವವರೆಗೂ ಥಳಿಸಿದ್ದಾರೆ. ಇದರಿಂದಾಗಿ ಹಲವರಿಗೆ ಗಂಭೀರ ಸ್ವರೂಪದ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ



ಕೆಳಗೆ ಬಿದ್ದವರಿಗೂ ಬಡಿತ

ಪಡೆಯುತ್ತಿದ್ದಾರೆ. ಹಾಗಿದ್ದರೆ ನ್ಯಾಯ ಕೇಳೋದೆ ತಪ್ಪೇ....? ಬೆಲೆ ಏರಿಕೆಯ ಬಿಸಿಯಲ್ಲಿ ಬೆಂದ ಸಾಮಾನ್ಯ ಜನ ದರ ಏರಿಕೆ ನಿಲ್ಲಿಸಿ ಎಂದು ಮನವಿ ಮಾಡಲು ಬಂದಾಗ ಪೊಲೀಸರು ಇಷ್ಟೊಂದು ನಿರ್ದಾಕ್ಷಿಣ್ಯವಾಗಿ ನಡೆಸಿಕೊಳ್ಳುವುದು ಸರಿಯೇ?

ಬಿಜೆಪಿಯ ಏಜೆಂಟರಂತೆ, ಬಿಜೆಪಿ ಮುಖಂಡರ ತಾಳಕ್ಕೆ ತಕ್ಕಂತೆ ಕುಣಿದು ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸುವುದು ಅನ್ಯಾಯದ ಪರಮಾವಧಿ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆಯೇ ಎಂಬ ಬಗ್ಗೆ ಅನುಮಾನ ಮೂಡುವಂತೆ ಮಾಡಿದೆ. ಆದರೆ ಬಿಜೆಪಿಯವರು ಇದನ್ನು ಗುಜರಾತ್ ಮಾದರಿ ಅನ್ನಬಹುದೇನೋ....!

ಅಂದು ಎಲ್ಲಿ ಹೋಗಿತ್ತು ಇವರ ಪೌರುಷ .....?

ಬಿಜೆಪಿ ಸರ್ಕಾರದ ಸಚಿವ ಸಂಪುಟ ರಚನೆ ಸಂದರ್ಭದಲ್ಲಿ ತಮಗೆ ಸ್ಥಾನ ಸಿಗಲಿಲ್ಲವೆಂಬ ಕಾರಣಕ್ಕೆ ಆ ಪಕ್ಷದ ಶಾಸಕರು ರಾಜ್ಯದ ಹಲವೆಡೆ ಬಸ್ಸಿಗೆ ಬೆಂಕಿ ದಾಂಧಲೆ ನಡೆಸಿ ಕೋಟ್ಯಾಂತರ ರೂಪಾಯಿ ಸಾರ್ವಜನಿಕ ಆಸ್ತಿಪಾಸ್ತಿ ಹಾನಿ ಮಾಡುತ್ತಿದ್ದ ಸಂದರ್ಭದಲ್ಲಿ ಪೊಲೀಸರ ಇಂದಿನ ಪೌರುಷ ಅಂದು ಎಲ್ಲಿ ಹೋಗಿತ್ತು...? ಪಂಚೇಂದ್ರಿಯಗಳೇ ಇಲ್ಲದವರಂತೆ ವರ್ತಿಸಿದ್ದು ಯಾಕೆ...? ಪೊಲೀಸರ ಕಣ್ಣೆದುರೇ ದಾಂಧಲೆ ನಡೆಯುತ್ತಿದ್ದರೂ ಕನಿಷ್ಠ ತಡೆಯುವ ಪ್ರಯತ್ನ ಮಾಡಲಿಲ್ಲ ಯಾಕೆ....? ಈ ಪ್ರಶ್ನೆಗೆ ಪೊಲೀಸ್ ಇಲಾಖೆ ರಾಜ್ಯದ ಜನತೆಗೆ ಉತ್ತರಿಸಬೇಕಿದೆ. ಪೊಲೀಸ್ ಇಲಾಖೆ ಬಿಜೆಪಿಯ ಸ್ವಂತ ಇಲಾಖೆಯೇ? ಅವರು ಕಾನೂನು ಮೀರಿ ಏನು ಮಾಡಿದರೂ ಕಾನೂನು ಪರಿಪಾಲಕರಾದ ಪೊಲೀಸರು ಸುಮ್ಮನಿರಬೇಕೇ...? ಬಿಜೆಪಿ ತನ್ನೊಳಗಿನ ಎಲ್ಲಾ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಈ ರೀತಿ ಪೊಲೀಸರನ್ನು ತಮ್ಮ ಮನೆಯ ಆಳುಗಳಂತೆ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಅತ್ಯಂತ ಖಂಡನಾರ್ಹ.



ಬೆಂಗಳೂರಿನಲ್ಲಿ ಪ್ರತಿಭಟನೆ

ಚೆಡ್ಡಿ ಸೇವಕರಾಗಿರುವ ಪೊಲೀಸ್ ಅಧಿಕಾರಿಗಳು

ಪೊಲೀಸ್ ಇನ್ಸ್ ಪೆಕ್ಟರ್‌ಉಮೇಶ್ ಶೇಟ್, ಕದ್ರಿ ಇನ್ಸ್‌ಪೆಕ್ಟರ್ ಎಂ.ಕೆ.ಗಣಪತಿ ಹಾಗೂ ಸಬ್ ಇನ್ಸ್‌ಪೆಕ್ಟರ್ ನಾರಾಯಣ ಬೈಂದೂರು ಅವರು ಮೇಯರ್ ಗಣೇಶ್ ಹೊಸಬೆಟ್ಟುವಿನ ಸೇವಕರಂತೆ ವರ್ತಿಸುತ್ತಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಈ ಹಿಂದಿನ ಸಾಕಷ್ಟು ಪ್ರಕರಣಗಳಲ್ಲಿಯೂ ಇದು ಸಾಬೀತಾಗಿದೆ. ಈ ಘಟನೆಯಲ್ಲಿ ತನ್ನ ಬಾಸ್‌ನ ಆಣತಿಯಂತೆ ನಡೆದು ಕೊಂಡು ತಮ್ಮ ಸ್ವಾಮಿನಿಷ್ಠೆ ಮೆರೆದಿದ್ದಾರೆ. ಈ ಬಗ್ಗೆ ತನಿಖೆಯಾಗುವುದು ಅತ್ಯಗತ್ಯ. ಕರ್ತವ್ಯನಿಷ್ಠ ಮೆರೆಯಬೇಕಿರುವ ಇವರು ಬಿಜೆಪಿಯ ಬಾಲಬಡುಕರಂತೆ ವರ್ತಿಸುತ್ತಿರುವುದು ವಿಷಾದನೀಯ. ಇಂಥವರ ವಿರುದ್ಧ ಗಂಭೀರ ಕ್ರಮದ ಅಗತ್ಯವಿದೆ. ಈ ದಿಸೆಯಲ್ಲಿ ಸಿಪಿಐ(ಎಂ) ಹಾಗೂ ಡಿವೈಎಫ್‌ಐ ಈ ಇಬ್ಬರನ್ನೂ ಅಮಾನತ್ತಿನಲ್ಲಿರಿಸಬೇಕೆಂದು ಆಗ್ರಹಿಸಿವೆ.



ತಲೆಗೆ ಪೆಟ್ಟು ತಿಂದ ಹೋರಾಟಗಾರ್ತಿ

ಬಿಜೆಪಿಯ ಸೇಡಿನ ಪ್ರತೀಕಾರ

ಸಿಪಿಐ(ಎಂ) ಹಾಗೂ ಡಿವೈಎಫ್‌ಐ ಕರಾವಳಿಯಲ್ಲಿ ಕೋಮು ಸೌಹಾರ್ದತೆಗೆ, ಸಹಬಾಳ್ವೆಗಾಗಿ ರಾಜಿ ಇಲ್ಲದ ಹೋರಾಟ ನಡೆಸುತ್ತಿರುವುದೇ ಬಿಜೆಪಿಗೆ ನುಂಗಲಾರದ ತುತ್ತಾಗಿದೆ. ಹೀಗಾಗಿ ಸೇಡಿನ ರಾಜಕಾರಣ ಮಾಡುತ್ತಿರುವ ಬಿಜೆಪಿ ಈ ಘಟನೆಯ ಮೂಲಕ ತನ್ನೊಳಗಿನ ಬೇಗುದಿಯನ್ನು ಹೊರಹಾಕಿದೆ.


ಸದಾ ಒಂದಿಲ್ಲೊಂದು ವಿಷಯದಲ್ಲಿ ಜನತೆಯ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುವ ಸಂಘಪರಿವಾರಕ್ಕೆ ಸವಾಲಾಗಿ ನಿಂತದ್ದು ಸಿಪಿಐ(ಎಂ)-ಡಿವೈಎಫ್‌ಐ. ಸುಂದರ ಕರಾವಳಿಯನ್ನು ಗಲಭೆಯ ದ್ವೇಷದುರಿಯ ನಾಡಾಗಿ ಪರಿವರ್ತಿಸಿ ತನ್ನ ರಾಜಕೀಯ ಬೇಳೆ ಬೇಯಿಸಿ ಕೊಳ್ಳಲು ಹಪ ಹಪಿಸುತ್ತಿರುವ ಸಂಘಪರಿವಾರದ ಕೃತ್ಯಕ್ಕೆ ಹೆಜ್ಜೆಹೆಜ್ಜೆಗೂ ತಡೆಯೊಡ್ಡುತ್ತಿರುವ ಸಿಪಿಐ(ಎಂ) ಹಾಗೂ ಡಿವೈಎಫ್‌ಐಯನ್ನು ಮುಗಿಸಬೇಕೆಂದು ಈ ರೀತಿಯ ಧಾಳಿಗಳು ಪದೇ ಪದೇ ನಡೆಯುತ್ತಿರುವುದೇನು ಗೌಪ್ಯವಾಗಿ ಉಳಿದಿಲ್ಲ. ಇದರ ಸೇಡಿನ ಪ್ರತಿಕಾರಕ್ಕೆ ಡಿವೈಎಫ್‌ಐ ಸಂಘಟನೆ ತನ್ನ ಇಬ್ಬರು ಅಮೂಲ್ಯ ಸಂಗಾತಿಗಳನ್ನು ಕಳೆದುಕೊಂಡಿದೆ. ಅವರೇ ಕಾಮ್ರೇಡ್ ಭಾಸ್ಕರ್ ಕುಂಬ್ಳೆ ಹಾಗೂ ಕಾಂ.ಶ್ರೀನಿವಾಸ್ ಬಜಾಲ್.


ಕಸಾಯಿಖಾನೆ ವಿಚಾರದಲ್ಲಿ ಗಲಭೆ ಎಬ್ಬಿಸಲು ಪ್ರಯತ್ನಿಸಿದಾಗ, ಹಾಜಬ್ಬ, ಹಸನಬ್ಬರ ಬೆತ್ತಲೆಗೊಳಿಸಿದ ಪ್ರಕರಣ ಹೀಗೆ ಇಂತಹ ಸಾಲು ಸಾಲು ಪ್ರಕರಣಗಳಿಗೆ ಡಿವೈಎಫ್‌ಐ ಅತ್ಯಂತ ಸಮರ್ಥವಾಗಿ ರಕ್ತಪಿಪಾಸು ಸಂಘ ಪರಿವಾರದ ಬಣ್ಣವನ್ನು ಜನರ ಮುಂದೆ ಬಯಲು ಮಾಡಿತ್ತು. ಸಂಘಪರಿವಾರ ಕೋಮುದ್ವೇಷಕ್ಕೆ ನಿಂತಿದ್ದರೆ ಡಿವೈಎಫ್‌ಐ ಹಾಗೂ ಸಿಪಿಐ(ಎಂ) ಕೋಮು ಸೌಹಾರ್ದತೆಗೆ ಟೊಂಕಕಟ್ಟಿ ನಿಂತಿವೆ. ಸದಾ ಹಿಂದು-ಮುಸ್ಲೀಮರ ನಡುವೆ ಮತಾಂಧತೆಯ ಬೀಜ ಬಿತ್ತಿ ಜನರ ಮನಸ್ಸನ್ನು ಕಲುಷಿತಗೊಳಿಸುವುದನ್ನೇ ಉದ್ಯೋಗ ಮಾಡಿಕೊಂಡಿರುವ ಇವರಿಗೆ ಡಿವೈಎಫ್‌ಐ ಸಡ್ಡುಹೊಡೆದು ನಿಂತಿದೆ.

ಪ್ರತೀ ಸಂದರ್ಭವನ್ನೂ ಸೇಡು ತೀರಿಸಿಕೊಳ್ಳುವುದಕ್ಕೆ ಬಳಸಿಕೊಳ್ಳುತ್ತಿರುವ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ಆಗಸ್ಟ್ 04 ರಂದು

ಪುಟ 14 ಕ್ಕೆ

(ಚಿತ್ರ ಕೃಪೆ: 'ಕರಾವಳಿ ಅಲೆ')





"ಹ್ಯಾಂಗ ಮದಿ ಮಾಡ್ಕೊಳ್ಳಲಿ? ನಾ ಹ್ವಾದ ಮ್ಯಾಲ ನೀವೆಲ್ಲ ಹ್ಯಾಂಗ ಬದಕ್ತೀರಿ? ಖರೆ, ನಾ ತ್ವಾಟದ ಮಾಲಕನ ಜೊತೆಗೆ ಇದ್ದಿನಿ ಅಂತ ನಂಗ ಕೆಟ್ಟ ಹೆಸರ ಅದಾ. ಅಂವಾ ನಂಗೇನು ಕಡಿತನಕ ಕೈ ಹಿಡ್ಯಾಲ. ಅದೂ, ಗೊತ್ತದ. ಆದ್ರ ಬ್ಯಾರೆ ಹಾದಿ ಏನಿತ್ತು?" ಎಂಬ ಆಕೆಯ ನೋವಿಗೆ ಯಾರು ಹೊಣೆ?

ಎಲ್ಲ ಕಡೆಗೂ 'ಅವಳೇ' ಬಲಿ

ಬಹಳ ಮುತುವರ್ಜಿಯಿಂದ ಬಸಪ್ಪ ಮುತ್ಯಾ, ತೀರ ಬಡತನದ ಮನೆಯ ಹುಡುಗಿ ಸುಶೀಲಾಗೆ ಒಂದು ಚೆಂದದ ವರ ತಂದನು. ನಯಾ ಪೈಸೆ ವರದಕ್ಷಿಣೆ ಇಲ್ಲದೆ ಮದುವೆಯಾಗಲು ಮುಂದೆ ಬಂದ ಸುಂದರ ಹುಡುಗನನ್ನು ಸುಶೀಲಾ ತಿರಸ್ಕರಿಸಿದಾಗ ಬಸಪ್ಪಜ್ಜನಿಗೆ ಭಯಂಕರ ಸಿಟ್ಟು ಬಂದರೆ, ಇನ್ನು ಕೆಲವು ಜನ ಅರ್ಥಗರ್ಭಿತವಾಗಿ ಗುಟ್ಟೊಂದು ಬಲ್ಲವರಂತೆ ಮೂಗಿನಲ್ಲಿಯೇ ನಕ್ಕರು. ಮತ್ತೆ ಕೆಲವರು "ಹೂಂ ಅಂದ್ರ, ತನ್ನದೇ ಬಾಳ್ಯಾ ಹಸನಾಗ್ತಿತ್ತು. ಇಟ್ಕೊಂಡಾಂವ ಎಲ್ಲಿತನಾ...? ಅಂತ ಭೀಡೆ ಇಲ್ಲದೆ ಮಾತನಾಡಿದರು. ಸುಶೀಲಾ ಮಾತ್ರ ಖಡಾಖಂಡಿತವಾಗಿ ಸಧ್ಯಕ್ಕೆ ತನಗೆ ಮದುವೆ ಬ್ಯಾಡ ಎಂದು ಘೋಷಿಸಿದಳು. ಕಾರಣವೇನಿತ್ತು....?

..... ಸುಶೀಲಾ ಹಿರಿಯ ಮಗಳು. ಬೆನ್ನ ಹಿಂದೆಯೇ ಸಾಲುಗಟ್ಟಿ ನಾಲ್ಕು ತಂಗಿಯರು, ಮೂವರು ತಮ್ಮಂದಿರರು. ದಮ್ಮಿನಿಂದ ಎದೆ ಹಿಡಿದು ಉಸಿರುಗಟ್ಟಿ ತಂದೆ ಸಾಯುವಾಗ ಮುರುಕು ಗುಡಿಸಲೆಲ್ಲ ಜಾಡಿಸಿದರೂ ಹತ್ತು ರೂಪಾಯಿ ಇರಲಿಲ್ಲ. ಹೆತ್ತು ಮತ್ತು ದುಡಿದು ಹೈರಾಣಾದ ತಾಯಿಯೂ ಬಲುಬೇಗ ಮೂಲೆ ಹಿಡಿದಳು. ದಿನವೆಲ್ಲ ದುಡಿದು ಬಂದ ಕೂಲಿಯಲ್ಲಿ ಗಂಜಿ ಕುಡಿದು ದಿನ ತಳ್ಳುತ್ತಿದ್ದರು. ಸುಶೀಲಾ, ತನ್ನ ತಾಯಿ ಹೋಗುವ ತೋಟದ ಕೆಲಸ ತಾನೂ ಮುಂದುವರೆಸಿದಳು. ಕೂಲಿಯೊಂದಿಗೆ ಮನೆಗೆ ಇತರ ವಸ್ತುಗಳೂ ಬರತೊಡಗಿದ್ದು ಎಲ್ಲಿಂದ ಎಂದು ಆ ಮನೆಯಲ್ಲಿ ಯಾರೂ ಕೇಳಲಿಲ್ಲ. ಕ್ರಮೇಣ ತಂಗಿ ತಮ್ಮಂದಿರನ್ನು ಶಾಲೆಗೆ ಕಳಿಸತೊಡಗಿದಳು. ಅನಾರೋಗ್ಯದ ತಾಯಿಗೆ ಉತ್ತಮ ದವಾಖಾನೆಯಲ್ಲಿ ಚಿಕಿತ್ಸೆ ಕೊಡಿಸಿದಳು. ಮನೆಯ ದಾವಣಿಗೆ ನಾಲ್ಕು ದನಗಳನ್ನು ಕಟ್ಟಿ ಹೈನುಗಾರಿಕೆ ಕಲಿಸಿದಳು. ಇಬ್ಬರು ತಂಗಿಯರ ಮದುವೆಯ ಖರ್ಚು ನಿಭಾಯಿಸಿದಳು. ಹುಲ್ಲಿನ ಗುಡಿಸಲಿನ ಮಾಳಿಗೆಗೆ ತಗಡಿನ ಪತ್ರಾ ಹೊದಿಸಿದಳು. ಮನೆ ಮತ್ತು ಮನೆಯ ಜನ ಲಕ-ಲಕ ಹೊಳೆಯತೊಡಗಿದಳು.

ಅಂದು, ಮುಪ್ಪಾದ ತಾಯಿಯ ಮುಂದೆ, ಮಳಕಾಲ ಮೇಲೆ ಗಟಬಾಯಿ ಇಟ್ಟು ಸುಶೀಲಾ ಧಯ ಧಯಾ ಅಳುತ್ತಿದ್ದಳು. "ಹ್ಯಾಂಗ ಮದಿ ಮಾಡ್ಕೊಳ್ಳಲಿ? ನಾ ಹ್ವಾದ ಮ್ಯಾಲ ನೀವೆಲ್ಲ ಹ್ಯಾಂಗ ಬದಕ್ತೀರಿ? ಖರೆ, ನಾ ತ್ವಾಟದ ಮಾಲಕನ ಜೊತೆಗೆ ಇದ್ದಿನಿ ಅಂತ ನಂಗ ಕೆಟ್ಟ ಹೆಸರ ಅದಾ. ಅಂವಾ ನಂಗೇನು ಕಡಿತನಕ ಕೈ ಹಿಡ್ಯಾಲ. ಅದೂ, ಗೊತ್ತದ. ಆದ್ರ ಬ್ಯಾರೆ ಹಾದಿ ಏನಿತ್ತು? ಹತ್ತ ರೂಪಾಯಿ ಕೂಲಿದಾಗ ಈಟ ದೊಡ್ಡ ಸಂಸಾರ ನಡಸ್ಲಾಕ ಆಗ್ತದೇನು? ನಂಗನೂ ಮದಿ ಮಾಡ್ಕೊಂಡುಎಲ್ಲರಂಗ ಸಂಸಾರ ಮಾಡಾ ಮನಸದಾ. ಆದ್ರೇನ್ ಮಾಡ್ಲಿ.... ನನ್ನ ನಸೀಬ ಖೊಟ್ಟಿ ಅದಾ...... ನೀ ಮಕ್ಕಳಿಗಿ ಹಡದು ನನ್ನ ಕೊಳ್ಳಿಗೆ ಕಟ್ಟಿದಿ. ನನ್ನ ಮಕ್ಕಳಿಗಿ ಜಾಗ ಇಲ್ದಂಗ, ಸುಶೀಲಾನ ಅಳು ಕರುಳು ಕತ್ತರಿಸುತ ಹರಿದಾಡುತ್ತಿತ್ತು. ಕಟುಕ ಮೌನ ಆ ಮನೆಯಲ್ಲಿ ಕಾಲ್ಮುರಿದುಕೊಂಡು ಬಿದ್ದಿತ್ತು.

✸

ಎರಡು ಗಂಡು ಕೂಸುಗಳ ತಾಯಿ ಸರಸ್ವತಿ, ಮಾಸ್ತರ ಗಂಡ ಅವಳ ಸರ್ವಸ್ವ. ಅನಕ್ಷರಸ್ಥೆ. ಅಸೀಮ ಮುಗುದೆ. ದೂರದ ಮೈಸೂರಿಗೆ ತರಬೇತಿಗೆಂದು ತಿಂಗಳುಗಟ್ಟಲೆ ಹೋದ ಗಂಡನು, ಅದೊಂದು ಬೆಳ್ಳಂಬೆಳಗು ಮುಂಜಾನೆ ಬಂದು ಸರಸ್ವತಿಯ ಹತ್ತಿರ ಕೂತು, "ನೋಡು ಸರೂ, ಆಕೆ ಟೀಚರ್, ದುಡಿತಾಳ ಪಗಾರ ಕೈ ತುಂಬ ಬರ್‍ತದ. ನೀ ರಾಣಿ ಹಂಗ ಕುಂತು ಉಣಬಹುದು. ನೀ ದೊಡ್ಡಾಕಿ. ನನ್ನ ಪ್ರೀತಿ ನಿಂಗೇ ಮೊದಲು. ಮಿಕ್ಕಿದರ ಆಕೆಗೆ. ಹೂಂ ಅನ್ನು. ನೀ ಹೂಂ ಅನ್ನಲಿಲ್ಲ ಅಂದ್ರ ನಾ ಬದಕಾಂಗಿಲ್ಲ...." ಅಂತ ಕಣ್ಣೀರು ತಂದು, ತನ್ನ ಹಿಂದೆ ಬಂದ (ತಂದ)ವಳೊಂದಿಗೆ ಮದುವೆಗೆ ಪರವಾನಿಗೆ ಪತ್ನಿಯಿಂದ ಪಡೆದೇಬಿಟ್ಟ. ಗಂಡನ ನಯವಾದ ಮಾತುಗಳೇ ನಿಜವೆಂದು ನಂಬಿದ ಸರಸ್ವತಿಯೇ ಸ್ವತಃ ಆರತಿ ಎತ್ತಿ ಗಂಡನ ಎರಡನೆಯ ಹೆಂಡತಿಯನ್ನು ಬರ ಮಾಡಿಕೊಂಡಳು.

ಆದರೆ, ಆ ಮೇಲೆನಾಯ್ತು ಸರಸ್ವತಿಯ ಗತಿ? ತುತ್ತು ಅನ್ನಕ್ಕೆ ಕೈ ಚಾಚಿದರೂ ಸಿಗಲಿಲ್ಲ. ಇವಳಿಗೆ ರಾಣಿಯಂತೆ ಮೆರೆವ ಕನಸು ಹಚ್ಚಿ, ಹಗಲಲ್ಲೇ ಮುಗಿಲ ಚುಕ್ಕಿ ತೋರ್‍ಸಿ ಗಂಡನೆಂಬ ಪುಂಡ ಪಟ್ಟಣದಲ್ಲಿ ಹೊಸ ಹೆಂಡತಿಯೊಂದಿಗೆ ಮಜವಾಗಿದ್ದ. ಬಡವರ ಮಗಳು ಸರಸ್ವತಿ ಬೀದಿ ಪಾಲಾದಳು. ಒತ್ತಾಯ ಮಾಡಿ ಕೇಳಿದರೆ "ನನ್ನಂತೆ, ನೀನೂ ಯಾರನ್ನಾದ್ರೂ ನೋಡ್ಕೋ-ಬ್ಯಾಡಂದಿನೇನು?" ಅಂತ ಕೈ ತೊಳೆದುಕೊಂಡನು.

✸

ಆತ ಮಾತಿಗೆ ಕೂತರೆ, ತರ್ಕಕ್ಕೆ ನಿಂತರೇ ಭಯಂಕರ ಪ್ರಗತಿಪರನು. ಕಟ್ಟಾ ಬಂಡಾಯಗಾರನು, ಬಡಜನತೆಯ ಬಗ್ಗೆ ಭರಪೂರ ಅನುಕಂಪ. ಸ್ವತಃ ಕಷ್ಟದಲ್ಲಿ ಬೆಳೆದು ಬಂದ ಪರಿ ಬಣ್ಣಿಸಲು ಅವನಿಗೆ ಎಲ್ಲಿಲ್ಲದ ಉಮೇದು. ಈಗಲೂ ಹಣವಿಲ್ಲದೆ ಒದ್ದಾಡುವ ಘಟನೆಗಳನ್ನೂ ಎಳೆ-ಎಳೆಯಾಗಿ ಬಿಚ್ಚಿಡುತ್ತಿದ್ದನು. ಖಂಡಿತ ಶ್ರೀಮಂತನೇನಲ್ಲ. ವೈಚಾರಿಕ ಚಿಂತನೆಯ ವ್ಯಾಪ್ತಿ, ಮಹಿಳಾ ಸಮಾನತೆಗೂ ವಿಸ್ತರಿಸಿಕೊಂಡಿತ್ತು. ದಲಿತಪರ ಸಂವೇದನೆಯಂತೂ ಇದ್ದೇ ಇತ್ತು. ಆಗಾಗ ಕವನಗಳನ್ನೂ ಬರೆದು ಕವಿಹೃದಯಿ ಎನಿಸಿಕೊಂಡಿದ್ದ. ಸ್ವಂತ ಪ್ರಿಂಟಿಂಗ್ ಪ್ರೆಸ್‌ನ ವ್ಯಾಪಾರ ಹೊಂದಿದ್ದ.

ಅದೊಂದು ದಿನ ಅವನ ಹೆಂಡತಿಯು ತಾರಾಮಾರಾ ಗಂಡನೊಂದಿಗೆ ಕಾಳಗಕ್ಕಿಳಿದಾಗ ಸತ್ಯ ಗೊತ್ತಾಗಿ ಹೋಯ್ತು. ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗಿಯೊಂದಿಗೆ ಈತ ಸಂಬಂಧ ಬೆಳೆಸಿದ್ದ. ತುಂಬ ಕಡಿಮೆ ಸಂಬಳದಲ್ಲಿ ದುಡಿಯುತ್ತಿದ್ದ ಆ ಹೆಂಗಸು ಅದು ಹೇಘೆ ಬಲೆಗೆ ಬಿದ್ದಳು? ಅಥವಾ ಇವನು ಯಾವ ಜಾದೂ ಛಡಿ ತಿರುವಿ ಅವಳನ್ನು ಮೋಹಗೊಳಿಸಿದ? ಏನು ಕಾರಣ?

ಒಮ್ಮೆ ನೇರ ಮಾತಿಗಿಳಿದೆ. "ಏನ್ರೀ ಸರ್, ಇದು ಸರಿನಾ? ಆ ಹುಡುಗಿ ಹೆಸರಿಗೆ ಬದ್ನಾಮ. ಆಕೆನ ಜಿಂದಗಾಣಿನೇ ಹಾಳು ಮಾಡ್ದಂಗ ಆಕೆನೇ ಬಯಸಿದ್ರೂ ನಿಮ್ಮಂಥ ಪ್ರಗತಿಪರರು ಇಂತದಕ್ಕೆ ಆಸ್ಪದ ಕೊಡಾದು ತಪ್ಪಲ್ಲೇನು? ಅಂತ ಒಂದಿಷ್ಟು ಜೋರಾಗಿಯೇ ಜಾಡಿಸಿದರೂ ಆತ ಪ್ರತಿಕ್ರಿಯಿಸಲಿಲ್ಲ. ಮುಂದೆ ಆತನ ಹೆಂಡತಿಯೂ ಸುಮ್ಮನಾದಳು. ಇವರ ಸಂಬಂಧ ಅತಿಯಾಗಿಯೇ ಮುಂದುವರೆದಿತ್ತು. ಮತ್ತೊಮ್ಮೆ ಹೀಗೆ ದೇಶಾವರಿ ಮಾತಾಡುವಾಗ ನಾನು ಮತ್ತೆ ಕೆಣಕಿದೆ. "ಇದು ತಪ್ಪಲ್ಲೇನು....?" ಅಂತ. ಆತ ತಟ್ಟನೆ ತುಂಬ ಇಂಟಲೆಕ್ಚುವಲ್ ನಗೆ ನಕ್ಕು ಹೇಳಿ, "ನನ್ನ ಹೆಣ್ತಿ ಒಪ್ಪಿದಾಳ" ನಾನು "ಯಾವುದಕ್ಕೆ"? ಕೇಳಿದೆ. "ಅದೇ ರೊಕ್ಕ ಇದ್ದವ್ರಿಗೆ ರೊಕ್ಕದ ಬಂಡವಾಳ. ನಾವು ಸಾಮಾನ್ಯರು. ಮೋಹನ ಮರಳಿಯೇ ನಮ್ಮಂಥವರ ಬಂಡವಾಳ. ಇಷ್ಟು ಕಮ್ಮಿ ಪಗಾರದಲ್ಲಿ ಯಾರು ದುಡಿತಾರ ಹೇಳ್ರೀ?" ಅವನು ಸ್ಟೇಟ್‌ಮೆಂಟ್ ಕೊಡುತ್ತಿದ್ದ "ಲಾಭ ನಿನಗೆ. ಅವಳ ಬದುಕಿಗೆ?" ಸ್ವಲ್ಪ ಜೋರಾಗಿ ಕೇಳ್ದೆ. "ಅಯ್ಯೋ ಬಿಡ್ರಿ ಮೇಡಂ. ಇರುಷ್ಟು ದಿನ ದುಡಿತಾಳೆ. ಯಾರಾದ್ರೂ ಮುಂದೆ ಮದುವಿ ಆಗೇ ಆಗ್ತಾರೆ." ತುಂಬ ನಿರುಮ್ಮಳವಾಗಿ ಹೇಳಿದ. ಅಷ್ಟೇ ನಿರುಮ್ಮಳವಾಗಿ ಆ ಹುಡುಗಿ ಚಟ-ಪಟ ಕೆಲಸ ಮಾಡುತ್ತಿರುವುದು ಗಮನಿಸಿದೆ.

ಇಂಥ ಅಸಂಖ್ಯ ಘಟನೆಗಳು ಈ ವ್ಯವಸ್ಥೆಯ ಗರ್ಭದಲ್ಲಿವೆ. ಎಲ್ಲ ಕಡೆಗೂ ಹೆಣ್ಣೇ ಬಲಿ. ಅವಳಿಗೆ ಅರಿವಿದ್ದೂ-ಅರಿವಿಲ್ಲದೆಯೂ ಒತ್ತಡ ಅನಿವಾರ್ಯತೆ ಇರಬಹುದು. ಆದರೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅವಳೊಂದು ಬಳಕೆಯ ವಸ್ತು. ಆ ಪ್ರಗತಿಪರನ ಭಾಷೆ ವ್ಯವಹಾರಿಕವೇ ಆಗಿತ್ತು. ಸುಶೀಲಳ ತ್ಯಾಗ ಸರಸ್ವತಿಯ ಮುಗ್ದತೆ (ಮೂರ್ಖತೆಯೂ) ಪ್ರಿಂಟಿಂಗ್ ಹುಡುಗಿಯ ಅನಿವಾರ್ಯತೆ(!?) ಎಲ್ಲವೂ "ಅವಳನ್ನು" ಆಹುತಿ ಕೇಳಿದ್ದು. ಸಮಾಜದಿಂದಲೂ 'ಛೀ'ಕಾರಕ್ಕೆ ಒಳಗಾಗಿ, ಕುಟುಂಬದಿಂದಲೂ ತಿರಸ್ಕಾರಕ್ಕೆ ಪಕ್ಕಾಗಿ, ಮುಪ್ಪಾದ ಮೇಲೆ ಗಂಜಿಗೂ ಗತಿಯಿಲ್ಲದಂತೆ ಮಣ್ಣಲ್ಲಿ ಮಣ್ಣಾಗಿ ಹೋಗುವ ಈ ಹೆಣ್ಣ ಗೋಳು.

....ಬೃಹತ್ ಹೋರಾಟಗಾಳ ಪರ್ವ!

ಪುಟ 7 ರಿಂದ

ಜನಗಳಿಗೆ ಏರುತ್ತಿರುವ ಬೆಲೆಗಳು, ಏರುತ್ತಿರುವ ನಿರುದ್ಯೋಗದೊಂದಿಗೆ ಮತ್ತಷ್ಟು ಸಂಕಟಗಳ ಹೊರೆ.

ಅಂತಿಮವಾಗಿ ಇದು ಮಧ್ಯಮ ವರ್ಗಗಳನ್ನೂ ತಟ್ಟುತ್ತದೆ. ಅವರು ಮನೆಕಟ್ಟಲು, ಕಾರು ಕೊಳ್ಳಲು, ಇತರ ಬಳಕೆ ವಸ್ತುಗಳನ್ನು ಕೊಳ್ಳಲು ಮಾಡಿದ ಸಾಲಗಳ ಮೇಲೆ ತೆರುವ ಮಾಸಿಕ ಕಂತುಗಳ ಮೊತ್ತ ಸಾಕಷ್ಟು ಹೆಚ್ಚುತ್ತದೆ. ಅಂದರೆ ಇತರ ಸರಕುಗಳನ್ನು ಕೊಳ್ಳುವ ಅವರ ಶಕ್ತಿ ಕುಂದುತ್ತದೆ. ಇದು ಕೂಡಾ ಆರ್ಥಿಕದಲ್ಲಿ ಬೇಡಿಕೆಯ ಪ್ರಮಾಣವನ್ನು ಇಳಿಸಿ ಒಟ್ಟಾರೆ ಆರ್ಥಿಕವನ್ನು ನಿಧಾನಗೊಳಿಸುತ್ತದೆ.

ಹೀಗೆ ರಿಸರ್ವ್ ಬ್ಯಾಂಕ್ ಪ್ರಕಟಿಸಿದ ಕ್ರಮಗಳಿಂದ ಹಣದುಬ್ಬರ ತಡೆಯಲು ಆರ್ಥಿಕದಿಂದ ಸುಮಾರು 9000ಕೋಟಿ ರೂಪಾಯಿಗಳನ್ನು ಒಟ್ಟು ಹಾಕಿದರೂ ಅದು ಹಣದುಬ್ಬರವನ್ನು ತಡೆಯುವುದಿಲ್ಲ, ಬದಲಿಗೆ ಈಗ ಕಾಡುತ್ತಿರುವ ಬೆಲೆಯೇರಿಕೆಗಳೊಂದಿಗೆ ಇನ್ನಷ್ಟು ಹೊರೆಗಳನ್ನು ಹಾಕುತ್ತದೆ. ಆದ್ದರಿಂದ ಮುಂಬರುವ ದಿನಗಳಲ್ಲಿ ನಮ್ಮ ಈಗಿನ ಜೀವನ ಮಟ್ಟವನ್ನು ಉಳಿಸಿಕೊಳ್ಳಲು ನಾವು ಬೃಹತ್ ಪ್ರಮಾಣದ ಹೋರಾಟಗಳಿಗೆ ಸಿದ್ದರಾಗಬೇಕಾಗುತ್ತದೆ.

ಸಾರ್ವಜನಿಕ, ಖಾಸಗಿ ವಲಯ – ಸಂಘಟಿತರು, ಅಸಂಘಟಿತರು, ಕಾರ್ಮಿಕರು, ನೌಕರರು, ದುಡಿಯುವ ಜನತೆ ಆಗಸ್ಟ್ 20 ರ ಮಹಾಮುಷ್ಕರಕ್ಕೆ ಸಜ್ಜಾಗಿದ್ದಾರೆ. ಅವರ ಹೆಗಲಿಗೆ ಹೆಗಲು ಕೊಟ್ಟು ರೈತ-ಕೂಲಿಕಾರರು ಇತರರೂ ನಿಂತಿದ್ದಾರೆ.

ಆಗಸ್ಟ್ ಮಹಾ ಮುಷ್ಕರಕ್ಕೆ ಸಜ್ಜಾಗುತ್ತಿದೆ ಜನತೆ...

ಆಗಸ್ಟ್ 20 ರಂದು ನಡೆಯುವ ಮತ್ತೊಂದು ಮಹಾಮುಷ್ಕರಕ್ಕೆ ದೇಶದ ಕೋಟ್ಯಾಂತರ ದುಡಿಯುವ ಜನ ವಿಭಾಗ ವೈಕೊಡವಿ ಮೇಲೇಳತೊಡಗಿದೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಎಡ ಪಕ್ಷಗಳು ನೀಡಿದ್ದ ಬೆಂಬಲವನ್ನು ಹಿಂಪಡೆದ ನಂತರ ನಡೆಯುತ್ತಿರುವ ಮೊದಲ ಸಾರ್ವತ್ರಿಕ ಮುಷ್ಕರ ಇದಾಗಿದೆ.

ಎಡಪಕ್ಷಗಳ ಅಂಕುಶದಿಂದ ತಪ್ಪಿಸಿಕೊಂಡ ಸರ್ಕಾರ ಸಾಗುತ್ತಿರುವ ದಾರಿ ಈಗಾಗಲೇ ಸ್ಪಷ್ಟಗೊಂಡಿದೆ. ಕೋಟ್ಯಾಂತರ ದುಡಿಯುವ ಜನರ ಬೆವರಿನ ಪಾಲಾದ ಭವಿಷ್ಯ ನಿಧಿಯನ್ನು ಷೇರು ಮಾರುಕಟ್ಟೆಗೆ ಹಸ್ತಾಂತರಿಸುವ ಮೂಲಕ ಖಾಸಗಿ ವಿದೇಶಿ ಕಾರ್ಪೋರೇಟ್ ಸಂಸ್ಥೆಗಳಿಗೆ ಹಣ ಕೊಳ್ಳೆ ಹೊಡೆಯಲು ಸರ್ಕಾರವೇ ಅವಕಾಶ ಕಲ್ಪಿಸಿದೆ.

ಅಸಹನೀಯ ; ಅಸಂಘಟಿತರ ಬದುಕು

ಕೇಂದ್ರ ಸರ್ಕಾರವೇ ನೇಮಿಸಿದ್ದ ಅರ್ಜುನ್‌ಸೆಟ್ ಗುಪ್ತ ಕಮಿಟಿಯು ಅಸಂಘಟಿತ ಕ್ಷೇತ್ರದ ಜನರ ದಾರುಣ ಚಿತ್ರಣವನ್ನು ದೇಶದ ಮುಂದೆ ತೆರೆದಿಟ್ಟಿದೆ. ಶೇ.97ಕ್ಕಿಂತಲೂ ಅಧಿಕವಿರುವ ಈ ವಿಭಾಗದ ರಕ್ಷಣೆಗೆ ಸ್ವತ: ಸರ್ಕಾರವೇ ಸಮಗ್ರ ಮಸೂದೆಯೊಂದನ್ನು ರೂಪಿಸಬೇಕೆಂದು ಶಿಫಾರಸ್ಸು ಮಾಡಿದೆ. ಅಸಂಘಟಿತ ಕಾರ್ಮಿಕರ ಕುರಿತಾದ ಈ ಸಾಮಾಜಿಕ ಸಂರಕ್ಷಣಾ ಮಸೂದೆ-2007, ಕಳೆದ ಎರಡು ವರ್ಷಗಳಿಂದಲೂ ಪಾರ್ಲಿಮೆಂಟಿನಲ್ಲಿ ಧೂಳು ತಿನ್ನುತ್ತಿದೆ. ಅದಕ್ಕೆ ಮುಕ್ತಿ ದೊರಕಿಸುವ ಬಗ್ಗೆ ಹಣಕಾಸು ಮಂತ್ರಿ ಚಿದಂಬರಂ ಹಾಗೂ ಸ್ವತ: ಪ್ರಧಾನಿಗಳಿಗೆ ಯೋಚನೆಯು ಬರುತ್ತಿಲ್ಲ.

ಏರುತ್ತಿರುವ ಕೆಲಸದ ಅವಧಿ :

ಕಾರ್ಮಿಕರ ದುಡಿಯುವ ಅವಧಿಯನ್ನು 8 ಗಂಟೆ ಎಂದು ಕಾನೂನು ಹೇಳುತ್ತಿದೆ. ಅದು ಕಡ್ಡಾಯವಾಗಿ ಜಾರಿಯಾಗಬೇಕೆಂದು ಕಾರ್ಮಿಕ ವರ್ಗ ಆಗ್ರಹಿಸುತ್ತಲೇ ಬಂದಿದೆ. ಆದರೆ ವಾಸ್ತವ ಸಂಗತಿಯೆಂದರೆ ದೇಶದ ಕೋಟ್ಯಾಂತರ ಅಸಂಘಟಿತ ಕಾರ್ಮಿಕರಿಗೆ ಕೆಲಸದ ಅವಧಿ 8 ಗಂಟೆ ಎಂಬುದು ಕನಸಿನ ಮಾತಾಗಿದೆ. ಅಸಂಘಟಿತ ವಿಭಾಗದ ದುಡಿಯುತ್ತಿರುವ ಎಲ್ಲಾ ಕ್ಷೇತ್ರಗಳಲ್ಲೂ ದಿನಕ್ಕೆ 8-10 ಗಂಟೆಯೆಂಬುದು ಮಾಮೂಲಾಗಿದೆ. ವಾರದಲ್ಲಿ 48 ಗಂಟೆ ಎಂಬುದು ಪುಸ್ತಕದಲ್ಲಿ ಮಾತ್ರವಿದೆ. ಸಾಲದೆಂಬಂತೆ ಕೆಲಸದ ಅವಧಿಯನ್ನು 12 ಗಂಟೆಗೇರಿಸುವ ಒತ್ತಾಯ ಮಾಲಿಕರಿಂದ ಬರುತ್ತಲೇ ಇದೆ. ಅಂದರೆ ದುಡಿಯುವ ಜನರೆಂದರೆ ಅವರು ದುಡಿಯುತ್ತಲೇ ಇರಬೇಕು. ಇದುಮಾಲೀಕರ ವಾದ! ಹೌದು ಸರಿಯಲ್ಲವೇ?

ಹೊರಗುತ್ತಿಗೆಯೇ ನಿತ್ಯ ಮಂತ್ರ !

ಇದುವರೆಗೂ ಖಾಸಗೀ ಕಂಪನಿಗಳಿಗೆ ಕಾಮಧೇನುವಾಗಿದ್ದ ಗುತ್ತಿಗೆ ಮತ್ತು ಹೊರಗುತ್ತಿಗೆ ಇದೀಗ ಖಾಸಗೀ-ಸಾರ್ವಜನಿಕ ಕ್ಷೇತ್ರ ಎನ್ನದೆ ಎಲ್ಲೆಡೆ ವ್ಯಾಪಕವಾಗಿ ಬೆಳೆದಿದೆ. ಕೇಂದ್ರ ಸರ್ಕಾರವೇ ನೇಮಿಸಿದ್ದ ಕೇಂದ್ರ ಸರ್ಕಾರಿ ನೌಕರರ ಕುರಿತಾದ 6ನೇ ವೇತನ ಆಯೋಗವು ಖಾಯಂ 'ಡಿ' ಗ್ರೂಪ್ ಹುದ್ದೆಗಳನ್ನು ಸಂಪೂರ್ಣ ರದ್ದು ಮಾಡಬೇಕೆಂದು ಶಿಫಾರಸ್ಸು ಮಾಡಿ ವಿಶ್ವಬ್ಯಾಂಕ್‌ನ ಏಜೆಂಟ್ ರೀತಿಯಲ್ಲಿ ವರ್ತಿಸಿದೆ. ಸಾರ್ವಜನಿಕ ಕ್ಷೇತ್ರಗಳಾದ, ಬ್ಯಾಂಕಿಂಗ್, ದೂರಸಂಪರ್ಕ, ರೈಲ್ವೆ ಸೇರಿದಂತೆ ಬಹುತೇಕ ಕಡೆಗಳಲ್ಲಿ ಖಾಯಂ ನೌಕರರ ಸಂಖ್ಯೆಯನ್ನು ಗುತ್ತಿಗೆ ಕಾರ್ಮಿಕರ ಸಂಖ್ಯೆ ಮೀರಿ ಬೆಳೆಯುತ್ತಿದೆ. ಹೀಗಾಗಿ ಜಾಬ್ ಕಂಟ್ರಾಕ್ಟ್, ಕಮರ್ಷಿಯಲ್ ಕಂಟ್ರಾಕ್ಟ್ ಹಾಗೂ ಹೊರಗುತ್ತಿಗೆ ಎನ್ನುವುದು ಸಾಮಾನ್ಯ ಸಂಗತಿಗಳಾಗಿವೆ.

ಕಾರ್ಮಿಕ ಕಾನೂನುಗಳಿಗೆ ಬೆಲೆಯೇ ಇಲ್ಲ

ದೇಶದಲ್ಲಿ ಅಭಿವೃದ್ಧಿ ದರ ಏರುತ್ತಿದೆ ಎಂದು ಸರ್ಕಾರ ಜಂಭ ಕೊಚ್ಚಿಕೊಳ್ಳುತ್ತಿದೆ. ಅದೇ ವೇಳೆಗೆ ನಿರುದ್ಯೋಗ ನಾಗಾಲೋಟದಲ್ಲಿ ಸಾಗುತ್ತಿದೆ. ಜನರಿಗೆ ಜೀವಭದ್ರತೆ ಒದಗಿಸುವ ಕೆಲಸಗಳಿಂದ ಸರ್ಕಾರ ಹಿಂದೆ ಸರಿದು ಅತಿ ಕಡಿಮೆ ಸಂಬಳಕ್ಕಾಗಿ ದುಡಿಯುವಂತಹ ಪರಿಸ್ಥಿತಿ ನಿರ್ಮಿಸಲಾಗುತ್ತಿದೆ. ಈ ಪರಿಸ್ಥಿತಿಯಲ್ಲಿ ಕಾರ್ಮಿಕ ಕಾನೂನುಗಳಿಗೆ ಯಾವ ಮನ್ನಣೆಯೂ ಇಲ್ಲ. ಕನಿಷ್ಠ ಕೂಲಿ, ವಾರದ ರಜೆ, ಸರಿಯಾದ ದಾಖಲಾತಿ ಇಡುವುದು, ಇಎಸ್‌ಐ, ಪಿಎಫ್, ಬೋನಸ್ ಮೊದಲಾದ ಹಕ್ಕುಗಳನ್ನು ನಿರಂತರವಾಗಿ ನಿರಾಕರಿಸಲಾಗುತ್ತಿದೆ. ಕಾರ್ಮಿಕ ನ್ಯಾಯಾಲಯಗಳಲ್ಲಿರುವ ಶೇ.90ರಷ್ಟು ಪ್ರಕರಣಗಳು ಕಾರ್ಮಿಕ ಕಾನೂನುಗಳ ಜಾರಿಗೆ ಸಂಬಂಧಿಸಿದವುಗಳೇ ಎಂಬುದನ್ನು ಗಮನಿಸಿದಾಗ, ಕಾರ್ಮಿಕ ಕಾನೂನುಗಳ ಜಾರಿಯ ಉಲ್ಲಂಘನೆಯ ಸ್ವರೂಪ ಅರ್ಥವಾಗುತ್ತದೆ. ಮತ್ತೊಂದೆಡೆ ಅಸಂಘಟಿತ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು ಸಂಘಟಿತರಾಗುವುದಕ್ಕೆ ಭಾರೀ ರೀತಿಯ ಅಡೆ-ತಡೆಗಳನ್ನು ಒಡ್ಡಲಾಗುತ್ತಿದೆ. ಸಂಘಗಳನ್ನು ರಚಿಸಿಕೊಂಡಿದ್ದಕ್ಕಾಗಿಯೇ ಕೆಲಸದಿಂದ ಕಿತ್ತುಹಾಕುವುದು, ಕೆಲಸ ನಿರಾಕರಣೆ, ಸಣ್ಣ ಪ್ರಕರಣಗಳಲ್ಲಿ ಸಿಲುಕಿಸುವುದು, ಆ ಮೂಲಕ ಕಾರ್ಮಿಕ ಸಂಘಗಳನ್ನು ರಚಿಸುವ ಹಕ್ಕುಗಳನ್ನು ದಮನ ಮಾಡಲಾಗುತ್ತಿದೆ.

ಇಳಿಯದ ಬೆಲೆಗಳು – ಏರದ ಸಂಬಳ

ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ, ಕಟ್ಟಡ ಕಾರ್ಮಿಕರು, ಅಗರಬತ್ತಿ, ಬೀಡಿ, ಹಮಾಲಿ, ಬಿಸಿಯೂಟ, ಅಂಗನವಾಡಿ, ಪಂಚಾಯತ್ ಮತ್ತಿತರೆ ಕೋಟ್ಯಾಂತರ ಜನವಿಭಾಗಗಳು ಏರುತ್ತಿರುವ ಬೆಲೆಗಳಿಂದ ತತ್ತರಿಸಿ ಹೋಗಿವೆ. ಸಂಘಟಿತ ವಿಭಾಗಕ್ಕಾದರೂ ಅಲ್ಪ-ಸ್ವಲ್ಪ ಪರಿಹಾರೋಪಾಯಗಳಿವೆ. ಆದರೆ ಈ ಅಸಂಘಟಿತ ವಿಭಾಗಕ್ಕಂತೂ ಬದುಕನ್ನೇ ಯಾತನಮಯವಾಗಿಸಿದೆ.

ಒಂದೆಡೆ ಬೆಲೆಗಳು ನಿರಂತರ ಏರುತ್ತಲೇ ಇವೆ. ಆದರೆ ಸಂಬಳ ಏರುವುದು ಹಾಗಿರಲಿ- ಕೊಡುವ ಸಂಬಳವೇ ಸರಿಯಾಗಿ ಕೈ ಸೇರುತ್ತಿಲ್ಲ ಎನ್ನುವ ಸ್ಥಿತಿ. ಹೀಗಾಗಿ ಏರುತ್ತಿರುವ ಬೆಲೆಗಳ ನಿಯಂತ್ರಣಕ್ಕಾಗಿ ಈ ವಿಭಾಗ ಹೋರಾಡದೇ ಅನ್ಯ ಮಾರ್ಗವಿಲ್ಲ.

ಸಜ್ಜಾಗುತ್ತಿದೆ ಮುಷ್ಕರಕ್ಕೆ :

ನಮ್ಮ ರಾಜ್ಯದಲ್ಲಿ ಈಗಾಗಲೇ ಕಾರ್ಮಿಕ ಸಂಘಟನೆಗಳು ರಾಜ್ಯ ಸಮಾವೇಶವನ್ನು ನಡೆಸಿ ತಯಾರಿಗೆ ಚಾಲನೆ ನೀಡಿವೆ. ಅಲ್ಲದೇ, ಮೈಸೂರು, ದ.ಕನ್ನಡ, ಉಡುಪಿ, ಉ.ಕನ್ನಡ, ತುಮಕೂರು, ದಾವಣಗೆರೆ, ಗುಲ್ಬರ್ಗಾ ಸೇರಿದಂತೆ ಸುಮಾರು 16 ಜಿಲ್ಲೆಗಳಲ್ಲಿ ಯಶಸ್ವಿ ಜಿಲ್ಲಾ ಸಮಾವೇಶಗಳು ನಡೆದಿವೆ. ಇದಲ್ಲದೆ ಸಿಐಟಿಯು ವಿನ ತೀರ್ಮಾನದಂತೆ ನೂರಾರು ಹೋರಾಟ ಸಮಿತಿಗಳು ರಚನೆಗೊಂಡು ಆಗಸ್ಟ್-20 ರ ಮಹಾ ಮುಷ್ಕರಕ್ಕೆ ಕಾರ್ಮಿಕರ ವರ್ಗವನ್ನು ತಯಾರುಗೊಳಿಸುವ ಕಾರ್ಯದಲ್ಲಿ ನಿರತವಾಗಿವೆ.

ಈ ಹೋರಾಟಕ್ಕೆ ವಿವಿಧ ರಾಜಕೀಯ ಪಕ್ಷಗಳ ಬೆಂಬಲವನ್ನು ಸೆಳೆಯುವ ಪ್ರಯತ್ನಗಳು ಸಾಗಿವೆ. ಅಲ್ಲದೆ ಈ ಚಳುವಳಿಯಲ್ಲಿ ರೈತ-ಕೂಲಿಕಾರ ವಿಭಾಗಗಳನ್ನು ಪಾಲ್ಗೊಳಿಸಲು ನಿರ್ಧರಿಸಲಾಗಿದೆ. ಮತ್ತು ವಿದ್ಯಾರ್ಥಿ ಯುವಜನರು ಆಗಸ್ಟ್-20ರ ಈ ಮಹಾ ಮುಷ್ಕರದ ಭಾಗವಾಗಿರಲು ಹಲವು ತಯಾರಿಗಳನ್ನು ನಡೆಸಿವೆ.

ಒಟ್ಟಿನಲ್ಲಿ ಕೋಟಿ ಕೋಟಿ ದುಡಿಯುವ ಜನತೆಯನ್ನು ಬಾಧಿಸುತ್ತಿರುವ ಮತ್ತು ಅದೇ ನೀತಿಗಳ ವಕ್ತಾರರಾಗಿ ಕೆಲಸ ಮಾಡುತ್ತಿರುವ ಕಾಂಗ್ರೆಸ್ ಮತ್ತು ಬಿಜೆಪಿಯ ನೀತಿಗಳಿಗೆ ವಿರುದ್ಧವಾಗಿ ಆಗಸ್ಟ್ 20 ರ ಮುಷ್ಕರದ ಮೂಲಕ ದೇಶದ ಕಾರ್ಮಿಕ ವರ್ಗ ತನ್ನದೇ ಪರ್ಯಾಯವನ್ನು ಹೇಳಲೊರಟಿದೆ.

ಹಾಗಾಗಿ ಈ ಮಹಾಮುಷ್ಕರವನ್ನು ಯಶಸ್ವಿಗೊಳಿಸಲು ನಾವೆಲ್ಲರೂ ಶ್ರಮಿಸೋಣ...

■ ಕೆ. ಮಹಾಂತೇಶ್

ದೇಸಿ ತಳಿಗಳಿಗೆ ....

ಪುಟ 4 ಕ್ಕೆ

ಇವುಗಳಲ್ಲಿ 6 ಕರ್ನಾಟಕದ ಬೆಳೆಗಳಿಗೆ ಈ ಮಾನ್ಯತೆ ಲಭ್ಯವಾಗುವಂತೆ ಮಾಡಿರುವ ನಮ್ಮ ರಾಜ್ಯದ ತೋಟಗಾರಿಕಾ ಇಲಾಖೆಯ ತಜ್ಞರ ಶ್ರಮ ಅತ್ಯಂತ ಅಭಿನಂದನಾರ್ಹ. ಜಗತ್ತಿನ ಬಹುಪಾಲು ಜೀವಾವಾಸಗಳ ಮಾದರಿಗಳನ್ನು ಹೊಂದಿರುವ ಕರ್ನಾಟಕ ರಾಜ್ಯ ಇಂತಹ ಅಪರೂಪದ, ಅಮೂಲ್ಯವಾದ ಸ್ಥಳೀಯ ಅನನ್ಯತೆಗಳುಳ್ಳ ಸ್ಸಾವಿರಾರು ತಳಿಗಳ ಹಸಿರು ಭಂಡಾರ. ಆದ್ದರಿಂದ ಇನ್ನೂ ಅನೇಕ ತಳಿಗಳಿಗೆ ಹಾಗೂ ಉತ್ಪನ್ನಗಳಿಗೆ ಈ ಮಾನ್ಯತೆ ದೊರಕಿಸಿಕೊಳ್ಳುವ ಪ್ರಯತ್ನವನ್ನು ಅತ್ಯಂತ ಶೀಘ್ರವಾಗಿ ಮುಂದುವರಿಸಬೇಕಾಗಿದೆ. ಈ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆಯಂತೆ, ಕೃಷಿ ಇಲಾಖೆ, ಪಶುಸಂಗೋಪನಾ ಇಲಾಖೆ, ಮೀನುಗಾರಿಕೆ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾಲಯಗಳು, ಜೀವ ವೈವಿಧ್ಯ ನಿರ್ವಹಣಾ ಮಂಡಳಿಗಳು, ಅರಣ್ಯ ಇಲಾಖೆಯಂತಹ ಇನ್ನಿತರ ಇಲಾಖೆಗಳು ಈ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸಿ, ಇಂತಹ ವಿಶೇಷ ತಳಿಗಳ ಪತ್ತೆ ಮಾಡಿ ಅವುಗಳ ಗುಣ ವೈಶಿಷ್ಟಗಳನ್ನು ಅತ್ಯಂತ ವಿವರವಾಗಿ ವೈಜ್ಞಾನಿಕವಾಗಿ ದಾಖಲಿಸಿ ಮಾನ್ಯತೆಯ ಹಕ್ಕು ಪ್ರತಿಪಾದನೆ ಮಾಡಬೇಕಾಗಿದೆ. ತೋಟಗಾರಿಕಾ ಇಲಾಖೆಯ ಸಾಧನೆಯನ್ನು ತಮ್ಮ ಇಲಾಖೆಯಲ್ಲೂ ಮೈಗೂಡಿಸಿಕೊಂಡು ಇವುಗಳ ದಾಖಲೆ ಪ್ರಕ್ರಿಯೆಗೆ ವಿಶಾಲವ್ಯಾಪ್ತಿಯನ್ನು ನೀಡಬೇಕಾಗಿದೆ. ಜೀವ ವೈವಿಧ್ಯ ನಿರ್ವಹಣಾ ಮಂಡಳಿಗಳು ಈ ವಿಶೇಷ ಕಾರ್ಯದಲ್ಲಿ ಪ್ರಧಾನ ಪಾತ್ರ ವಹಿಸಬೇಕಾಗಿದೆ.

ಇಂಗ್ಲೆಂಡ್ ಮತ್ತು ಐರೋಪ್ಯ ಒಕ್ಕೂಟದ ರಾಷ್ಟ್ರಗಳಿಗೆ ವಿಶೇಷವಾಗಿ ರಫ್ತಾಗುವ ಹಾವೇರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಬೆಳೆಯಲಾಗುವ 'ಬ್ಯಾಡಗಿ ಮೆಣಸಿನ ಕಾಯಿ' ಅಥವಾ ಕಡ್ಡಿ ಮೆಣಸಿನ ಕಾಯಿಗೆ, ಕವಳಿ. ಕರಿಮಾದಲ ಹಣ್ಣುಗಳಿಗೆ, ಸಿಹಿಯಾದ ಹೆಬ್ಬಲಸು, ಪನ್ನೇರಲು, ಬೋರೆ, ಕಾರೆ, ಮುಳ್ಳಣ್ಣು, ನುರುಕಲು, ದಡಸಲು, ಹಿಪ್ಪು ನೇರಳೆಯಂತಹ ಹೇರಳವಾದ ಪೌಷ್ಠಿಕಾಂಶಗಳು ಸಸಾರಜನಕ, ಶರ್ಕರ, ಪಿಷ್ಟ ಖನಿಜಾಂಶಗಳಿಂದ ಶ್ರೀಮಂತವಾಗಿರುವ ಕಾಡು ಮೇಡುಗಳಲ್ಲಿನ ಫಲ ಪುಷ್ಪ, ಸೊಪ್ಪು, ಸದೆ ಬಳ್ಳಿಗಳ ವೈವಿಧ್ಯಮಯ ಗುಣ ವಿಶೇಷಗಳನ್ನು ವಿವರವಾಗಿ ವೀಕ್ಷಿಸಿ, ಅಭ್ಯಸಿಸಿ ವಿಶ್ಲೇಷಿಸಿ ಅತ್ಯಂತ ಸಮರ್ಥವಾದ ದಾಖಲೆ ಪುರಾವೆಗಳೊಂದಿಗೆ ಭಾರತ ಸರ್ಕಾರದ ವಾಣಿಜ್ಯ ಇಲಾಖೆಯಲ್ಲಿ ರೂಪಿಸಲಾಗಿರುವ ವಿಶಿಷ್ಟ ವಿಭಾಗದ ಮುಂದೆ ಸಮರ್ಥವಾಗಿ ಮಂಡಿಸಿ ಮಾನ್ಯತೆ ಪಡೆದುಕೊಳ್ಳುವ ಕೆಲಸ ತುರ್ತಾಗಿ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ನಾವು ತೋರುವ ಅಲಕ್ಷ್ಯ ಅಥವಾ ಅಸಡ್ಡೆ ನಮಗೆ ತುಂಬಾ ದುಬಾರಿಯಾದ ನಷ್ಟವನ್ನುಂಟು ಮಾಡಿ ನರಿಯಂತೆ ಹೊಂಚು ಹಾಕುತ್ತಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಅಪಾರ ಪ್ರಮಾಣದ ಲಾಭದ ಸುರಿಮಳೆಯನ್ನೇ ಸುರಿಸಬಲ್ಲ ಅದೃಷ್ಟದ ಬಾಗಿಲುಗಳಾಗಬಹುದು. ಹಸಿರು ಬಂಗಾರದ ಹಗಲು ದರೋಡೆಗೆ ನಾವು ನಿರ್ಮಿಸಬಹುದಾದ ಸುಭದ್ರ ಕೋಟೆ ಭೌಗೋಳಿಕ ಸೂಚಕ ನೋಂದಣಿ.

ಕನ್ನಡಿ



ಎತ್ತ ಸಾಗಿದೆ... ಬದುಕು?

ಕೆ.ಎಸ್.ವಿಮಲ

"ಆಯ್ಯೋ ನಾನ್ ಮದ್ವೆ ಆಗೋನು ನನಗಿಂತ ಜಾಸ್ತಿ ಸಂಬಳ ತಗೋಬೇಕು ಅಂತವರನ್ನೇ ನಾನು ಮದ್ವೆ ಆಗೋದು"

"ನಂದೇನು ಗೊತ್ತಾ, ನಾನು ಯಾವ ಸೆಲೆಬ್ರಿಟೀಸ್‌ನ್ನು ಮದ್ವೆ ಆಗೋಲ್ಲ. ನಂಗೆ ನನ್ನ ಪರ್ಸನಲ್ ಲೈಫ್ ತುಂಬ ಮುಖ್ಯ"..... ಹೀಗೆ ಸಾಗಿತ್ತು ತಲೆ ಬುಡವಿಲ್ಲದ ಆದರೆ ಅತ್ಯಂತ ಗಂಭೀರವಾಗಿ ಗಮನಿಸಬೇಕಾದ ಒಂದು ಚರ್ಚೆ. ಇದು ಕೇಳಿದ್ದು. ಗೆಳತಿಯೊಬ್ಬರೊಂದಿಗೆ ದೂರದರ್ಶನದ ದಾರಿಯಲ್ಲಿ ಇಡ್ಲಿ ಸಾಂಬಾರ್ ತಿನ್ನುತ್ತ ನಿಂತಾಗ. ಸಾಕಷ್ಟು ಸ್ಥಿತಿವಂತ ಕುಟುಂಬದವರಂತೆ ತೋರುವ ಇಬ್ಬರು ಹುಡುಗಿಯರ ಡೈಲಾಗು. ಒಬ್ಬಳು ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೊರಡುವ ತಯಾರಿಯಲ್ಲಿದ್ದಂತೆ ಇತ್ತು.

ಈ ಜಮಾನದ ನಗರ ಪ್ರದೇಶದ ಅನ್‌ಕನ್ಸರ್ನ್‌ಡ್ ವರ್ಗದ ಯುವ ಜನತೆಯ ಮನೋಭಾವಕ್ಕೆ ಹಿಡಿದ ಕನ್ನಡಿಯಂತಿತ್ತು ಈ ಮಾತುಗಳು. ಯಾಕೆ ಈ ಸಮಾಜ ಹೀಗೆ...... ಎನ್ನುವಾಗಲೇ ನೆನಪಿನ ಬುತ್ತಿ ಬಿಚ್ಚಿಕೊಳ್ಳುತ್ತಿದೆ. 10-15 ವರ್ಷಗಳ ಹಿಂದೆ ಮನೆಯ ಪಕ್ಕದಲ್ಲಿ ನಡೆದ ಒಂದು ಘಟನೆ. ಪುರುಷ ಅತ್ಯಂತ ಪ್ರತಿಭಾವಂತ, ಇಂಜಿನಿಯರ್ ಎಮ್‌ಟೆಕ್ ಮುಗಿಸಿದಾತ ಕೂಡ. ಸ್ವಭಾವ ಒಳ್ಳೆಯದೇ ಆದರೆ ಮುಂಗೋಪಿ. ಹಾಗೆಂದೇ ಸಿಕ್ಕ ಯಾವ ಕೆಲಸದಲ್ಲೂ ಮುಂದುವರೆಯಲು ಸಾಧ್ಯವಾಗಲಿಲ್ಲ. ಹೆಂಡತಿ ಬ್ಯಾಂಕ್ ಉದ್ಯೋಗಿ. ಸ್ವಾಭಿಮಾನಿ. ಉತ್ತಮ ಕೆಲಸ ಪ್ರಯತ್ನಗಳಿಂದ ಅಧಿಕಾರಿ ಪ್ರಬಂಧಕಳಾಗಿ ಬಡ್ತಿ ಪಡೆದು ಮೇಲ್‌ಸ್ತರಕ್ಕೆ ಏಣಿ ಹತ್ತುತ್ತಿರುವವಳು. ಕೆಲಸ ಕಳೆದುಕೊಂಡು ಮನೆಯಲ್ಲಿ ಕುಳಿತ ಗಂಡ ಮೊದಲಷ್ಟು ದಿನ ಚೆನ್ನಾಗಿಯೇ ಇದ್ದ. ಅಚ್ಚುಕಟ್ಟಾಗಿ ಅಡುಗೆ, ಮನೆ ಕೆಲಸ ಮಾಡಿಟ್ಟು ಹೆಂಡತಿ ಹೋದರೆ ಸುಖವಾಗಿ ತಿಂದುಂಡು ಕಾಲ ಕಳೆಯುತ್ತಿದ್ದ. ಆದರೆ ಎಷ್ಟು ದಿನ? ನಿಧಾನವಾಗಿ ಪ್ರಾರಂಭವಾಯಿತು. ತನಗೆ ವರಮಾನವಿಲ್ಲ, ಹೆಂಡತಿ ಒಬ್ಬ ಅಧಿಕಾರಿ.... ಇತ್ಯಾದಿ..... ಕ್ರಮೇಣ ಕಿರಿಕಿರಿ, ಒತ್ತಡ, ಬೈಗುಳ ಮುಂದೆ ಜಗಳ ಹಾಗೆ ಬೆಳೆಯುತ್ತ ಹೋಗಿ ಮುಂದೆ ಏನೆಲ್ಲ ನಡೆಯಿತು. ಇಲ್ಲಿರುವ ಎರಡು ಮನೋಭಾವ ಒಂದು ನಾನು ಹೆಣ್ಣು. ನನ್ನ ಗಂಡ ನನಗಿಂತ ಸುಪೀರಿಯರ್ ಇರಬೇಕು. ಅದೇ ನನ್ನ ಆಯ್ಕೆ. ಇನ್ನೊಂದು ನಾನು ಗಂಡು. ಹಾಗಾಗಿ ನನಗಿಂತ ನನ್ನ ಹೆಂಡತಿ ಯಾವುದೇ ಕಾರಣಕ್ಕೂ ಸುಪೀರಿಯರ್ ಆಗಲೇಕೂಡದು. ಎರಡರ ಆಳದ ಭಾವ ಒಂದೇ "ಮಹಿಳೆ" ಪುರುಷನಿಗಿಂತ ಕಡಿಮೆಯಾಗಿಯೇ ಇರಬೇಕು. ಈ ಮೌಲ್ಯಗಳು ಹೇಗೆ ಬಿತ್ತಲ್ಪಟ್ಟವು ಎಂಬ ಚಿಂತನೆ ಗಂಭೀರವಾಗಿ ಕಾಡಬೇಕು. ನಾವು ವಿದ್ಯಾರ್ಥಿದೆಸೆಯಲ್ಲಿದ್ದಾಗ ಹೀಗೆ ಕಾಡಿಸಿಕೊಳ್ಳುವ ಗುಂಪುಗಳು ಒಂದಿಷ್ಟು ಸಿಗುತ್ತಿದ್ದವು. ನಮ್ಮ ಮಧ್ಯೆ ನಡೆಯುವ ಚರ್ಚೆಗಳು ಎಲ್ಲೋ ಒಂದು ಕಡೆ ಸಿದ್ಧ ಮಾದರಿಗಳನ್ನು ಪ್ರಶ್ನಿಸುವ ತವಕವಿರುತ್ತಿತ್ತು. ಮನೆಯಲ್ಲಿ ಅಪ್ಪನಿಗೆ ಎದುರಾಡಿದರೆ ಸಿಗುವ ಉಗ್ರಶಿಕ್ಷೆಯ ಅರಿವಿದ್ದೂ ಅಪರೂಪಕ್ಕೆ ಒಮ್ಮೆಯಾದರೂ ಏರು ದನಿಯಲ್ಲಿ ಮಾತನಾಡಿ ಒದೆ ತಿಂದರೂ ಆದರ ನೋವಿಗಿಂತ ಪ್ರಶ್ನಿಸಿದೆ ಎಂಬ ತೃಪ್ತ ಭಾವ ಹಂಚಿಕೊಳ್ಳುವ ಗೆಳೆಯರ ನೆನಪು ಬರುತ್ತದೆ. ಆದರೆ ಈಗಿನ ದಿನಮಾನದಲ್ಲಿ ನಗರದ ಕುಟುಂಬದೊಳಗೆ ಅಂತಹ ಹಿಟ್ಲರ್‌ಶಾಹಿ ಸ್ವಲ್ಪ ವಿರಳ. ಆದರೆ ನಡೆಯುವ ಜಗಳ, ಚರ್ಚೆ ಪ್ರಶ್ನೆಗಳು ಬಹಳ ಸಾರಿ ಈ ಜನರೇಷನ್‌ನ ಹುಚ್ಚುಚ್ಚಾರಗಳ ಪ್ರತಿಬಿಂಬವೇ ಆಗಿರುತ್ತದೆ. ಹೀಗನ್ನುವಾಗ ಈಗ ಬೆಳೆಯುತ್ತಿರುವ ಇನ್ನೊಂದು ಟ್ರೆಂಡ್ ಮತ್ತೆ ಕಾಡುತ್ತದೆ. ಅದೆಂದರೆ ಫ್ಯಾಮಿಲಿ ರೆಸ್ಪೊನ್ಸಿಬಿಲಿಟಿ ಮುಂತಾದವು (ಕುಟುಂಬದ ಜವಾಬ್ದಾರಿ) ಗಳೊಂದು ಬೇಡ. ಆದರೆ ಬದುಕಿನಲ್ಲಿ ಅನುಭವಿಸಬೇಕಾದ್ದನ್ನೆಲ್ಲ ಅನುಭವಿಸಬೇಕು. we must enjoy life that's it. ಎನ್ನುವ ಪ್ರವೃತ್ತಿ. ಅದಕ್ಕೆ ಸಿದ್ಧ ಮಾದರಿ ಪಾಶ್ಚಾತ್ಯ ರಾಷ್ಟ್ರಗಳ "living together". ಈಗಾಗಲೇ ಈ ನೆಲದಲ್ಲಿ ಅಂತದ್ದೇ ಮಾದರಿಯ ಪ್ರವೃತ್ತಿಗಳು ಇದ್ದವಾದರೂ (ಚಿನ್ನಬೀಡು) ಅವು ಅಷ್ಟು ಸುಲಭದ ಸರಳ ಸಂಗತಿಗಳಾಗಿರಲಿಲ್ಲ. ಆದರೆ ಇಂದಿನ ಯುವ ಜನಾಂಗದ ಮಧ್ಯೆ ಇಂತದ್ದೊಂದು ಭಾವನೆ ನಿಧಾನವಾಗಿ ಬೇರೂರಲು ಪ್ರಾರಂಭವಾಗಿದೆ.

ಇದೊಂದು ಬದುಕಿನ ಆಯ್ಕೆ ಸ್ವಾತಂತ್ರ್ಯದ ಪ್ರಶ್ನೆ ಎಂದು ಒಪ್ಪಿಕೊಂಡುಬಿಡಬಹುದೇ. ಇದು ಸೃಷ್ಟಿಸಬಹುದಾದ ಸಾಮಾಜಿಕ ಸಮಸ್ಯೆಗಳು, ಪ್ರಜೆಗಳ ವಿದ್ಯಾಭ್ಯಾಸ, ಉದ್ಯೋಗ, ಬದುಕಿನ ಕುರಿತು ಸರ್ಕಾರಕ್ಕೆ ಯಾವುದೇ ರೀತಿಯ ಬದ್ಧತೆ ಇರದ, ಇರುವ ಚೂರು-ಪಾರು ಜವಾಬ್ದಾರಿಗಳಿಂದಲೂ ಸರ್ಕಾರ ಕಳಚಿಕೊಳ್ಳಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಮುಂದಿನ ಜನಾಂಗದ ಬದುಕಿನ ಗತಿ ಯಾವ ನೆಲೆಗೆ ತಳ್ಳಲ್ಪಡುತ್ತದೆಂಬುದು ಕಾಡಬೇಕಲ್ಲವೇ?

ಸಮಾಜದ ಚಲನೆಯ ಗತಿಯಲ್ಲಿನ ಬದಲಾವಣೆ, ಹೊಸ ತಂತ್ರಜ್ಞಾನದ ಫಲವಾಗಿ "ದುನಿಯಾ ಮೇರಿ ಮುಠ್ಠಿಮೇ" ಆಗಿರುವುದರಿಂದ ಕಣ್ಣುಮುಚ್ಚಿ ತೆರೆಯುವುದರೊಳಗೆ ವಿಶ್ವದ ಯಾವುದೇ ಮೂಲೆಯಲ್ಲಿ ನಡೆದ ವಿದ್ಯಮಾನಗಳೂ ನಮ್ಮ ಕಣ್ಣ ಮುಂದೆ ಸಿಗುವ ಸಂದರ್ಭವಿದು. ಹಾಗೆಂದೇ ನಗರದ ಯುವ ಜನತೆಗೆ ಈ ಪ್ರಪಂಚವನ್ನು ಪ್ರವೇಶಿಸುವ ಅವಕಾಶವೂ ಮುಠ್ಠಿಮೇ. ಆದರೆ ಎಲ್ಲೋ ಕೊಂಡಿ ತಪ್ಪುತ್ತಿದೆ. ಆರೋಗ್ಯವಂತ ಚಿಂತನೆಯಿಂದ ವಿಮುಖಗೊಳ್ಳುತ್ತ ಐಷಾರಾಮದ ಬದುಕಿಗೆ ತೆರೆದುಕೊಳ್ಳುವ ಸಾಧ್ಯತೆಗಳೇ ಹೆಚ್ಚಾಗತೊಡಗಿದೆ.

ಈ ಮೇಲಿನ ಹುಡುಗಿಯರ ಜೊತೆಯೇ ಇನ್ನಷ್ಟು ಹುಡುಗಿಯರೂ ಆಗಾಗ ಕಾಡುತ್ತಾರೆ. ಯಾವುದೋ ಕಾರ್ಯಕ್ರಮದಲ್ಲಿ ಹಾಸ್ಟೆಲ್ ಹುಡುಗಿಯರೊಡನೆ ಮಾತನಾಡುತ್ತಿದ್ದೆ. ಇಡೀ ಮಾತಿನಿದ್ದಕ್ಕೂ ಅವರಲ್ಲಿ ಕನಸು ಬಿತ್ತಲು ಬಹಳ ಪ್ರಯತ್ನಿಸಿದೆ. ಆದರೆ ಅಲ್ಲಿ ಕನಸು ಹುಟ್ಟುವುದು ಅಷ್ಟು ಸುಲಭವಿರಲಿಲ್ಲ. ಯಾಕೆಂದರೆ ಹಿಡಿ ಅನ್ನಕ್ಕೆ ಪರದಾಡಬೇಕಿರುವ ಗ್ರಾಮೀಣ ರೈತರ ಕುಟುಂಬದಿಂದ ಬಂದ ಮಕ್ಕಳೇ ಹೆಚ್ಚು ಸಂಖ್ಯೆಯಲ್ಲಿದ್ದರು.

ಯಾವುದೋ ಸಂದರ್ಭದಲ್ಲಿ ಕೆಲವು ಅಧ್ಯಾಪಕ ಮಿತ್ರರೊಡನೆ ಮಾತನಾಡುತ್ತ ಕುಳಿತಾಗ ಬಹಳ ನೋವಿನಿಂದ ಹೇಳಿಕೊಳ್ಳುತ್ತಿದ್ದರು. ಎಲ್ಲಿ ಉಳಿದಿದೆ, ನಿಜವಾದ ವಿದ್ಯಾರ್ಥಿ ಚಳುವಳಿ ಹೇಳಿ. ಯಾವುದೋ ಒಂದು ಘಟನೆಗೆ ಪ್ರತಿಕ್ರಿಯಿಸಿ ಒಂದು ರಸ್ತೆ ತಡೆ ಮಾಡಿದರೆ ಮುಗಿಯಿತೇ? ಹಿಂದೆಲ್ಲ ಹೇಗಿತ್ತು ಎಂದಾಗ ಚಿಂತಿಸುವ ಅಗತ್ಯವಿದೆ ಎನಿಸಿತ್ತು.

ಹ್ಞಾಂ! ಈಗಲೂ ಯುವಜನತೆ ಚಳುವಳಿಯಲ್ಲಿ ಹೆಚ್ಚು ಕಾಣುತ್ತಾರೆ. ಯಾವುದೋ ನಾಯಕನ ಹಿಂಬಾಲಕರಾಗಿ ಬಣ್ಣದ ಬಾವುಟವನ್ನು ಹೆಗಲ ಮೇಲೆ ಹಾಕಿಕೊಂಡು ರಾಜ್ಯ, ಭಾಷೆಯ ಹೆಸರಿನಲ್ಲಿ ಎಂದೂ ಹೇಳುತ್ತಿದ್ದರು. ಇಲ್ಲೆಲ್ಲೋ ಒಂದು ಸಣ್ಣ ಸತ್ಯವಿದೆ. ನಾವು ಅರ್ಥ ಮಾಡಿಕೊಳ್ಳಬೇಕಾಗಿರುವುದು.

......'ಕೋಕಾ' ಜಾರಿಕೂಡದು

ಪುಟ 3 ರಿಂದ

ಅಗಣಿತವಾದ ಇಚ್ಛೆಯ ಸರ್ವಾಧಿಕಾರವನ್ನು ನೀಡುತ್ತದೆ. ಬಿಜೆಪಿಯಂತಹ ಫ್ಯಾಶಿಸ್ಟ್ ಮನೋಭಾವದ ಶಕ್ತಿಗಳ ಕೈಗೆ ಈ ಅಸ್ತ್ರಗಳು ಸಿಗುವುದೆಂದರೆ ಆಗುವ ಅನಾಹುತದ ಪರಿ ಅಧಿಕ. ಯಡಿಯೂರಪ್ಪನವರ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೇ ಗೊಬ್ಬರ, ಬೀಜ ಕೇಳಿದರೆ, ಫಸಲಿಗೆ ಬೆಲೆ ಬೇಡಿದರೆ, ನೀರಿನ ದರ ಇಳಿಸಿ ನಾಗರಿಕರ ಉಳಿಸಿ ಎಂದರೆ ಗುಂಡೇಟು ಲಾಠಿ-ಬೂಟುಗಳ ಪರಿಭಾಷೆಯಿಂದಲೇ ವ್ಯವಹರಿಸುತ್ತಿದೆ.. ಕೇಂದ್ರ ರಾಜ್ಯ ಸರ್ಕಾರಗಳ ನೀತಿಗಳೆದುರು ಇನ್ನೂ ಪ್ರಬಲ 'ಜನ ಹೋರಾಟ'ಗಳು ಸ್ಫೋಟಗೊಳ್ಳಲಿವೆ. ಇವುಗಳಿಗೆ 'ತಕ್ಕಶಾಸ್ತಿ' ಮಾಡುವ ಬಿಜೆಪಿ ಸರ್ಕಾರ 'ಕೋಕಾ' ಬಳಸದೇ ಬಿಟ್ಟೀತು ಹೇಗೆ

ಹಾಗಾದರೆ ಭಯೋತ್ಪಾದನೆ ಎದುರಿಸುವ ಸಮರ್ಥ ಕಾಯ್ದೆ ಬೇಡವೇ ಎಂದು ಕೇಳಲಾಗುತ್ತದೆ. ಆದರೆ. ಈಗಿರುವ ಭಾರತೀಯ ದಂಡ ಸಂಹಿತೆ (ಐಪಿಸಿ) ಯ 124 ಕ. ಬಿ. ಗೆ ಭಯೋತ್ಪಾದನೆ ಎಂದರೇನೆಂದು ವಿವರಿಸಿ, ಶಿಕ್ಷೆ ವಿಧಿಸುವ ಅಂಶಗಳನ್ನು ಸೇರಿಸಿದರೆ. ಈಗಿರುವ ಕಾನೂನುಗಳೇ ಸಾಕು ಎನ್ನುತ್ತಾರೆ ಸರ್ವೋಚ್ಛ ನ್ಯಾಯಾಲಯದ ಹಿರಿಯ ನ್ಯಾಯವಾದಿ ರಾಜೀವ್ ಧವನ್, ನ್ಯಾಯಮೂರ್ತಿ ಎಸ್. ವರ್ಮಾ ಮುಂತಾದ ತಜ್ಞರು.

ಈ ಹಿನ್ನೆಲೆಯಲ್ಲಿ ಕ್ರೂರ 'ಕೋಕಾ' ದಂತಹ ದಮನಕಾರಿ ಅಸ್ತ್ರವನ್ನು ರಾಜ್ಯದ ಬಿಜೆಪಿ ಸರ್ಕಾರ (ಯಾವುದೇ ಸರ್ಕಾರವೂ) ಜಾರಿಗೆ ತರದಂತೆ ತಡೆಯಬೇಕು. ವಿನಾಶಕಾರಿ ಭಯೋತ್ಪಾದನೆಯನ್ನು ಎದುರಿಸಲು ಅಗತ್ಯವಿರುವ ಕ್ರಮಗಳನ್ನು ಪ್ರಾಮಾಣಿಕವಾಗಿ ಮೂಲಭೂತ ನೆಲೆಯಲ್ಲಿ ಕೈಗೊಳ್ಳಬೇಕಾಗಿರುವುದರಲ್ಲಿ ಜನತೆಗೆ ಪ್ರಧಾನವಾದ ಪಾತ್ರವಿದೆ. ಜನತೆಯ ಒಗ್ಗಟ್ಟಿಗೆ ಮಾರಕವಾಗಿರುವ, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸುವ ಕ್ರಮಗಳ ವಿರುದ್ಧ ಜನತೆಯು ಒಗ್ಗಾಟ್ಟಾಗಿ ನಿಂತು ಹೋರಾಡಬೇಕು.

ಈ ವಾರ...

ಪುಟ 3 ರಿಂದ

ಆವರಿಸುತ್ತ ಜನತೆ ಸಂಕಷ್ಟದತ್ತ ಸರಿಯುತ್ತಿರುವಾಗ ಅವರ ರಕ್ಷಣೆಗೆ ರಾಜ್ಯ ಸರ್ಕಾರ ಕೂಡಲೇ ಧಾವಿಸಬೇಕಿತ್ತು.

ಗ್ರಾಮೀಣ ಉದ್ಯೋಗ ಖಾತರಿಯಂತಹ ಯೋಜನೆಯನ್ನು ಪರಿಣಾಮಕಾರಿಯಾಗಿ ವಿಸ್ತೃತವಾಗಿ ಜಾರಿಗೊಳಿಸಲು ಈ ಕೂಡಲೇ ಗಮನ ಹರಿಸಬೇಕು. ಹಲವಾರು ಕಾಮಗಾರಿಗಳನ್ನು ಆರಂಭಿಸಬೇಕು. ರೇಷನ್ ವ್ಯವಸ್ಥೆ, ದನದ ಮೇವು ಇತ್ಯಾದಿ ಕ್ರಮ ವಹಿಸಬೇಕಿದೆ. ಆದ್ದರಿಂದ ರಾಜ್ಯ ಸರ್ಕಾರ ತನ್ನ ಪಾಲಿನ ಹೊಣೆ ನಿರ್ವಹಣೆಗೆ ತಕ್ಷಣವೇ ಮುಂದಾಗಬೇಕು. ನಮ್ಮ ಶಾಸಕರು, ಸಚಿವರು ಇದನ್ನು ಗಂಭಿರವಾದ ಸಮಸ್ಯೆ ಎಂದು ಪರಿಗಣಿಸದೇ ಬರುವ ಅಭಿವೃದ್ಧಿ ಹಣದಲ್ಲಿ 'ಅಭಿವೃದ್ಧಿ' ಸಾಧಿಸುವ ಲೆಕ್ಕಾಚಾರ ಬಿಡಬೇಕು.

ಉದ್ಯೋಗ ಖಾತ್ರಿ

ಕೇಳಿರೈ ಸ್ವಾತಂತ್ರ್ಯ ಭಾರತದ ಹರುಷ
ಸಿಗಲಿಹುದು ನಿರುದ್ಯೋಗಿಗಳಿಗೆಲ್ಲ ಕೆಲಸ
ಅಸಂಖ್ಯ ಗೋರಿಗಳ ತೋಡಿಸಲು ನಾವು
ಅರ್ಜಿಯನು ಕರೆದಿಹೆವು ತ್ವರೆಮಾಡಿ ನೀವು

★

ಇತಿಹಾಸ ನೋಡು

ಸ್ವಯಂ ಘೋಷಿತ ಧರ್ಮ ರಕ್ಷಕರು ಇಂದೆ
ಚುರುಕಾಗಿ ಮುಂದೊತ್ತಿ ಬರುತಿಹುದ ಕಂಡೆ
ನಿಜ ನುಡಿವ ನಿಜ ಬರೆವ ಜನಕೆಲ್ಲ ಕೇಡು
ಕಾದಿಹುದು ಖಂಡಿತವು ಇತಿಹಾಸ ನೋಡು

★

ಸ್ವಾತಂತ್ರ್ಯೋತ್ಸವ

ಸ್ವಾತಂತ್ರ್ಯ ಉತ್ಸವವು ಹೊಸದೇನು ತಂತು
ಪೆಪ್ಪರ್‌ಮೆಂಟ್‌ನ ಬದಲು ಚಾಕ್ಲೇಟು ಬಂತು
ಮುಖ್ಯ ಅತಿಥಿಗಳಿಗೆ ಹಾರ ಉಪಹಾರ
ಭಾಷಣವು ಹಳೆಯದೇ ಬಡವನುದ್ಧಾರ

- ವಿಡಂಬಾರಿ

ಇದು ಬೆಂಗಳೂರಿನ ಕೇಂದ್ರ ಕಾರಾಗೃಹದ ಬಂಧಿಗಳು ಅಕ್ಷಯ ಪಾತ್ರೆ ಯೋಜನೆಯ ಅಧ್ಯಕ್ಷರಿಗೆ ಮಾಡಿಕೊಂಡಿರುವ ಮನವಿ. ಊಟ ಪೂರೈಕೆಗೆ ಸರ್ಕಾರದಿಂದ ಟೆಂಡರ್ ಪಡೆದು ಇಸ್ಕಾನ್ ಸಂಸ್ಥೆಯು ಜೈಲು ವಾಸಿಗಳಿಗೆ ಪೂರೈಸುತ್ತಿರುವ ಅಡುಗೆಯಿಂದ ಕಾಪಾಡಬೇಕಾದರೆ ಸಾಕ್ಷಾತ್ ಶ್ರೀ ಕೃಷ್ಣನೇ ಅವತಾರ ತಾಳಿ ಬರಬೇಕು ಎಂದಿದ್ದಾರೆ ಮನವಿಗೆ ಸಹಿ ಮಾಡಿರುವ 298 ಜನ ಇಸ್ಕಾನ್ ಸಾಂಬಾರ್ ಸಂತ್ರಸ್ತರು. ಅವರ ಮನವಿ ಹೀಗಿದೆ.

ಇಸ್ಕಾನ್ ಊಟದಿಂದ ನಮ್ಮನ್ನು ಕಾಪಾಡಲು

'ಶ್ರೀಕೃಷ್ಣ ಬೇಗ ಜನ್ಮ ತಾಳಿ ಬರಲಿ'

ಕಾರಾಗೃಹ ಬಂಧಿಗಳ ಮನವಿ

ಇವರಿಗೆ,
ಮಾನ್ಯ ಅಧ್ಯಕ್ಷರು,
ಅಕ್ಷಯ ಪಾತ್ರೆ ಯೋಜನೆ,
ಇಸ್ಕಾನ್ ದೇವಸ್ಥಾನ, ರಾಜಾಜಿನಗರ,
ಬೆಂಗಳೂರು-10

ಮಾನ್ಯರೇ

ವಿಷಯ: ಹಣಪಡೆದು ಸರ್ಕಾರದಿಂದ ಇಸ್ಕಾನ್ ಸಂಸ್ಥೆ ಬಂಧಿಗಳಿಗೆ ನೀಡುತ್ತಿರುವ ಕಳಪೆ ಗುಣಮಟ್ಟದ ಸಾಂಬಾರನ್ನು ಮಾನವೀಯ ದೃಷ್ಟಿಯಿಂದ ಪ್ರಜ್ಞಾಪೂರ್ವಕವಾಗಿ ಆಹಾರ ವಿತರಣೆ ಮಾಡುವುದರ ಬಗ್ಗೆ

ಕಾರಾಗೃಹದಲ್ಲಿರುವ ಬಂಧಿಗಳಿಗೆ ಸರ್ಕಾರದಿಂದ ಹಣ ಪಡೆದು ತಾವುಗಳು ಸುಮಾರು ಒಂದು ವರ್ಷದಿಂದ ಮಧ್ಯಾಹ್ನ ಹಾಗೂ ಸಂಜೆಯ ಊಟವನ್ನು ತಮ್ಮ ದೇವಾಲಯದ ಅಕ್ಷಯ ಪಾತ್ರೆ ಯೋಜನೆಯ ಅಡಿಯಲ್ಲಿ ಆಹಾರ ವಿತರಣೆ ಮಾಡುವ ಜವಾಬ್ದಾರಿಯನ್ನು ತಮ್ಮ ಸಂಸ್ಥೆ ಪಡೆದಿದೆ. ಆದರೆ ಆರಂಭದ ನಾಲ್ಕು-ಐದು ದಿನಗಳು ತಮ್ಮ ದೇವಸ್ಥಾನದಿಂದ ಉತ್ತಮ ಅನ್ನ ಸಾಂಬಾರು, ಮಜ್ಜಿಗೆ, ವಿತರಣೆ ಆಯಿತು. ಇದರಿಂದ ಸಂತೃಪ್ತರಾದ ಬಂಧಿಗಳು ಇಸ್ಕಾನ್ ಸಂಸ್ಥೆಯ ಊಟವನ್ನೇ ಮುಂದುವರೆಸಲು ಆಸೆ ಪಟ್ಟರು. ಆದರೆ ತಮ್ಮ ಸಂಸ್ಥೆ ಕಾರಾಗೃಹಕ್ಕೆ 8-10 ದಿನಗಳ ಕಾಲ ಉತ್ತಮ ಆಹಾರವನ್ನು ಒದಗಿಸಿ ನಂತರದ ದಿನಗಳಲ್ಲಿ ಗುಣಮಟ್ಟ ರುಚಿ, ಕೆಳಮಟ್ಟಕ್ಕೆ ಬಂತು. ಆಗ ಬಂಧಿಗಳು ಅಧಿಕಾರಿಗಳ ಮೂಲಕ ಕೆಲವೊಮ್ಮೆ ನೇರವಾಗಿ ತಮ್ಮ ಸಂಸ್ಥೆಗೆ ಪತ್ರ ಬರೆದಾಗ ಕೆಲವು ಸ್ವಾಮೀಜಿಗಳು ಕಾರಾಗೃಹದ ಒಳಗೆ ಬಂದು ಆಹಾರ ಗುಣಮಟ್ಟದ ಬಗ್ಗೆ ದೂರು ನೀಡಿದಾಗ ಪ್ರಥಮ ಬಾರಿಗೆ ಸ್ವಾಮಿಗಳು ತುಂಬಾ ವಿಷಾದ ವ್ಯಕ್ತಪಡಿಸಿ, ಖಂಡಿತವಾಗಿಯೂ ನಮಗೆ ಬೇಸರ ವಾಗಿದೆ. ವಿನಾಕಾರಣ ಒಂದೆರಡು ತಿಂಗಳು ತಮಗೆ ಈ ರೀತಿಯ ಆಹಾರ ವಿತರಣೆ ಮಾಡಿದಕ್ಕೆ ನಾವುಗಳು ದುಃಖಿಸುತ್ತೇವೆ. ಇನ್ನು ಮುಂದೆ ಹೀಗೆ ಆಗದಂತೆ ಗಮನಹರಿಸುತ್ತೇವೆ ಎಂದು ವಿಷಾದ ವ್ಯಕ್ತಪಡಿಸಿದರು. ಆಗ ನಾವುಗಳು ಕಾರಾಗೃಹದಲ್ಲಿ ಅನೇಕ ರಾಜ್ಯದ ಬೇರೆ ಬೇರೆ ಭಾಷೆಗಳನ್ನಾಡುವ ವ್ಯಕ್ತಿಗಳು ಇರುವುದರಿಂದ ತಮ್ಮಲ್ಲಿ ದೊರೆಯುವ ಎಲ್ಲಾ ಭಾಷೆಯ ಭಗವತ್ ಗೀತೆಯನ್ನು ಕಾರಾಗೃಹದ ಗ್ರಂಥಾಲಯಕ್ಕೆ ಉಚಿತವಾಗಿ ನೀಡುವಂತೆ ವಿನಂತಿಸಿದೆವು. ನಂತರ ಒಂದು, ಎರಡು ವಾರಗಳಲ್ಲಿ ಭಗವತ್ ಗೀತೆ ಪುಸ್ತಕ ಕಾರಾಗೃಹದ ಗ್ರಂಥಾಲಯ ಸೇರಿತು. ಆದರೆ ಆಹಾರದ ಗುಣಮಟ್ಟ ಮಾತ್ರ ಯಥಾಸ್ಥಿತಿಯಲ್ಲಿಯೇ ಕಳಪೆಯಾಗಿ ಸರಬರಾಜಾಗಲು ಶುರುವಾಯಿತು. ಅನಂತರ ಪುನಃ ನಾವು ತಮ್ಮ ಸಂಸ್ಥೆಗೆ ಪತ್ರ ಬರೆದಾಗ ತಮ್ಮ ಸಂಸ್ಥೆಗೆ ಸೇರಿದ ಮತ್ತೆ ಇಬ್ಬರು ಸ್ವಾಮೀಜಿಗಳು ಬಂದು ಆಹಾರದ ಬಗ್ಗೆ ವಿಚಾರಿಸುವಾಗ ತಾವು ಹೇಳುತ್ತಿರುವ ವಿಚಾರ, ಮೀಟಿಂಗ್‌ನಲ್ಲಿ ಚರ್ಚೆಯಾಗುತ್ತಿದೆ. ಆದಷ್ಟು ಬೇಗ ಗುಣಮಟ್ಟ ಸರಿಪಡಿಸುತ್ತೇವೆಂದು ಉತ್ತರಿಸಿ ಜಾರಿಕೊಂಡರು. ಅನಂತರದ ದಿನಗಳಲ್ಲಿ ನಾವುಗಳು ಖುದ್ದಾಗಿ ಅನೇಕ ಬಾರಿ ಮನವಿಯ ಮೂಲಕ ಆಹಾರದ ಗುಣಮಟ್ಟ ಸುಧಾರಿಸಲು ಬರೆದು ತಿಳಿಸಿದಾಗ ನಾಲ್ಕಾರು ಸ್ವಾಮೀಜಿಗಳು ಕಾರಾಗೃಹಕ್ಕೆ ಬಂದು ಸರ್ಕಾರ ನೀಡುತ್ತಿರುವ ಹಣಕ್ಕೆ ಇದಕ್ಕಿಂತ ಹೆಚ್ಚಿನ ಗುಣಮಟ್ಟದ ಆಹಾರದ ಗುಣಮಟ್ಟ ಸುಧಾರಿಸಲು ಬರೆದು ತಿಳಿಸಿದಾಗ ನಾಲ್ಕಾರು ಸ್ವಾಮೀಜಿಗಳು ಕಾರಾಗೃಹಕ್ಕೆ ಬಂದು ಸರ್ಕಾರ ನೀಡುತ್ತಿರುವ ಹಣಕ್ಕೆ ಇದಕ್ಕಿಂತ ಹೆಚ್ಚಿನ ಗುಣಮಟ್ಟದ ಆಹಾರ ನೀಡಲು ನಮ್ಮಿಂದ ಸಾಧ್ಯವಾಗುವುದಿಲ್ಲ, ಮುಂದೆ ದಾನಿಗಳು ಸಹಾಯ ಮಾಡಿದಾಗ ಗುಣಮಟ್ಟ ಹೆಚ್ಚಿಸುತ್ತೇವೆ ಎಂಬ ಪ್ರಜ್ಞೆಯನ್ನು ನಮಗೆ ಮೂಡಿಸಿದರು. ಸ್ವಾಮಿ ಹೀಗೆ ಒಮ್ಮೆಮ್ಮೆಯು ಬೇರೆ ಬೇರೆ ಸ್ವಾಮಿಗಳು ಬಂದು ನಮ್ಮಗಳಿಗೆ ವಿವಿಧ ರೀತಿಯ ಭರವಸೆಗಳನ್ನು ನೀಡಿದರೇ ವಿನಃ ಇದುವರೆವಿಗೂ ಆಹಾರದ ಗುಣಮಟ್ಟ ಸರಿ ಆಗಲಿಲ್ಲ. ತಾವು ನೀಡುತ್ತಿರುವ ಸಾಂಬಾರು ಬಾಯಿಗೆ ಹಾಕಲು ಸಾಧ್ಯವಾಗುತ್ತಿಲ್ಲ. ದಿನನಿತ್ಯ ಒಂದೇ ತರಹದ ಸಾಂಬಾರನ್ನು ಎರಡು ಹೊತ್ತಿಗೂ ನೀಡುವುದರಿಂದ ಹಾಗೂ ನಿತ್ಯ ಕುಂಬಳಕಾಯಿ, ಸೋರೆಕಾಯಿ, ಬಾಳೆಕಾಯಿ, ಬೇಳೆ ಹಾಕುವುದರಿಂದ ನಮ್ಮ ನಾಲಿಗೆಯ ರುಚಿಯೇ ಬದಲಾಗಿ ಹೋಗಿದೆ. ಯಾವುದೇ ರುಚಿಯನ್ನು ಕಂಡು ಹಿಡಿಯುವ ಸಾಮರ್ಥ್ಯವನ್ನು ಕಳೆದುಕೊಂಡಿದೆ.

ಸ್ವಾಮಿ ನಾವು ಅನೇಕ ಬಾರಿ ಲಿಖಿತ ಮೂಲಕ ಬರೆದು ತಮ್ಮ ಸಂಸ್ಥೆಗೆ ವಿನಂತಿಸಿಕೊಂಡಿದ್ದರೂ ಮತ್ತು ನಮ್ಮ ಸಂಸ್ಥೆಯ ಸ್ವಾಮಿಗಳು ಕಾರಾಗೃಹಕ್ಕೆ ಭೇಟಿ ಮಾಡಿದಾಗ, ಹತ್ತಾರು ಬಾರಿ ವಿನಂತಿಸಿಯು ಯಾವುದೇ ಪ್ರಯೋಜನ ಈವರೆವಿಗೂ ಸಹ ಆಗಿಲ್ಲ. ಸುಮಾರು ಒಂದು ವರ್ಷದಿಂದ ಬಂಧಿಗಳು ತಮ್ಮ ಒಂದೇ ತರಹದ ರುಚಿ ಹೀನ ಸಾಂಬಾರನ್ನು ಸೇವಿಸಿ ಅನೇಕರು ಕೆಲವು ಕಾಯಿಲೆಗಳಿಗೆ ಗುರಿಯಾಗಿದ್ದಾರೆ. ಶೇ.60-70 ರಷ್ಟು ಭಾಗ ಬಂಧಿಗಳಿಗೆ ಮಂಡಿನೋವು ಕಾಣಿಸಿಕೊಂಡಿದೆ. ತಮ್ಮ ಸಂಸ್ಥೆಯವರು ದಿನಾಲೂ ಸಾಂಬಾರಿಗೆ ಉಪಯೋಗಿಸುತ್ತಿರುವ ಬೇಳೆಯ ಗುಣಮಟ್ಟವನ್ನು ಪರೀಕ್ಷಿಸಬೇಕಾಗಿದೆ. ಇದು ನಿಜವಾಗಿ ತೊಗರಿ ಬೇಳೆ ಅಲ್ಲ, ಸೇವಿಸಲು ಯೋಗ್ಯವೇ ಎಂಬುದುನ್ನು ಕೂಡ ಪರೀಕ್ಷೆ ಆಗಬೇಕಾಗಿದೆ.

ಸ್ವಾಮಿ, ಸರ್ಕಾರ ನೀಡುತ್ತಿರುವ ಹಣದಿಂದ ತಮ್ಮ ಸಂಸ್ಥೆಯವರಿಗೆ ಯೋಗ್ಯ ಆಹಾರ ವಿತರಣೆ ಮಾಡಲು ಸಾಧ್ಯವಿಲ್ಲ ಎಂದು ತಿಳಿದಿದ್ದರೂ ತಾವುಗಳೇಕೆ 13 ರೂಪಾಯಿಗಳಿಗೆ ಟೆಂಡರ್ ಕರೆದಿರುವಿರಿ.(ಈಗ 19 ರೂಪಾಯಿ 58 ಪೈಸೆ ನೀಡುತ್ತಿದ್ದಾರೆ) ಶ್ರೀಕೃಷ್ಣ ಪ್ರಜ್ಞಾವಂತರಾದ ತಮಗೆ ಶ್ರೀ ಕೃಷ್ಣನ ಜನ್ಮ ಸ್ಥಳದಲ್ಲಿರುವ ನಾವು ಹೆಚ್ಚಾಗಿ ವಿವರಿಸಲು ಸಾಧ್ಯವಾಗುತ್ತಿಲ್ಲ. ಧರ್ಮದ ಉನ್ನತಿಗೆ, ಆ ಧರ್ಮದ ಅವನತಿಗೆ ಶ್ರೀ ಕೃಷ್ಣ ಬೇಗ ಜನ್ಮ ತಾಳಿ ಬರಲಿ, ವಂಚಕರನ್ನು, ದೇವರ ಹೆಸರಿನಲ್ಲಿ ಮೋಸ ಮಾಡುವವರನ್ನು ಎಚ್ಚರಿಸಲಿ, ಎಂದು ನಾವು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಅಲ್ಲದೇ, ನಮ್ಮ ನೋವು, ಕೂಗು ಯಾರಿಗೂ ಈವರೆಗೂ ಕೇಳಿಸಿಲ್ಲ. ತಮಗೆ ಈ ಪತ್ರವನ್ನು ಅಂತಿಮವಾಗಿ ಬರೆಯುತ್ತಿದ್ದೇವೆ. ಇದನ್ನು ತಾವುಗಳು ಗಮನಹರಿಸಿ ಸಾಂಬಾರಿನ ಗುಣಮಟ್ಟವನ್ನು 15.08.08ರ ಸ್ವಾತಂತ್ರೋತ್ಸವದ ದಿನದವರೆಗೆ ಸರಿಪಡಿಸಿಕೊಳ್ಳಲು ಅವಕಾಶವಿದೆ. ನಂತರದ ದಿನಗಳಲ್ಲಿ ಸಾಂಬಾರಿನ ಗುಣಮಟ್ಟ ಸರಿಪಡಿಸದೇ ಇದ್ದರೆ ಮುಂದೆ ದಿನಾಂಕ ನಿಗದಿಪಡಿಸಿ ನಮ್ಮ ಮಹಾತ್ಮ ಗಾಂಧೀಜಿಯವರ ಫೋಟೋವನ್ನು ಮುಂದಿಟ್ಟುಕೊಂಡು ಕಾರಾಗೃಹದ ಸಮಸ್ತ ಬಂಧಿಗಳು ಉಪವಾಸ ಸತ್ಯಾಗ್ರಹವನ್ನು ಆರಂಭಿಸಬೇಕಾಗುತ್ತದೆ. ಇಸ್ಕಾನ್ ಊಟವನ್ನು ರದ್ದುಗೊಳಿಸಿ ಎಂದು. ಆದರೆ ಅದಕ್ಕೆಲ್ಲಾ ತಾವು ಅವಕಾಶ ಮಾಡಿಕೊಡದೆ ಶ್ರೀ ಕೃಷ್ಣ ಪ್ರಜ್ಞಾವಂತರಾದ ತಾವು ಸಾಂಬಾರಿನ ಗುಣಮಟ್ಟವನ್ನು ಸರಿಪಡಿಸಿ.

ವಂದನೆಗಳೊಂದಿಗೆ,
ತಮ್ಮ ವಿಶ್ವಾಸಿಗಳು,
ಬಂಧಿಗಳ ಬಳಗ, ಕೇಂದ್ರ ಕಾರಾಗೃಹ,
ಬೆಂಗಳೂರು-560 010



ತ್ರಿಪುರ ಆಗ - ಈಗ

ಇದು ತ್ರಿಪುರ ಎಂಬ ಪುಟ್ಟ ರಾಜ್ಯಕ್ಕೆ ಸಂಬಂಧಿಸಿದ ಸಮಾಚಾರ. ಅಲ್ಲಿ ಸುದೀರ್ಘ ಹೋರಾಟ ಚಳುವಳಿಯ ನಂತರ 1980ರಲ್ಲಿ ಎಡರಂಗ ಸರ್ಕಾರ ಆಡಳಿತಕ್ಕೆ ಬಂತು. ಎಡರಂಗ ಸರ್ಕಾರ ಬರುವ ಮುಂಚೆ ಅಲ್ಲಿನ ಶಿಕ್ಷಣ ಪರಿಸ್ಥಿತಿ, ಅಲ್ಲಿನ ಆರೋಗ್ಯ ಪರಿಸ್ಥಿತಿ ಹೇಗಿತ್ತು ನಂತರ ಏನಾಗಿದೆ ಎಂಬುದಕ್ಕೆ ಇಲ್ಲಿ ಕೆಲವು ಅಂಕಿ ಸಂಖ್ಯೆ ಇವೆ ಗಮನಿಸಿ. ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಅದರಲ್ಲೂ ರಾಜ್ಯ ಸರ್ಕಾರಗಳಿಗೆ ಇರುವ ಗಂಭೀರ ಮಿತಿಗಳಲ್ಲಿ ಈಶಾನ್ಯ ಭಾರತ ಪುಟ್ಟ ರಾಜ್ಯದಲ್ಲಿ ಈ ಬದಲಾವಣೆ ಆಗಿದೆ ಎಂಬುದು ತುಂಬಾ ಗಮನಾರ್ಹ ಅಲ್ಲವೇ? ಪರಿಶೀಲಿಸಿ ನೋಡಿ.

1972ರಲ್ಲಿ ತ್ರಿಪುರ ಸಾಕ್ಷರತೆ ಶೇ.30.98 ಇತ್ತು. 2007ರಲ್ಲಿ ಅದು ಶೇ. 81.05 ಗೆ ತಲುಪಿದೆ. 72 ರಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ 1 ರಿಂದ 4 ನೇ ತರಗತಿಯವರೆಗಿನ ಮಕ್ಕಳಲ್ಲಿ ಶೇ.63.92 ಇತ್ತು 2007ಕ್ಕೆ ಅದು ಶೇ.7.81ಕ್ಕೆ ಇಳಿದಿದೆ.

72 ರಲ್ಲಿ 1 ರಿಂದ 8ವರೆಗಿನ ತರಗತಿ ಮಕ್ಕಳಲ್ಲಿ ಶಾಲೆ ಬಿಡುವವರ ಪ್ರಮಾಣ ಶೇ.76.61 ಇತ್ತು. ಈಗ ಅದು ಶೇ 14.79ಕ್ಕೆ ಇಳಿದಿದೆ. 1972 ರಲ್ಲಿ ತ್ರಿಪುರ ರಾಜ್ಯದಲ್ಲಿದ್ದ ಉಪ ಆರೋಗ್ಯ ಕೇಂದ್ರಗಳ ಸಂಖ್ಯೆ112 ಈ 2007ರಲ್ಲಿ 698 ಕೇಂದ್ರಗಳಿವೆ.

ಇವು ಕೆಲವು ಅಂಕಿ ಸಂಖ್ಯೆಗಳಷ್ಟೆ. ಹೀಗೆ ಇನ್ನು ಎಷ್ಟೇ ಕೊಡಬಹುದು. ಇದರಲ್ಲಿ ಶಿಕ್ಷಣ ರಂಗದ ಸಾಧನೆಗೆ ಕಾರಣವಾದ ಅಂಶಗಳಲ್ಲಿ ಪ್ರಧಾನ ವಾದದ್ದು ಭೂ ಹೀನರಿಗೆ ಭೂಮಿ ಹಂಚುವ ಭೂ ಸುಧಾರಣೆ ಅನ್ನುವುದು ಬೇರೆಲ್ಲಾ ಸರ್ಕಾರಗಳು ಗಮನಿಸಬೇಕಾದ ಅಂಶ. ಗಮನಿಸುವರೇ?

ಒಂದು ವಿಶೇಷ

ಸ್ವಾತಂತ್ರ್ಯ ಭಾರತದ ಒಂದು ವಿಶೇಷ
ಆಗಲಿದೆ ಭಾರತವು ಅಮೇರಿಕಾದ ದಾಸ
ಭಾರತಕೆ ದಾಸ್ಯತೆಯು ಹೊಸದಲ್ಲ ನೋಡಿ
ರೂಢಿಯಿದೆ ನಮಗೆಲ್ಲ ಕಂಡವರಬೇಡಿ

– ವಿಡಂಬಾರಿ

ಜಗದಗಲ

ಶರತ್‌ಚಂದ್ರ

ಮುಶರಫ್ ಪದಚ್ಯುತಿ ?



ಪಾಕಿಸ್ತಾನದ ಅಧ್ಯಕ್ಷ ಮುಶರಫ್ ಅವರನ್ನು ಪದಚ್ಯುತಿಗೊಳಿಸಲು ಅಲ್ಲಿನ ಆಳುವ ರಂಗದ ಸರ್ಕಾರ ನಿರ್ಧರಿಸಿದೆ. ಅವರ ವಿರುದ್ಧ ದೋಷಾರೋಪಣೆ ಮಾಡಲು ಸರ್ಕಾರ ನಿರ್ಧರಿಸಿದೆ. ರಾಜೀನಾಮೆ ಕೊಡಲು ನಿರಾಕರಿಸುತ್ತಿರುವ ಮತ್ತು ಆಡಳಿತದಲ್ಲಿ ಹಸ್ತಕ್ಷೇಪ ನಡೆಸುತ್ತಿರುವ ಮುಶರಫ್ ಅಧ್ಯಕ್ಷರಾಗಿ ಮುಂದುವರೆದಷ್ಟು ಕಾಲ ಪ್ರಜಾಪ್ರಭುತ್ವಕ್ಕೆ ಅಪಾಯ ಎಂದು ಆಳುವ ರಂಗ ನಿರ್ಧರಿಸಿದಂತಿದೆ. ನವಾಜ್ ಶರೀಫ್ ರ ಪಕ್ಷ ಮೊದಲಿಂದಲೂ ಅಧ್ಯಕ್ಷ ಮುಶರಫ್ ವಿರುಧ್ಧ ದೋಷಾರೋಪಣೆ ಮಾಡಲು ಒತ್ತಾಯಿಸುತ್ತಿತ್ತು. ಮುಶರಫ್ ಅವರನ್ನು ಪದಚ್ಯುತಿ ನಂತರ ಅವರು ಬರ್ಖಾಸ್ತುಗೊಳಿಸಿದ ಸುಪ್ರೀಂ ಕೋರ್ಟು ನ್ಯಾಯಾಧೀಶರನ್ನು ಮರಳಿ ನೇಮಕ ಮಾಡುವ ಯೋಜನೆ ಸರ್ಕಾರದ್ದು.

ದೋಷಾರೋಪಣೆ ಪ್ರಕ್ರಿಯೆ ಪಾಕಿಸ್ತಾನದ ಸಂವಿಧಾನದ ಪ್ರಕಾರ ಅಧ್ಯಕ್ಷರನ್ನು ಪದಚ್ಯುತಿಗೊಳಿಸುವ ವಿಧಾನ. ದೋಷಾರೋಪಣೆಯನ್ನು ರಾಷ್ಟ್ರೀಯ ಮತ್ತು ಪ್ರಾಂತೀಯ ಅಸೆಂಬ್ಲಿಗಳು ಮೂರನೇ ಎರಡು ಬಹುಮತದಿಂದ ಮಂಜೂರು ಮಾಡಬೇಕು. ಇತ್ತೀಚಿನ ಚುನಾವಣೆಗಳ ನಂತರ ಮುಶರಫ್-ವಿರೋಧಿ ಶಕ್ತಿಗಳ ಬಲ ಹೆಚ್ಚಿದೆ. ಆದರೆ ಕೆಲವಾದರೂ ಮಾಜಿ ಮುಶರಫ್ ಬೆಂಬಲಿಗರೂ ಇದಕ್ಕೆ ಬೆಂಬಲ ನೀಡದೆ, ದೋಷಾರೋಪಣೆಗೆ ಬೇಕಾದ ಬಹುಮತ ಬರಲಾರದು.

ಮುಶರಫ್ ಮೇಲೆ ರಾಜೀನಾಮೆ ನೀಡುವ ಒತ್ತಡ ಹೇರಲು ಈ ಕ್ರಮ. ಅಧ್ಯಕ್ಷ ಮುಶರಫ್ ರಿಗೆ ಆಳುವ ರಂಗದ ಸರ್ಕಾರ ಬರ್ಖಾಸ್ತು ಮಾಡಿ, ತಾತ್ಕಾಲಿಕ ಸರ್ಕಾರ ರಚಿಸುವ ಅಧಿಕಾರ ಇದೆ. ಅವರು ಆ ಅಧಿಕಾರ ಚಲಾಯಿಸುವರೇ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಇದು 80 ರ, 90 ರ ದಶಕದ ಪಾಕಿಸ್ತಾನ ಅಲ್ಲ. ಈಗ ಪ್ರಜಾಪ್ರಭುತ್ವ ಮತ್ತು ಜನತೆಯ ಬಲ ಹಿಂದಿನಂತೆ ದುರ್ಬಲವಲ್ಲ. ಮುಶರಫ್ ಈ ಕ್ರಮ ಕೈಗೊಂಡರೆ ತೀವ್ರ ಪ್ರತಿರೋಧ ಎದುರಿಸಬೇಕಾಗುತ್ತದೆ ಎಂದು ಸರ್ಕಾರ ಎಚ್ಚರಿಸಿದೆ. ಬೇಜಿಂಗ್ ಒಲಿಂಪಿಕ್ಸ್ ಪ್ರಯಾಣವನ್ನು ಮುಶರಫ್ ರದ್ದು ಮಾಡಿದ್ದು ಅವರ ಮುಂದಿನ ಕ್ರಮಕ್ಕೆ ಪಾಕಿಸ್ತಾನ ಕಾದಿದೆ. ಈ ನಡುವೆ ನವಾಜ್ ಶರೀಫ್ ರ ಪಕ್ಷ ಆಳುವ ರಂಗದ ಸರ್ಕಾರ ಸೇರುವ ಸೂಚನೆ ಇದೆ. ○

...ತಲೆ ಒಡೆದ ಕೇಡಿಗರು

ಪುಟ 9 ರಿಂದ

ಡಿವೈಎಫ್ಐ-ಸಿಪಿಐ(ಎಂ) ನಡೆಸಿದ ಚಳುವಳಿ ವರದಾನವಾಯಿತು. ಇದೇ ತನ್ನ ಕಾರ್ಯಾಚರಣೆಗೆ ಸೂಕ್ತ ಎಂದು ತೀರ್ಮಾನಿಸಿ ಗಲಭೆ ಸೃಷ್ಟಿಸಲು ಯತ್ನಿಸಿತು. ತನ್ನ 'ಗೂಂಡಾಗಳನ್ನು ಬಿಟ್ಟು ವ್ಯವಸ್ಥಿತವಾಗಿ 'ಕಾರ್ಯಾಚರಣೆ' ನಡೆಸಿತು. ಇದರಲ್ಲಿ ಸಫಲತೆ ಕಾಣಲು ಹೋಗಿ ಹಗಲಲ್ಲಿ ಕಣ್ಮುಚ್ಚಿ ಹಾಲು ಕುಡಿದಿದೆ' ಇದನ್ನು ಜನತೆ ಅರ್ಥ ಮಾಡಿಕೊಳ್ಳಲಾರರೇನು...? ಸೈದ್ಧಾಂತಿಕವಾಗಿ ಕಮ್ಯೂನಿಷ್ಟರನ್ನು ಎದುರಿಸಲಾರದ ಸಂಘ ಪರಿವಾರ ದೈಹಿಕ ಧಾಳಿಗೆ ಮುಂದಾಗಿದೆ. 'ಕೈಲಾಗದವರು ಮೈ ಪರಚಿಕೊಂಡಂತೆ', ಇದು ಹೊಸದೇನು ಅಲ್ಲ. ಈ ಹಿಂದೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ ನಾಯರ್ ಮನೆಯ ಮೇಲೆ ಧಾಳಿ ನಡೆಸಿದ್ದು ಅವರ ಹತಾಶೆಯ ಫಲಶೃತಿ.

ರಾಜ್ಯಾದ್ಯಂತ ಜನತೆಯ ತೀವ್ರ ಖಂಡನೆ

ಮಂಗಳೂರಿನಲ್ಲಿ ನಡೆದ ಪೋಲೀಸ್ ದೌರ್ಜನ್ಯಕ್ಕೆ ರಾಜ್ಯದೆಲ್ಲೆಡೆ ಜನತೆಯ ತೀವ್ರ ಖಂಡನೆ ವ್ಯಕ್ತವಾಗಿದೆ.

ಬೆಂಗಳೂರು ನಗರದಲ್ಲಿ ಮರುದಿನ ರಾಜ್ಯ ಪೋಲೀಸ್ ಮಹಾ ನಿರ್ದೇಶಕರ ಕಛೇರಿ ಎದುರು ಡಿವೈಎಫ್ಐ ಹಾಗೂ ಸಿಪಿಐ(ಎಂ) ಜಂಟಿಯಾಗಿ ಪ್ರತಿಭಟನೆ ನಡೆಸಿದವು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮಾತನಾಡಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಹತ್ತಿಕ್ಕಲು ಪೋಲೀಸ್ ಇಲಾಖೆಯನ್ನು ದುರ್ಬಳಕೆ ಮಾಡುತ್ತಿರುವುದು ಖಂಡನಾರ್ಹ. ಮಂಗಳೂರು ಗಲಭೆಗೆ ಕಾರಣರಾದ ಪೋಲೀಸ್ ಇನ್ಸ್‌ಪೆಕ್ಟರ್, ಉಮೇಶ್ ಶೇಟ್, ಕದ್ರಿ ಇನ್ಸ್‌ಪೆಕ್ಟರ್ ಎಂ.ಕೆ.ಗಣಪತಿ ಹಾಗೂ ಸಬ್ ಇನ್ಸ್‌ಪೆಕ್ಟರ್ ನಾರಾಯಣ ಬೈಂದೂರು ಇವರನ್ನು ಸಸ್ಪೆಂಡ್ ಮಾಡಬೇಕೆಂದು ಆಗ್ರಹಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ಜಿ.ಎನ್. ನಾಗರಾಜ್, ಎಸ್.ವೈ.ಗುರುಶಾಂತ್, ಎಸ್.ಪ್ರಸನ್ನಕುಮಾರ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಡಿವೈಎಫ್ಐ ಜಿಲ್ಲಾಧ್ಯಕ್ಷ ನಾಗರಾಜ್, ಮುಖಂಡರಾದ ಲಿಂಗರಾಜು ಭಾಗವಹಿಸಿದ್ದರು. ನಂತರ ರಾಜ್ಯ ಪೋಲೀಸ್ ಮಹಾ ನಿರ್ದೇಶಕ ಶ್ರೀ ಕುಮಾರನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು. ಬೆಂಗಳೂರಿನ ದೊಡ್ಡಬಳ್ಳಾಪುರ, ಹೊಸಕೋಟೆ, ಆನೇಕಲ್ ತಾಲ್ಲೂಕು ಕೇಂದ್ರಗಳಿಗೆ ಡಿವೈಎಫ್ಐ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ.

ಹಾಸನದಲ್ಲಿ ಮೂರನೇ ದಿನವೂ ಡಿವೈಎಫ್ಐ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ. ತುಮಕೂರು, ಮೈಸೂರು, ಕೋಲಾರ, ಕೆ.ಜೆ.ಎಫ್, ಚಿಕ್ಕಬಳ್ಳಾಪುರ, ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ, ಮಳವಳ್ಳಿ, ಮಂಡ್ಯ ಕೊಡಗು, ಉಡುಪಿ, ಕಾರವಾರ, ದಾಂಡೇಲಿ, ಕುಂದಾಪುರ, ಹಾನಗಲ್, ಸಿಂಧನೂರು, ರಾಯಚೂರು, ಹೊಸಪೇಟೆ, ಗದಗ್, ಗುಲ್ಬರ್ಗ, ಬೀದರ್ ಹೀಗೆ ರಾಜ್ಯದೆಲ್ಲೆಡೆ ಸಿಪಿಐ(ಎಂ), ಡಿವೈಎಫ್ಐ, ಎಸ್.ಎಫ್.ಐ ನೇತೃತ್ವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿ ಪ್ರತಿಭಟನೆ ನಡೆಸಲಾಗಿದೆ.





ಘಟನಾ ಸ್ಥಳಕ್ಕೆ ಸಿಪಿಎಂ- ಡಿವೈಎಫ್ಐ ನಿಯೋಗ

ಬೆಂಗಳೂರಿನಿಂದ ಸಿಪಿಐ(ಎಂ)- ಡಿವೈಎಫ್ಐ ಜಂಟಿ ನಿಯೋಗ ಸ್ಥಳಕ್ಕೆ ತೆರಳಿ ಪರಿಸ್ಥಿತಿ ಅವಲೋಕಿಸಿ ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿದೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಮಾಜಿ ಶಾಸಕರಾಧ ಜಿ.ವಿ.ಶ್ರೀರಾಮರೆಡ್ಡಿ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಗೌರವ ನೀಡದ ಬಿಜೆಪಿ ಆಡಳಿತ ಪ್ಯಾಸಿಸ್ಟ್ ಧೋರಣೆ ತಳೆದಿದೆ. ಜನರ ಅಹವಾಲು ಆಲಿಸದ ಮಂಗಳೂರು ಮಹಾನಗರ ಪಾಲಿಕೆ ಮೇಯರ್ ಹುದ್ದೆಗೆ ಅನರ್ಹ ಎಂದು ಘಟನೆಯನ್ನು ತೀವ್ರವಾಗಿ ಕಟುವಾಗಿ ಟೀಕಿಸಿದ್ದಾರೆ. "ಮಂಗಳೂರು ಮಹಾನಗರ ಪಾಲಿಕೆ ಎದುರೇ ಚಳುವಳಿ ನಡೆಸಿರುವುದು ನನಗೆ ತಿಳಿದೇ ಇಲ್ಲ ಎಂಬ ಮೇಯರ್ ಹೇಳಿಕೆ ಹಾಸ್ಯಾಸ್ಪದ" ಎಂದ ಅವರು, ಪಾಲಿಕೆ ಮುಂದೆ ನಡೆಯುವ ಚಳುವಳಿ ಅವರಿಗೆ ತಿಳಿಯದಾದರೆ ಪಾಲಿಕೆ ವ್ಯಾಪ್ತಿಯ ಇತರ ವಿಚಾರಗಳು ಗೊತ್ತಾದೀತು ಎಂದು ಲೇವಡಿ ಮಾಡಿದರು. ನಿಯೋಗದಲ್ಲಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಎನ್.ಎಲ್. ಭರತ್‌ರಾಜ್, ಡಿವೈಎಫ್ಐ ಮುಖಂಡರಾದ ಪಿ.ಆರ್.ಭರತ್, ಹಾಸನದ ಹಮೀದ್ ಮತ್ತಿತರರು ಭಾಗವಹಿಸಿದ್ದರು.

ಕುಂದಾಪುರದಲ್ಲಿ ಲಾಠಿಪ್ರಹಾರದ ವಿರುದ್ಧ ಪ್ರತಿಭಟನೆ



ಇದ್ದದ್ದು ಇದ್ದಾಂಗ....

...ಸದನದ ಘನತೆ, ಗೌರವ ಎತ್ತಿ ಹಿಡಿಯುತ್ತಲೇ ...ಂದ, ಆದರ್ಶ ಸಂಸದರಾಗಿದ್ದ ಸೋಮನಾಥ ...ಟರ್ಜಿ ಅದೇ ರೀತಿ ಪಕ್ಷದ ನಿಲುವನ್ನು ಏಕೆ ಎತ್ತಿ ...ಡಿಯಲಿಲ್ಲ? ಕಾಲವೇ ಉತ್ತರ ಹೇಳಬೇಕು.

– ಎ.ಎಸ್.ನಾರಾಯಣರಾವ್
'ಪ್ರಜಾವಾಣಿ' ಲೇಖನವೊಂದರಲ್ಲಿ

★

ಬಡವರಿಗೆ ಬರೆ

ಕಡಿಮೆ ಸಂಪಾದನೆಯ ಕೂಲಿ ಕಾರ್ಮಿಕರು, ...ಡವರಿಗೆ ಸಾರಾಯಿಯೇ ದುಬಾರಿ ಆಗಿತ್ತು. ...ರಾಯಿ ನಿಷೇಧದ ನಂತರ ಕುಡಿತದ ಚಟದಿಂದ ...ೂರ ಬರಲಾಗದವರು ಬಾಟ್ಲಿ ಮದ್ಯ ಕುಡಿಯುವ ...ಭ್ಯಾಸ ಬೆಳೆಸಿಕೊಂಡು ತಮ್ಮ ಸಂದಾಪನೆಯನ್ನೆಲ್ಲಾ ...ದಕ್ಕೆ ವೆಚ್ಚ ಮಾಡುತ್ತಿದ್ದಾರೆ. ಇದರಿಂದ ಕೆಲವು ...ಟುಂಬಗಳು ತೀವ್ರ ಕಷ್ಟದಲ್ಲಿವೆ. ಇದನ್ನು ...ಮನಿಸದೆ ಸರ್ಕಾರ ಬಾಟಲಿ ಮದ್ಯ ಮಾರಾಟಕ್ಕೆ ...ನುಮತಿ ನೀಡುವ ನಿರ್ಧಾರ ತೆಗೆದುಕೊಂಡು ...ಡವರಿಗೆ ಬರೆ ಹಾಕಲು ಹೊರಟಿದೆ.

– ಜಿ.ನಾಗೇಂದ್ರ ಕುದುರೆ ಮುಖ

★

ಮತ್ತೆ ಹಿರೋಶಿಮಾ ನೆನಪು

.....ಹನ್ನೆರಡು ವರ್ಷದವಳಾಗಿದ್ದ ಮಿಯಾಕೊ ...ದೆಯುತ್ತಾಳೆ: 'ಅದು ಪ್ರಕಾಶಮಾನವಾದ ಬೆಳಗು ...ಕ್ಷಣವೇ ರಾತ್ರಿಯಾಯಿತು. ನಾನು ಕಣ್ತೆರೆದಾಗ ನನ್ನ ...ತತಿಯರಾರೂ ಕಾಣದಾದರು. ಕೊಳೆಯಾದ ನನ್ನ ...ಳಿಯ ಚಡ್ಡಿ ಮಾತ್ರ ನನ್ನ ಮೈಮೇಲಿತ್ತು. ಸುಟ್ಟ ...ಯಗಳ ವಿರೂಪಗೊಂಡ, ಅಮಾನುಷ ನೋವಿನ ...ನ್ನ ದೇಹವನ್ನು ಹೇಗೊ ಎತ್ತಿಕೊಂಡು ಮನೆಯ ನೆನಪಾಗಿ ಓಡತೊಡಗಿದೆ. ಆದರೆ ಆ ನನ್ನ ಪ್ರೀತಿಯ ಮನೆ ಎಲ್ಲಿದೆ? ನನ್ನ ಅಮ್ಮ ಎಲ್ಲಿದ್ದಾಳೆ? ಅಲ್ಲಿಗೆ ಕೊಂಡೊಯ್ಯುವ ದಾರಿ ಎಲ್ಲಿದೆ? ಒಂದೂ ತಿಳಿಯದಾಗಿತ್ತು. ಜನರು ಬೆತ್ತಲೆಯಾಗಿ ದಿಕ್ಕೆಟ್ಟು ಓಡುತ್ತಿದ್ದರು. ಅವರೆಲ್ಲ ಯಾವುದೋ ನರಕದಿಂದ ಬಂದ ಪ್ರೇತಗಳಂತೆ ಬಿಳಿಚಿಕೊಂಡು ವಿಕಾರವಾಗಿ ಕಿರುಚಿತ್ತ ಸುಟ್ಟ ಗಾಯದ ಉರಿಯನ್ನು ತಾಳಲಾರದೆ ನದಿಯತ್ತ ಓಡುತ್ತಿದ್ದರು. ಅದು ನರಕದ ನದಿಯಾಗಿತ್ತು. ನೀರಿಗೆ ಹಾರಿದ ಜನರಿಂದ ನದಿ ತುಂಬಿ ಹೋಗಿತ್ತು. ವಿರೂಪಗೊಂಡ ರಾಶಿ ರಾಶಿ ಶವಗಳು ನೀರಿನಲ್ಲಿ ತೇಲಿ ಹೋಗುತ್ತಿದ್ದುವು. ತಮ್ಮ ದೇಹದುರಿ ನೀರಿಗೆ ಹಾರಿದರೆ ತುಸು ಕಡಿಮೆ ಆಗಬಹುದೆಂಬುದು ಅವರ ಭ್ರಮೆಯಾಗಿತ್ತು. ಏಕೆಂದರೆ ನದಿಯ ನೀರು ಬಿಸಿಯಾಗಿತ್ತು. ಏಕಕಾಲದಲ್ಲಿ ಬರಮಾಡಿಕೊಳ್ಳುತ್ತಿದ್ದ ಸಾವೂ ಅಲ್ಲಿ ಸುಸ್ತಾಗಿ ಸೋತು ಹೋಗಿತ್ತು. ನನ್ನ ಪ್ರೀತಿಯ ಹಿರೋಶಿಮಾ ಸಾವಿಗೂ ಅಸ್ಪೃಶ್ಯವಾಗಿತ್ತು. ಕಿತ್ತಳೆ ಬಣ್ಣದ ಬಿಸಿಲು ವಿಷವಾಗಿತ್ತು. ಯಾವ ಅಪರಾಧಕ್ಕಾಗಿ ಈ ಶಿಕ್ಷೆ ಎಂಬುದು ಕೊನೆಗೂ ನನಗೆ ನಿಗೂಢವಾಗಿ ಉಳಿಯಿತು. ಏಕೆಂದರೆ ಮೇಲೆ ನೋಡಿದಾಗ ಅಲ್ಲಿ ದೇವರು ಕಾಣಿಸಲಿಲ್ಲ'.

– ಹಿರೋಷಿಮಾನಗರ ಮೇಲೆ ಅಮೇರಿಕಾ ಅಣು ಬಾಂಬ್ ಹಾಕಿದಾಗಿನ ಅನುಭವ.
(ಪ್ರಜಾವಾಣಿ ಲೇಖನದಲ್ಲಿ ಉಲ್ಲೇಖಿತ)

★

ರಾಜಕಾರಣಿಯಾಗದೆ ರಾಜಕಾರಣ ಮಾಡುವುದೆಂದರೆ ಹೀಗೆ

ದೇಶದ ಬಡ ಮತ್ತು ಕೆಳಮಧ್ಯಮ ವರ್ಗ ಎಂದೂ ಮನಮೋಹನ್‌ಸಿಂಗ್ ಅವರ ಆರ್ಥಿಕ ಸುಧಾರಣೆಯ ಬೆಂಗಲಿಗರಾಗಿರಲಿಲ್ಲ. ಆದರೆ ಈಗ ಅವರ ಆರ್ಥಿಕ ಉದಾರೀಕರಣದ ಆರಾಧಕರಾದ ಮಧ್ಯಮವರ್ಗ ಕೂಡಾ ಸಿಡಿದೆದ್ದಿದೆ. ಪ್ರತಿಯೊಂದು ಕುಟುಂಬದ ತಿಂಗಳ ಬಜೆಟ್ ಅಸ್ತವ್ಯಸ್ತವಾಗತೊಡಗಿದೆ. ಮನೆಸಾಲದ ತಿಂಗಳ ಕಂತು ಏರುತ್ತಾ ಹೋಗಿ ಸ್ವಂತ ಮನೆಯಲ್ಲೇ ಶಾಂತಿ ಇಲ್ಲದಂತಾಗಿದೆ. ಕೈಗೆಟುಕುವಂತಿದ್ದ ವಿಮಾನಯಾನದಂತಹ ಸುಖ ಕೂಡಾ ಮತ್ತೆ ಗಗನ ಕುಸುಮವಾಗಿದೆ. ಎಡಪಕ್ಷಗಳ ನಿರ್ಗಮನದ ನಂತರ ಕಾಂಗ್ರೆಸ್ ಕಾರ್ಯಸೂಚಿಯಲ್ಲಿ 'ಆಮ್ ಆದ್ಮಿ' ಕೂಡಾ ಮರೆಯಾಗಿ ಹೋಗಿದ್ದಾನೆ. ನೆನೆಗುದಿಗೆ ಬಿದ್ದಿರುವ ಆರ್ಥಿಕ ಸುಧಾರಣೆಗಳ ಶೀಘ್ರ ಅನುಷ್ಠಾನದ ಬಗ್ಗೆ ಸರ್ಕಾರ ಅವಸರ ತೋರುತ್ತಿದೆ. ಹಳಿ ತಪ್ಪಿರುವ ಆರ್ಥಿಕತೆ ಉಳಿದಿರುವ ಏಳೆಂಟು ತಿಂಗಳಲ್ಲಿ ಸರಿದಾರಿ ಹಿಡಿಯಬಹುದೇ?

ದಿನೇಶ್ ಅಮೀನ ಮಟ್ಟು, 'ದೆಹಲಿ ನೋಟ' ಅಂಕಣದಲಿ

★

ಆತ್ಮಹತ್ಯೆಯೋ, ಹತ್ಯಾಪರ್ವವೋ?

ನಮ್ಮ ಸಂಘಟನೆ ಆತ್ಮಹತ್ಯಾದಳ ರಚಿಸಿಕೊಂಡಿದ್ದು 1130 ಮಂದಿ ಆತ್ಮಹತ್ಯೆ ದಾಳಿಕೋರರಿದ್ದಾರೆ. ದೇಶದ್ರೋಹಿಗಳನ್ನು ನಾಶ ಮಾಡುವ ಸಲುವಾಗಿ ನಾವು ಆತ್ಮಹತ್ಯಾ ಧಾಳಿಕೋರರ ದಳವನ್ನು ಆರಂಭಿಸಿದ್ದೇವೆ. ಸಮಾಜ ವಿರೋಧಿಗಳ ಮೇಲೆ ಧಾಳಿ ನಡೆಸುತ್ತೇವೆ. ಹೆಸರಿಗಷ್ಟೇ ನಮ್ಮದು ಆತ್ಮಹತ್ಯಾದಳ. ಆದರೆ ನಾವು ಇತರರ ಆತ್ಮವನ್ನು ಹತ್ಯೆ ಮಾಡುವ ಕೆಲಸ ಮಾಡುತ್ತೇವೆ. ಕಳೆದ 6 ವರ್ಷಗಳಿಂದ ಹತ್ಯೆಯಾಗಿ ಸಾಕಾಗಿದೆ. ಇನ್ನೇನಿದ್ದರೂ ಹತ್ಯೆಯ ಪರ್ವ"

– ಪ್ರಮೋದ್ ಮುತಾಲಿಕ್
ರಾಷ್ಟ್ರೀಯ ಹಿಂದೂ ಸೇನೆಯ ರಾಜ್ಯಾಧ್ಯಕ್ಷ

★

ಮನೋರಂಜನೆ ಮತ್ತು ಇಂಧನ

"ಇರಾಕ್ ಯುದ್ಧದಲ್ಲಿ ತೊಡಗಿರುವ ತನ್ನ ಸೈನಿಕರ ಮನೋರಂಜನೆ ಹಾಗೂ ತನ್ನ ವಿಮಾನಗಳಿಗೆ ಇಂಧನ ಪೂರಣ ಮಾಡುವುದಕ್ಕಾಗಿ ಅಮೇರಿಕವು ಭಾರತವನ್ನು ಸೇನಾ ನೆಲೆಯನ್ನಾಗಿ ಪರಿವರ್ತಿಸಲು ಇಚ್ಛಿಸಿದೆ."

- ಬೃಂದಾ ಕಾರಟ್
ಸಿಪಿಐ(ಎಂ) ಪೊಲಿಟ್ ಬ್ಯುರೋ ಸದಸ್ಯರು

★

ಮೂರನೇ ಶಕ್ತಿ ಬಲವರ್ಧನೆಗೊಳ್ಳಲಿದೆ

"ಜನವಿರೋಧಿ ನವ ಉದಾರೀಕರಣ ನೀತಿಗಳು ಹಾಗೂ ಕೋಮುವಾದ ಮತ್ತು ಸಾಮ್ರಾಜ್ಯಶಾಹಿ ನೀತಿಗಳಿಗೆ ವಿರೋಧಿಯಾದ ಮೂರನೇ ಶಕ್ತಿಯು ಉದಯಿಸಲಿದೆ. ಮತ್ತು ಮೂರನೇ ಶಕ್ತಿಯ ಬಲವರ್ಧನೆಯು ದೇಶದಲ್ಲಿ ಕಾಂಗ್ರೆಸ್ ನೇತೃತ್ವದ್ದು ಒಂದು, ಬಿಜೆಪಿ ನೇತೃತ್ವದ ಮತ್ತೊಂದು ಹೀಗೆ ಎರಡೇ ರಾಜಕೀಯ ಒಕ್ಕೂಟ ಎನ್ನುವ ವಾದ ತಪ್ಪು ಎಂದು ಸಾಬೀತು ಮಾಡಲಿದೆ"

ಪ್ರಕಾಶ್ ಕಾರಟ್
ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ


★

ಕೊಂದಿದ್ದಕ್ಕೆ ವಿಷಾದವಾಗಿದೆ

"ರಾಜೀವ್ ಗಾಂಧಿಯವರನ್ನು ಕೊಂದಿದ್ದಕ್ಕಾಗಿ ನನಗೆ ವಿಷಾದವಾಗಿದೆ. ಮತ್ತು ಈ ಹತ್ಯೆಯ ಪ್ರಕರಣದಲ್ಲಿ ನಿಜವಾಗಿಯೂ ಹತ್ಯೆಯ ಸಂಚು ರೂಪಿಸಿದವರಿಗೆ ಶಿಕ್ಷೆಯಾಗಿಲ್ಲ"

ನಳಿನಿ ಶ್ರೀಹರನ್
ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಎಲ್‌ಟಿಟಿಇ ಕಾರ್ಯಕರ್ತೆ

★





...ರ್ನಾಟಕ ಪ್ರಾಂತ ರೈತ ಸಂಘದಿಂದ ವಿವಿಧೆಡೆ ಪ್ರತಿಭಟನೆ

ರಾಜ್ಯದ 84 ತಾಲ್ಲೂಕುಗಳಲ್ಲಿ ಸಹಜವಾಗಿ ...ಗಬೇಕಾದಷ್ಟು ಮಳೆ ಆಗದೆ ರೈತರು – ...ರ್ಮಿಕರು ಆತಂಕದಲ್ಲಿದ್ದಾರೆಂಬ ವರದಿಗಳು ...ರುತ್ತಿವೆ. ರಾಜ್ಯದ ಪ್ರಮುಖ ಜಲಾಶಯಗಳು ...ರ್ತಿಯಾಗದೆ ಮುಂದೆ ನೀರಿನ ಕೊರತೆ ...ಮ್ಯಶ್ ಅಭಾವದ ಸಾಧ್ಯತೆಗಳು ಕಾಣುತ್ತಿದೆ.

ಮಧ್ಯೆ ರಾಜ್ಯದ ಕೆಲವು ಭಾಗಗಳಲ್ಲಿ ಮೂರು–ನಾಲ್ಕು ದಿನ ಮಳೆ ಸುರಿದು, ಮತ್ತೆ ಮಾಯವಾಗಿದೆ. ರಾಜ್ಯದಲ್ಲಿ ಹಲವೆಡೆ ಬರದ ಛಾಯೆ ಕಾಣಿಸಿಕೊಳ್ಳುತ್ತಿದೆ.

ಇಷ್ಟೇಲ್ಲಾ ಆದರೂ ಸರ್ಕಾರ ಏನು ಮಾಡಿತು ..? ಧಾರವಾಡ, ಗದಗ ಜಿಲ್ಲೆಗಳಲ್ಲಿ ಕೆಲವೆಡೆ ಮೋಡ ಬಿತ್ತನೆ ಅಂತೇನೋ ಒಂದಿಷ್ಟು ಸುದ್ದಿ ಯಾಯಿತು. ಈಗ ಮೋಡ ಬಿತ್ತನೆ ಸುದ್ದಿಯೂ, ಮಳೆ ನಿಂತಂತೆ ನಿಂತಿದೆ.

ಸರ್ಕಾರಕ್ಕೆ ಈ ಪರಿಸ್ಥಿತಿಯ ಬಗೆಗೆ ಎಚ್ಚರವಿದೆಯೋ ಇಲ್ಲವೋ. ಆದರೆ ರಾಜ್ಯದ ರೈತ ಚಳುವಳಿ ಸುಮ್ಮನಿಲ್ಲ. ಇಂತಹ ಪ್ರಶ್ನೆಯನ್ನು ಕೈಗೆತ್ತಿಕೊಂಡಿದೆ. ಬಿಜಾಪುರ, ರಾಯಚೂರು ಹಾಗೂ ಗುಲ್ಬರ್ಗಾ ಮುಂತಾದೆಡೆ ಬರ ಪರಿಹಾರ ... ಾಗಿ, ನೀರಾವರಿ ಯೋಜನೆಗಳ ಜಾರಿಗಾಗಿ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಗಳನ್ನು ನಡೆಸಲಾಗಿದೆ. ಇದು ಒಂದು ಗಂಭೀರ ಆಂದೋಲನವಾಗಿ ಮೂಡಿಬರುತ್ತಿದೆ.

○

JANASHAKTHI KANNADA VARA PATRIKE AUGUST 17, 2008 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09

ಬೀಜಿಂಗ್ ಒಲಂಪಿಕ್ಸ್ ಉದ್ಘಾಟನೆ

ಕ್ರೀಡೆಯ ದುಸ್ಥಿತಿ: ಭಾರತದ ಸ್ಪರ್ಧಿಗಳು ಬೀಜಿಂಗ್ ಒಲಂಪಿಕ್ಸ್‌ನಲ್ಲಿ ಬಹಳಷ್ಟು ಪದಕಗಳನ್ನು ಗೆದ್ದು ತರಲಿ ಎಂದು ನಾನು ಆಶಿಸುತ್ತೇನೆ. ಆದರೆ ವಾಸ್ತವ ಎಂದರೆ ನಾವಿನ್ನೂ ಒಲಂಪಿಕ್ಸ್‌ನಂತಹ ಜಾಗತಿಕ ಸ್ಪರ್ಧೆಗೆ ಸಜ್ಜಾಗಿಲ್ಲ. ನಮ್ಮ ವಾರ್ಷಿಕ ಕ್ರೀಡಾ ಬಜೆಟ್, ಅಮೇರಿಕಾದಲ್ಲಿ ಮುಂಚೂಣಿಯ ಹತ್ತು ಕ್ರೀಡಾಪಟುಗಳ ಬಜೆಟ್‌ಗಿಂತಲೂ ಕಡಿಮೆ ಇದೆ. ಈ ನಿಟ್ಟಿನಲ್ಲಿ ನಮ್ಮ ಹಣಕಾಸು ಮಂತ್ರಿಗಳು ಏನನ್ನಾದರೂ ಮಾಡಬೇಕೆಂದು ನಾನು ವಿನಯಪೂರ್ವಕವಾಗಿ ವಿನಂತಿಸುತ್ತೇನೆ. ಈಗಿನದಕ್ಕಿಂತ ಕನಿಷ್ಟ 10 ಪಟ್ಟು ದೊಡ್ಡ ಕ್ರೀಡಾ ಬಜೆಟ್ ನಮಗೆ ಬೇಕಾಗಿದೆ."

– ಕಪಿಲ್ ದೇವ್, ಖ್ಯಾತ ಕ್ರಿಕೆಟ್ ಪಟು

'ವಾಹ್... ವಾಹ್... ಚೀನಾ' ಎಂದ ಜಗತ್ತು


ಬೇಜಿಂಗ್ ಒಲಿಂಪಿಕ್ಸ್ ಉದ್ಘಾಟನೆ ಅತ್ಯಂತ ಅರ್ಥಪೂರ್ಣ ಮತ್ತು ಅದ್ಭುತ ರೀತಿಯಲ್ಲಿ ಜರುಗಿದ್ದು, ಇಡೀ ಜಗತ್ತು 'ವಾಹ್..ವಾಹ್' ಎನ್ನುತ್ತಿದೆ. ಚೀನಾದ ಸರ್ಕಾರ, ಒಲಿಂಪಿಕ್ಸ್ ಸಮಿತಿ ಮತ್ತು ಜನತೆ ಸಫಲ ಬೇಜಿಂಗ್ ಒಲಿಂಪಿಕ್ಸ್ ಗಾಗಿ ಪಣ ತೊಟ್ಟು ಹಗಲು ರಾತ್ರಿ ದುಡಿದಿದ್ದರು. ಕಳೆದ ಎಂಟು ವರ್ಷಗಳಲ್ಲಿ ಬೇಜಿಂಗ್ ಒಲಿಂಪಿಕ್ಸ್ ಮೇಲೆ 43 ಶತಕೋಟಿ ಡಾಲರುಗಳು ಖರ್ಚಾದವು. ಇದರಲ್ಲಿ ಹೆಚ್ಚಿನ ಭಾಗ ದೇಶದ ಕ್ರೀಡಾ ಮತ್ತು ಇತರ ಮೂಲಸೌಕರ್ಯಗಳಿಗೆ ವೆಚ್ಚವಾಗಿದೆ. ಇದು ಚೀನಾದ ದೂರಗಾಮಿ ಬೆಳವಣಿಗೆಗೆ ನೆರವಾಗಲಿದೆ. 37 ಸ್ಥಳಗಳಲ್ಲಿ 16 ದಿನ ನಡೆಯಲಿರುವ ಒಲಿಂಪಿಕ್ಸ್ ಕ್ರೀಡೆಗಳಿಗೆ 10 ಸಾವಿರ ಕ್ರೀಡಾಪಟುಗಳಲ್ಲದೆ 20 ಸಾವಿರಕ್ಕೂ ಹೆಚ್ಚು ವಿದೇಶಿ ಪತ್ರಕರ್ತರು ಭೇಟಿ ನೀಡುತ್ತಿದ್ದಾರೆ. 70 ಸಾವಿರಕ್ಕೂ ಹೆಚ್ಚು ಸ್ವಯಂಸೇವಕರು ಕ್ರೀಡೆಗಳನ್ನು ಸುಗಮವಾಗಿ ನಡೆಸಲು ದುಡಿಯುತ್ತಿದ್ದಾರೆ. ಒಲಿಂಪಿಕ್ಸ್ ನಲ್ಲಿ ಅಮೆರಿಕಕ್ಕೆ ಇನ್ನೊಮ್ಮೆ ತನ್ನ ಪ್ರಥಮ ಸ್ಥಾನ ಕಳಕೊಳ್ಳುವ



ಬೆದರಿಕೆ ಬಂದಿದೆ. ಚೀನಾ ಆ ಸವಾಲು ಒಡ್ಡಿದೆ. ಹಿಂದೆ ಸೋವಿಯೆತ್ ಯೂನಿಯನ್ ಪ್ರಥಮ ಸ್ಥಾನವನ್ನು ಅಮೆರಿಕದಿಂದ ಕಸಿದು ಕೊಂಡಿತ್ತು.

ದೇಶದಾದ್ಯಂತ ಇದು ಕ್ರೀಡೆಗೆ ಭಾರೀ ಉತ್ತೇಜನೆ ನೀಡಿದ್ದಲ್ಲದೆ, ರಾಷ್ಟ್ರೀಯ ಸ್ವಾಭಿಮಾನ ಜಾಗೃತಗೊಳಿಸಿದೆ. ಜಗತ್ತಿಗೆ ಪೂರ್ಣವಾಗಿ ತೆರೆದುಕೊಳ್ಳುವ, ಆತ್ಮವಿಶ್ವಾಸದಿಂದ ಜಗತ್ತಿನೊಂದಿಗೆ ವ್ಯವಹರಿಸುವ, ಜಗತ್ತಿನ ಆಗು ಹೋಗುಗಳಲ್ಲಿ ತನ್ನ ಪಾತ್ರ ನಿರ್ವಹಿಸುವ ಹೊಸ ಚೀನಾ ರೂಪಿಸುವುದರಲ್ಲಿ ಬೇಜಿಂಗ್ ಒಲಿಂಪಿಕ್ಸ್ ಪಾತ್ರ ದೊಡ್ಡದು. ಜಗತ್ತಿನ ಜನಮಾನಸದಲ್ಲಿ (ಮುಖ್ಯವಾಗಿ ಸಾಮ್ರಾಜ್ಯಶಾಹಿ ಅಪಪ್ರಚಾರದಿಂದ) ಚೀನಾದ ಬಗ್ಗೆ ಇದ್ದ ತಪ್ಪು ಮಾಹಿತಿ-ಭಾವನೆಗಳು, ಗೊಂದಲಗಳು, ತಿರಸ್ಕಾರ, ದ್ವೇಷವನ್ನು ಹೋಗಲಾಡಿಸಿ, ಚೀನಾದ ಪರಂಪರೆ, ಬೆಳವಣಿಗೆಯ ಸಾಧನೆಗಳನ್ನು ಬಿಂಬಿಸಲು ಚೀನಾ ಈ ಅವಕಾಶವನ್ನು ಬಳಸಿದೆ. ಬೇಜಿಂಗ್ ಒಲಿಂಪಿಕ್ಸ್ ಗೆ ಅಡೆ ತಡೆ ಒಡ್ಡಲು ಪ್ರಯತ್ನಿಸಿದ ಪ್ರತಿಗಾಮಿ ಶಕ್ತಿಗಳಿಗೆ ಚೀನಾ ಬೆದರಲಿಲ್ಲ. ಸುಡಾನ್ ಜತೆ ಸಂಬಂಧಕ್ಕೆ ಪ್ರತಿಭಟನೆಯಾಗಿ ಹಾಲಿವುಡ್ ಡೈರೆಕ್ಟರ್ ಸ್ಪೀಲ್‌ಬರ್ಗ್ ಬಹಿಷ್ಕಾರ, ಟಿಬೆಟ್ ಸ್ವಾತಂತ್ರ್ಯದ ಬೆಂಬಲಿಗರಿಂದ ಒಲಿಂಪಿಕ್ಸ್ ಜ್ಯೋತಿಯಾತ್ರೆಗೆ ಹಿಂಸಾತ್ಮಕ ತಡೆ, ಬೆಜಿಂಗ್ ಹವಾಮಾನ







ಮಾಲಿನ್ಯದ ನೆಪ ಹೂಡಿ ಕೆಲವು ಪ್ರಮುಖ ಕ್ರೀಡಾ ಪಟುಗಳ ಬಹಿಷ್ಕಾರ, ಬುಶ್-ಸಾರ್ಕೊಜಿ ಸೇರಿದಂತೆ ಹಲವು ನಾಯಕರು (ಒಂದಲ್ಲ ಒಂದು ನೆಪ ಮಾಡಿ) ಉದ್ಘಾಟನೆ ಬಹಿಷ್ಕಾರದ ಬೆದರಿಕೆಯ 'ನಖ್ರಾ' - ಇವು ಬಂದ ಕೆಲವು ವಿಘ್ನಗಳು. ಇವೆಲ್ಲವನ್ನೂ ಧೃಢತೆಯಿಂದ ಎದುರಿಸಿದೆ. ಈ ರೀತಿಯಲ್ಲಿ ಬೇಜಿಂಗ್ ಒಲಿಂಪಿಕ್ಸ್ ಗೆ ಕ್ರೀಡೆಗಿಂತ ಹೆಚ್ಚಿನ ಮಹತ್ವ ಇದೆ.

■ ಶರತ್‌ಚಂದ್ರ





ಪದಕಗಳ ಬೇಟೆ

ಪತ್ರಿಕೆ ಮುದ್ರಣಕ್ಕೆ ಹೋಗುವ ಹೊತ್ತಿಗೆ ಬೀಜಿಂಗ್ ಒಲಂಪಿಕ್ಸ್ ಮಹಾಕ್ರೀಡಾ ಜಾತ್ರೆಯಲ್ಲಿ ಪದಕಗ್ಳ ಬೇಟೆ ಬಿರುಸಾಗಿಯೇ ಸಾಗಿತ್ತು.

ಹಲವು ಕ್ರೀಡಾ ತಜ್ಞರು ನಿರೀಕ್ಷಿಸಿದಂತೆ ಚೀನಾ ದೇಶ 2 ಚಿನ್ನದ ಪದಕದೊಂದಿಗೆ ಮೊದಲ ಸ್ಥಾನದಲ್ಲಿತ್ತು. ಒಂದು ಚಿನ್ನದೊಂದಿಗೆ ಅಮೆರಿಕಾ ಎರಡನೇ ಸ್ಥಾನದಲ್ಲಿದ್ದರೂ ಒಟ್ಟು ಪದಕಗಳ ಲೆಕ್ಕದಲ್ಲಿ ಮುಂದೆ ಇತ್ತು. ಸ್ಪೇನ್ ದೇಶ ಒಂದು ಚಿನ್ನದ ಪದಕ ಪಡೆದಿದ್ದರೆ, ಚೆಕ್ ಗಣರಾಜ್ಯವು ಕ್ರೀಡಾ ಕೂಟದ ಮೊದಲ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿತ್ತು.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH